ಸೋಮವಾರ, ಫೆಬ್ರುವರಿ 19, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 50 | ಪುಟ 14
● www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಪ್ರತಿಭಾನ್ವಿತರಿಗೆ ಅಮೆರಿಕ ವಿ.ವಿಗಳಲ್ಲಿ ಮುಕ್ತ ಪ್ರವೇಶ

ಪ್ರಜಾವಾಣಿ ಸಂದರ್ಶನ 9
ಬಿಜೆಪಿ ಜತೆ ಸೇರಲು ಟಿಡಿಪಿ ಆಸಕ್ತಿ? 7
‘5,800 ಬಸ್ ಖರೀದಿಗೆ ಯೋಜನೆ’ 6
ವದಂತಿ ಅಲ್ಲಗಳೆದ ಜಿತು ಪಟ್ವಾರಿ
‘ಕಮಲ್ ನಾಥ್ ಪಕ್ಷ ತ್ಯಜಿಸಲ್ಲ’ 7

ಲೋಕಸಭಾ ಚುನಾವಣೆ: ಮಲ್ಲಿಕಾರ್ಜುನ ಖರ್ಗೆ– ಕೇಜ್ರಿವಾಲ್ ಮಾತುಕತೆ

‘ಕೈ’ ಗೆ ಸೀಟು: ಎಎಪಿ ಮೃದು?

● ಶೆಮಿನ್ ಜಾಯ್

ನವದೆಹಲಿ: ದೆಹಲಿಯಲ್ಲಿ ಸೀಟು ಹಂಚಿಕೆಗೆ ಸಂಬಂಧಿಸಿದ ಮಾತುಕತೆ ವಿಚಾರವಾಗಿ ನಿರ್ಮಾಣವಾಗಿರುವ ಬಿಕ್ಕಟ್ಟನ್ನು ನಿವಾರಿಸಿಕೊಳ್ಳುವತ್ತ ಕಾಂಗ್ರೆಸ್ ಮತ್ತು ಎಎಪಿ ಮುಂದಡಿ ಇರಿಸಿವೆ. ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾನುವಾರ ಚರ್ಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ದೆಹಲಿಯಲ್ಲಿ ತಾನು ಒಂದು ಕ್ಷೇತ್ರವನ್ನು ಮಾತ್ರವೇ ಕಾಂಗ್ರೆಸ್ಸಿಗೆ ಬಿಟ್ಟುಕೊಡಲು ಸಾಧ್ಯ ಎಂದು ಎಎಪಿ ಈ ಹಿಂದೆ ಹೇಳಿತ್ತು. ಕಾಂಗ್ರೆಸ್ ಮುಖಂಡ, ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ಆಯೋಜಿಸಿದ್ದ ಔತಣಕೂಟದಲ್ಲಿ ಕೇಜ್ರಿವಾಲ್ ಮತ್ತು ಖರ್ಗೆ ಅವರು ಭಾಗಿಯಾಗಿದ್ದರು.

ಕಾಂಗ್ರೆಸ್ಸಿಗೆ ಈಗ ಪರಿಸ್ಥಿತಿ ತೀರಾ ಅನುಕೂಲಕರವಾಗಿ ಇಲ್ಲ. ಪಕ್ಷದ ಮುಖಂಡ ಕಮಲ್ ನಾಥ್ ಅವರ ಮುಂದಿನ ನಡೆ ಏನಿರುತ್ತದೆ ಎಂಬುದನ್ನು ಕಾಂಗ್ರೆಸ್ ಕಾದು ನೋಡುತ್ತಿದೆ. ನಾಥ್ ಅವರು ಬಿಜೆಪಿ ಸೇರಲಿದ್ದಾರೆ ಎಂಬ ವರದಿಗಳು ಇವೆ. ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಹಾಗೂ ಮಧ್ಯಪ್ರದೇಶದ ಉಸ್ತುವಾರಿ ಜಿತೇಂದ್ರ ಸಿಂಗ್ ಅವರು ನಾಥ್ ಅವರ ಜೊತೆ ನಿರಂತರವಾಗಿ ಸಂಪರ್ಕದಲ್ಲಿದ್ದಾರೆ. ಆದರೆ, ನಾಥ್ ಅವರು ತಮ್ಮ ನಡೆಯ ಬಗ್ಗೆ ಗುಟ್ಟು ಬಿಟ್ಟುಕೊಡುತ್ತಿಲ್ಲ ಎಂದು ಮೂಲಗಳು ಹೇಳಿವೆ.

ಸುದ್ದಿಗಾರರ ಜೊತೆ ಮಾತನಾಡಿದ ಸಜ್ಜನ್ ಸಿಂಗ್ ವರ್ಮ ಅವರು, ‘ತಮ್ಮ ಗಮನವು ಈಗ ಲೋಕಸಭಾ ಚುನಾವಣೆಯ ಮೇಲೆ ಇದೆ. ಜಾತಿ ಸಮೀಕರಣದ ಮೇಲೆ ಗಮನ ಹರಿಸಿರುವುದಾಗಿ ಕಮಲ್ ನಾಥ್ ನನ್ನಲ್ಲಿ ಹೇಳಿದ್ದಾರೆ. ಅಲ್ಲದೆ, ಪಕ್ಷ

ಕಾಂಗ್ರೆಸ್ ಮುಖಂಡ ಅಭಿಷೇಕ್ ಮನು ಸಿಂಘ್ವಿ ಅವರ ಮನೆಯಲ್ಲಿ ಅರವಿಂದ ಕೇಜ್ರಿವಾಲ್ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರು ಭಾನುವಾರ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ಬಿಡುವ ಆಲೋಚನೆಯನ್ನು ಮಾಡಿಲ್ಲ ಎಂದು ಕೂಡ ಅವರು ಹೇಳಿದ್ದಾರೆ’ ಎಂದು ತಿಳಿಸಿದರು. ವರ್ಮ ಅವರು ಕಮಲ್ ನಾಥ್ ಅವರ ಆಪ್ತ.

ಕಾಂಗ್ರೆಸ್ ಮುಖಂಡ, ಸಂಸದ ಮನೀಶ್ ತಿವಾರಿ ಹಾಗೂ ಮುಖಂಡ ನವಜೋತ್ ಸಿಂಗ್ ಸಿಧು ಅವರು ಕಾಂಗ್ರೆಸ್ ತೊರೆದು ಬಿಜೆಪಿ ಸೇರಲಿದ್ದಾರೆ ಎಂಬ ವರದಿಗಳು ಪಕ್ಷದಲ್ಲಿ ಆತಂಕ ಮೂಡಿಸಿದವು. ಆದರೆ ತಿವಾರಿ ಅವರು ತಾವು ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಟೀಕಿಸಿ ಈಚೆಗೆ ಮುಕ್ತಾಯಗೊಂಡ ಬಜೆಟ್ ಅಧಿವೇಶನದಲ್ಲಿ ಮಾಡಿದ ಭಾಷಣಗಳನ್ನು ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ದೆಹಲಿಯಲ್ಲಿ ಮೂರು ಲೋಕಸಭಾ ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯುವ ಬಯಕೆಯು ಕಾಂಗ್ರೆಸ್ಸಿಗೆ ಇದೆ. ಅಲ್ಲಿ ಒಂದು ಸ್ಥಾನವನ್ನು ಮಾತ್ರ ಕಾಂಗ್ರೆಸ್ಸಿಗೆ ಬಿಟ್ಟುಕೊಡಲು ಸಾಧ್ಯ ಎಂದು ಎಎಪಿ ಹೇಳಿರುವುದು ಒತ್ತಡ ತರುವ ತಂತ್ರ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

7ನೇ ಪುಟ ನೋಡಿ

ಅಭಿವೃದ್ಧಿಗಾಗಿ ಬಿಜೆಪಿಗೆ ಸ್ಪಷ್ಟ ಬಹುಮತ ಕೊಡಿ: ಮೋದಿ

ನವದೆಹಲಿ (ಪಿಟಿಐ): ‘ಅಭಿವೃದ್ಧಿ ಹೊಂದಿದ ಭಾರತವನ್ನು ರೂಪಿಸುವ ಗುರಿಯನ್ನು ಈಡೇರಿಸಲು ಭಾರಿ ಬಹುಮತದಿಂದ ಬಿಜೆಪಿಯು ಅಧಿಕಾರಕ್ಕೆ ಮರಳುವುದು ಅಗತ್ಯ’ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

‘ವಿಕಸಿತ ಭಾರತ ನಿರ್ಮಾಣ ಬಿಜೆಪಿಯಿಂದ ಮಾತ್ರವೇ ಸಾಧ್ಯ. ವಿರೋಧ ಪಕ್ಷಗಳಿಗೆ ಈ ಕುರಿತು ಸ್ಪಷ್ಟ ಕಾರ್ಯಸೂಚಿ ಇಲ್ಲವಾಗಿದೆ’ ಎಂದು ಭಾನುವಾರ ಇಲ್ಲಿ ನಡೆದ ಪಕ್ಷದ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಮೋದಿ ಅಭಿಪ್ರಾಯಪಟ್ಟರು.

11 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ, ವಿರೋಧ ಪಕ್ಷಗಳ ವಿರುದ್ಧ, ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. ‘ಕಾಂಗ್ರೆಸ್ ಪಕ್ಷ ಕೇವಲ ಹುಸಿ ಭರವಸೆಗಳನ್ನು ನೀಡುತ್ತಿದೆ. ಆದರೆ, ದೇಶವನ್ನು ಅಭಿವೃದ್ಧಿಯ ಹಾದಿಯಲ್ಲಿ ಕೊಂಡೊಯ್ಯಲು ನಿರ್ದಿಷ್ಟ ಕಾರ್ಯಸೂಚಿಯನ್ನೇ ಹೊಂದಿಲ್ಲ’ ಎಂದು ಟೀಕಿಸಿದರು.

7ನೇ ಪುಟ ನೋಡಿ

ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಾಲಾರ್ಪಣೆ ಮಾಡಲಾಯಿತು. ಪಕ್ಷದ ನಾಯಕರಾದ ರಾಜನಾಥ್ ಸಿಂಗ್, ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಅಮಿತ್ ಶಾ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಮಹಾಭಾರತದಲ್ಲಿ ಕೌರವರು, ಪಾಂಡವರಿದ್ದಂತೆ ಈಗಲೂ ಎರಡು ಗುಂಪುಗಳಿವೆ. ಅಭಿವೃದ್ಧಿ ಚಿಂತನೆಯ ಗುಂಪಿಗೆ ಮೋದಿ ನಾಯಕತ್ವವಿದ್ದರೆ, ಕುಟುಂಬ ನಾಯಕತ್ವದ ಮೈತ್ರಿಗೆ ರಾಹುಲ್ ನಾಯಕತ್ವವಿದೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಸಂಭ್ರಮ ಏಷ್ಯಾ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದು ಐತಿಹಾಸಿಕ ದಾಖಲೆ ಮಾಡಿದ ಭಾರತ ಮಹಿಳಾ ಬ್ಯಾಡ್ಮಿಂಟನ್ ತಂಡದ ಸಂಭ್ರಮ –ಎಎಫ್‌ಪಿ ಚಿತ್ರ

ಟೆಸ್ಟ್ ಕ್ರಿಕೆಟ್ ಭಾರತಕ್ಕೆ ‘ಬೃಹತ್’ ಜಯ

ರಾಜ್‌ಕೋಟ್: ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಭಾನುವಾರ ಇಂಗ್ಲೆಂಡ್ ವಿರುದ್ಧ ಭರ್ಜರಿ ಜಯ ಸಾಧಿಸಿತು. ಇದರೊಂದಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ‘ಬೃಹತ್’ ಅಂತರದ ರನ್‌ಗಳ ಜಯ ದಾಖಲಿಸಿತು.

434 ರನ್ ಇಂಗ್ಲೆಂಡ್ ವಿರುದ್ಧ ಭಾರತದ ಜಯದ ಅಂತರ

ಸ್ಕೋರ್	ಭಾರತ	ಇಂಗ್ಲೆಂಡ್
	445 ಮತ್ತು 4ಕ್ಕೆ430ಡಿಕ್ಲೇರ್ಡ್	319 ಮತ್ತು 122

ಯಶಸ್ವಿ ಜೈಸ್ವಾಲ್

ಅಜೇಯ **214** ಯಶಸ್ವಿ ಜೈಸ್ವಾಲ್ ಸತತ ಎರಡು ಟೆಸ್ಟ್‌ಗಳಲ್ಲಿ ದ್ವಿಶತಕ ಗಳಿಸಿದ ಮೂರನೇ ಆಟಗಾರ. ವಿನೋದ್ ಕಾಂಬ್ಳಿ ಮತ್ತು ವಿರಾಟ್ ಕೊಹ್ಲಿ ಮೊದಲೆರಡು ಸ್ಥಾನಗಳಲ್ಲಿದ್ದಾರೆ

557 ರನ್, ಭಾರತವು ಎದುರಾಳಿ ತಂಡಕ್ಕೆ ನೀಡಿದ ಎರಡನೇ ಅತಿ ದೊಡ್ಡ ಗೆಲುವಿನ ಗುರಿ

ರವೀಂದ್ರ ಜಡೇಜ

41ಕ್ಕೆ5 ರವೀಂದ್ರ ಜಡೇಜ ಟೆಸ್ಟ್ ಕ್ರಿಕೆಟ್‌ನಲ್ಲಿ 13ನೇ ಸಲ ಐದು ವಿಕೆಟ್ ಗೊಂಚಲು ಗಳಿಸಿದರು

ಪುಟ 11

ಪರಿಹಾರಕ್ಕೆ ವಿಳಂಬ ಬೇಡ: ರೈತರ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಚಂಡೀಗಢ/ಲೂಧಿಯಾನ (ಪಿಟಿಐ): ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿಪಡಿಸುವ ಕಾನೂನು ತರುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರೈತರು ಆರನೇ ದಿನವಾದ ಭಾನುವಾರವೂ ಪಂಜಾಬ್ ಮತ್ತು ಹರಿಯಾಣದ ನಡುವಿನ ಗಡಿಯಾದ ಶಂಭು ಮತ್ತು ಖಾನೌರಿಯಲ್ಲಿ ಪ್ರತಿಭಟನೆ ಮುಂದುವರಿಸಿದರು.

‘ರೈತರ ಬೇಡಿಕೆಗಳ ಈಡೇರಿಸಲು ಕೇಂದ್ರ ಸರ್ಕಾರ ಅನಗತ್ಯ ವಿಳಂಬ ಮಾಡಬಾರದು. ಲೋಕಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆ ಜಾರಿಗೂ ಮುನ್ನವೇ ಬೇಡಿಕೆಗಳ ಈಡೇರಿಕೆಗೆ ಒಪ್ಪಿಗೆ ನೀಡಬೇಕು’ ಎಂದು ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೇವಾಲ್ ಸರ್ಕಾರವನ್ನು ಆಗ್ರಹಿಸಿದರು.

ಮೂರು ದಿನ ಘೇರಾವ್: ಇದರ ನಡುವೆ, ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರದ ಮೇಲೆ ಒತ್ತಡ ಹೇರಲು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ನೇತೃತ್ವದಲ್ಲಿ ಮಂಗಳವಾರದಿಂದ ಮೂರು ದಿನ ಪಂಜಾಬ್‌ನ ಬಿಜೆಪಿ ನಾಯಕರ ನಿವಾಸಗಳಿಗೆ ರೈತರು ಘೇರಾವ್ ಹಾಕಲಿದ್ದಾರೆ ಎಂದು ಮೋರ್ಚಾದ ಮುಖಂಡರು ತಿಳಿಸಿದ್ದಾರೆ.

ಕೇಂದ್ರದ ಜತೆ 4ನೇ ಸುತ್ತಿನ ಸಭೆ: ರೈತ ಸಂಘಗಳ ವಿವಿಧ ಬೇಡಿಕೆಗಳ ಕುರಿತು ಕೇಂದ್ರ ಸಚಿವರ ಸಮಿತಿಯು ಭಾನುವಾರ ರಾತ್ರಿ ರೈತ ಮುಖಂಡರ ಜತೆಗೆ ನಾಲ್ಕನೇ ಸುತ್ತಿನ ಮಾತುಕತೆ ನಡೆಸಿತು.

ಕೃಷಿ ಮತ್ತು ರೈತ ಕಲ್ಯಾಣ ಸಚಿವ ಅರ್ಜುನ್ ಮುಂಡಾ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಮತ್ತು ಗೃಹ ವ್ಯವಹಾರಗಳ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದರು.

ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಕೂಡ ಸಭೆಯಲ್ಲಿ ಪಾಲ್ಗೊಂಡಿದ್ದರು.

ಗುಜರಿ ಮಳಿಗೆಯಲ್ಲಿ ಬೆಂಕಿ: ಮೂವರು ಸಜೀವ ದಹನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ರಾಮಸಂದ್ರದಲ್ಲಿರುವ ಗುಜರಿ ಮಳಿಗೆಯೊಂದರಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಮಳಿಗೆ ಮಾಲೀಕ ಸೇರಿ ಮೂವರು ಸಜೀವ ದಹನವಾಗಿದ್ದಾರೆ.

‘ಭಾನುವಾರ ಸಂಜೆ 5.30 ಗಂಟೆ ಸುಮಾರಿಗೆ ಈ ಅವಘಡ ಸಂಭವಿಸಿದೆ. ಚಿಕ್ಕಬಸ್ತಿ ನಿವಾಸಿ ಸಲೀಂ ಹಾಗೂ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ. 10 ವರ್ಷದ ಬಾಲಕ ಸೇರಿ ಐವರು ಗಾಯಗೊಂಡಿದ್ದಾರೆ. ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ’ ಎಂದು ಅಗ್ನಿಶಾಮಕ ದಳದ ಅಧಿಕಾರಿಯೊಬ್ಬರು ಹೇಳಿದರು.

‘ರಾಮಸಂದ್ರ ಬಸ್ ನಿಲ್ದಾಣ ಸಮೀಪದಲ್ಲಿರುವ ನಿವೇಶನದಲ್ಲಿ ಶೆಡ್ ನಿರ್ಮಿಸಿ ಗುಜರಿ ಮಳಿಗೆ ತೆರೆಯಲಾಗಿತ್ತು. ಗುಜರಿ ವಸ್ತುಗಳನ್ನು ಖರೀದಿಸುತ್ತಿದ್ದ ಮಾಲೀಕ ಸಲೀಂ, ಕಾರ್ಮಿಕರನ್ನು ಬಳಸಿಕೊಂಡು ವಸ್ತುಗಳನ್ನು ಬೇರ್ಪಡಿಸುತ್ತಿದ್ದರು. ನಂತರ, ಅದೇ ವಸ್ತುಗಳನ್ನು ಮರು ಬಳಕೆಗಾಗಿ ಬೇರೆಡೆ ಸಾಗಿಸುತ್ತಿದ್ದರು’ ಎಂದರು.

ಮತ್ತೊಂದು ಸುದ್ದಿ 3A

‘ಒಳಮೀಸಲಾತಿಗೆ ಸಂವಿಧಾನದಲ್ಲೇ ಅವಕಾಶ’ 6

ಚಿನಕುರಳಿ

ಪ್ರಕಾಶ್ ಶೆಟ್ಟಿ

‘ಪಿಎಂ ಉಷಾ’: ರಾಜ್ಯದ 2 ವಿ.ವಿಗೆ ತಲಾ ₹100 ಕೋಟಿ

ಬಹು ಶಿಸ್ತೀಯ ಶಿಕ್ಷಣ, ಸಂಶೋಧನೆಗೆ ಅನುದಾನ ಯೋಜನೆ

● ರಾಜೇಶ್ ರೈ ಚಟ್ಲ

ಬೆಂಗಳೂರು: ಕೇಂದ್ರ ಶಿಕ್ಷಣ ಸಚಿವಾಲಯದ ಅಡಿಯಲ್ಲಿರುವ ಉನ್ನತ ಶಿಕ್ಷಣ ಇಲಾಖೆಯ ‘ಪ್ರಧಾನ ಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ್’ (ಪಿಎಂ–ಉಷಾ) ಯೋಜನೆಯ ‘ವಿಶ್ವವಿದ್ಯಾಲಯಗಳಲ್ಲಿ ಬಹುಶಿಸ್ತೀಯ ಶಿಕ್ಷಣ ಮತ್ತು ಸಂಶೋಧನೆ’ (ಎಂಇಆರ್‌ಯು) ಅಡಿ ರಾಜ್ಯದ ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ತಲಾ ₹100 ಕೋಟಿ ಅನುದಾನ ಪಡೆಯಲು ಅರ್ಹತೆ ಪಡೆದಿವೆ.

‘ಪಿಎಂ–ಉಷಾ’ ಯೋಜನೆಗೆ ಅನುಮೋದನೆ ನೀಡುವ ಮಂಡಳಿಯ (ಪಿಎಬಿ) ಸಭೆ ಇತ್ತೀಚೆಗೆ ನಡೆದಿದ್ದು, ಅನುದಾನ ಪಡೆಯಲು ಅರ್ಹತೆ ಪಡೆದಿರುವ ವಿಶ್ವವಿದ್ಯಾಲಯಗಳ ಪಟ್ಟಿಯನ್ನು ಕೇಂದ್ರ ಉನ್ನತ ಶಿಕ್ಷಣ ಇಲಾಖೆ ಶನಿವಾರ (ಫೆ. 17) ಬಿಡುಗಡೆ ಮಾಡಿದೆ. ಇದೇ ಮೊದಲ ಬಾರಿಗೆ ರಾಜ್ಯದ ಎರಡು ವಿಶ್ವವಿದ್ಯಾಲಯಗಳು ಈ ಯೋಜನೆಯಡಿ ದೊಡ್ಡ ಮೊತ್ತದ ಅನುದಾನ ಪಡೆಯಲು ಅರ್ಹ ಆಗಿವೆ.

ಈ ಯೋಜನೆಗೆ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ, ‘ವಿಶ್ವವಿದ್ಯಾಲಯಗಳಲ್ಲಿ ಬಹುಶಿಸ್ತೀಯ ಶಿಕ್ಷಣ ಮತ್ತು ಸಂಶೋಧನೆ’ (ಎಂಇಆರ್‌ಯು), ‘ವಿಶ್ವವಿದ್ಯಾಲಯಗಳ ಬಲವರ್ಧನೆಗೆ ಅನುದಾನ’ (ಜಿಎಸ್‌ಯು) ಮತ್ತು ‘ಹೊಸ ಮಾದರಿಯ ಪದವಿ ಕಾಲೇಜುಗಳು’ (ಎನ್‌ಎಂಡಿಸಿ) ಈ ಮೂರು ವಿಭಾಗಗಳಲ್ಲಿ ಬಂದ ಪ್ರಸ್ತಾವಗಳನ್ನು ಪರಿಗಣಿಸಿ ಪಿಎಬಿ ಅನುದಾನ ಹಂಚಿಕೆ ಮಾಡುತ್ತಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು ₹30 ಸಾವಿರ ಕೋಟಿಯನ್ನು ಈ ಯೋಜನೆಗಳಿಗೆ ಮೀಸಲಿಡಲಾಗಿದೆ.

6ನೇ ಪುಟ ನೋಡಿ

‘ಪಿಎಂ ಉಷಾ’ ಯೋಜನೆಯಡಿ ₹ 100 ಕೋಟಿ ಘೋಷಣೆಯಾಗಿರುವುದು ಹೆಮ್ಮೆಯ ವಿಷಯ. ವಿದ್ಯಾರ್ಥಿಗಳ ಶೈಕ್ಷಣಿಕ ಏಳಿಗೆ, ಸಂಶೋಧನೆ ಮತ್ತು ಅಭಿವೃದ್ಧಿಗೆ ಈ ಅನುದಾನವನ್ನು ಸಮರ್ಪಕವಾಗಿ ಬಳಸುತ್ತೇವೆ
ಪ್ರೊ. ಜಯಕರ ಎಸ್.ಎಂ., ಕುಲಪತಿ, ಬೆಂಗಳೂರು ವಿ.ವಿ

‘ಪಿಎಂ–ಉಷಾ’ – ಯಾರಿಗೆ, ಎಷ್ಟು?

ವಿಶ್ವವಿದ್ಯಾಲಯ	ಅನುದಾನ (₹ ಕೋಟಿಗಳಲ್ಲಿ)
ಬೆಂಗಳೂರು	100
ರಾಣಿ ಚನ್ನಮ್ಮ	100
ಮಹಾರಾಣಿ ಕ್ಲಸ್ಟರ್	19.78
ಮಂಗಳೂರು	20
ಕರ್ನಾಟಕ	20
ಗುಲ್ಬರ್ಗಾ	20

ನವ ಯುಗದ ಯುವ ಸಹಕಾರಿಗಳು – ಸೌಹಾರ್ದ ಸಹಕಾರಿಗಳು

ಸಹಕಾರ ಕ್ಷೇತ್ರದ ವಿಶ್ವಾಸಾರ್ಹತೆ ಹೆಚ್ಚಿಸುವಲ್ಲಿ

ಸಂಯುಕ್ತ ಸಹಕಾರಿಯ ದಿಟ್ಟ ಹೆಜ್ಜೆ ಮತ್ತು ಸಾಧನೆಗಳು

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಚಳುವಳಿ ಹಾಗೂ ಸಂಯುಕ್ತ ಸಹಕಾರಿಯು ರೂಪುಗೊಂಡ ಹಾದಿ....

ದೇಶವು ಸರ್ವತೋಮುಖ ಪ್ರಗತಿ ಸಾಧಿಸಬೇಕಿದ್ದಲ್ಲಿ ಪ್ರತಿ ಗ್ರಾಮಕ್ಕೊಂದು ಪಂಚಾಯಿತಿ, ಶಾಲೆ ಹಾಗೂ ಸಹಕಾರ ಸಂಘ ಇವುಗಳೇ ಜನ ಸಮುದಾಯ ಅಭಿವೃದ್ಧಿಯ ಮೂರು ಆಧಾರ ಸ್ತಂಭಗಳಾಗಿರುವ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ನಂತರ ಕೇಂದ್ರ–ರಾಜ್ಯ ಸರ್ಕಾರಗಳು ಸಹಕಾರ ಕ್ಷೇತ್ರಕ್ಕೆ ಅಪಾರ ಪ್ರಮಾಣದ ಅನುದಾನಗಳನ್ನು ನೀಡಿ ಉತ್ತೇಜಿಸಿದೆ.

ಸಹಕಾರ ಕ್ಷೇತ್ರದ ಮೂಲಕ ಇನ್ನೂ ಹೆಚ್ಚಿನ ಪ್ರಗತಿ ಸಾಧ್ಯ ಎನ್ನುವುದನ್ನು ಮನಗಂಡ ಕೇಂದ್ರ ಸರ್ಕಾರ, ಸಹಕಾರ ಕ್ಷೇತ್ರದ ಹಿರಿಯ ಮುಖಂಡರ ಸಲಹೆ, ಸೂಚನೆ, ಅಭಿಪ್ರಾಯಗಳ ಹಿನ್ನೆಲೆಯಲ್ಲಿ 1987ರಲ್ಲಿ ಶ್ರೀ ಅರ್ಧನಾರೀಶ್ವರನ್ ಅವರ ಅಧ್ಯಕ್ಷತೆಯಲ್ಲಿ ಅಧ್ಯಯನ ಸಮಿತಿಯೊಂದನ್ನು ರಚಿಸಿತು. ಅದು ತನ್ನ ವರದಿಯಲ್ಲಿ, ಈ ಕ್ಷೇತ್ರದ ಮೇಲಿನ ಬಾಹ್ಯ ಹಸ್ತಕ್ಷೇಪವನ್ನು ಮುಖ್ಯವಾಗಿ ಪ್ರಸ್ತಾಪಿಸಿ, ಇದನ್ನು ನಿವಾರಿಸುವ ಸಲುವಾಗಿ ಕೆಲವು ಉಪಯುಕ್ತ ಸಲಹೆಗಳನ್ನು ನೀಡಿತು.

ಇದರ ಅನ್ವಯ ಸಹಕಾರ ಆಂದೋಲನ ಮುಕ್ತ ಕಾರ್ಯಾಚರಣೆ ಹಾಗೂ ಸಹಕಾರ ಸಂಘ–ಸಂಸ್ಥೆಗಳ ಸದಸ್ಯರಿಗೆ ಹೆಚ್ಚಿನ ಅಧಿಕಾರ ನೀಡುವ ಮತ್ತು ಅವರ ಸಹಭಾಗಿತ್ವ ಹೆಚ್ಚಿಸುವ ಮುಕ್ತ ವಾತಾವರಣ ನಿರ್ಮಿಸುವಂತಹ ಮಾದರಿ ಸಹಕಾರಿ ಕಾಯ್ದೆಯನ್ನು ರೂಪಿಸಲು ಶ್ರೀ ಚೌಧರಿ ಬ್ರಹ್ಮ ಪ್ರಕಾಶರ ನೇತೃತ್ವದಲ್ಲಿ 1990ರಲ್ಲಿ ಇನ್ನೊಂದು ಸಮಿತಿಯನ್ನು ನೇಮಿಸಿತು. ಸಮಿತಿ ಸದಸ್ಯರಾಗಿ ನಮ್ಮ ರಾಜ್ಯದ ಹಿರಿಯ ರಾಜಕಾರಣಿ ಮತ್ತು ಸಹಕಾರ ಕ್ಷೇತ್ರದ ಮುತ್ಸದ್ಧಿ ನಾಯಕ ಶ್ರೀ ಆರ್. ವಿ. ದೇಶಪಾಂಡೆರವರು ಇದ್ದರು.

ಈ ವರದಿಯನ್ನು ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀ ಪಿ. ವಿ. ನರಸಿಂಹರಾವ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಯೋಜನಾ ಆಯೋಗವು ಸಹಕಾರ ಆಂದೋಲನದ ಅಭಿವೃದ್ಧಿಗೆ, ಪ್ರಗತಿಗೆ ಪೂರಕವಾದ ಸಹಕಾರಿ ಕಾಯ್ದೆಯನ್ನು ರೂಪಿಸಿ, ಅಳವಡಿಸಿಕೊಳ್ಳಲು ಸಲಹೆ ನೀಡಿ ಎಲ್ಲಾ ರಾಜ್ಯ ಸರ್ಕಾರಗಳಿಗೆ ಕಳುಹಿಸಿತು.

ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಜೆ. ಹೆಚ್ ಪಟೇಲ್ ಹಾಗೂ ಅಂದಿನ ಸಹಕಾರ ಸಚಿವರಾದ ಶ್ರೀ ಎಸ್. ಎಸ್. ಪಾಟೀಲ ಅವರು ಇಟ್ಟಂತಹ ದಿಟ್ಟ ಹೆಜ್ಜೆ ಹಾಗೂ ಮಹತ್ವಕಾಂಕ್ಷೆಯಂತೆ ವಿಧಾನಮಂಡಲದಲ್ಲಿ ಅನುಮೋದಿತವಾಗಿ, ರಾಜ್ಯಪಾಲರ ಮತ್ತು ರಾಷ್ಟ್ರಪತಿಗಳ ಅಂಕಿತದೊಂದಿಗೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ಎಂ ಕೃಷ್ಣರವರು ಹಾಗೂ ಅಂದಿನ ಸಹಕಾರ ಸಚಿವರಾಗಿದ್ದ ಶ್ರೀ ಡಿ. ಕೆ. ಶಿವಕುಮಾರ ಅವರ ಅವಧಿಯಲ್ಲಿ ದಿನಾಂಕ 01.01.2001 ರಂದು ಜಾರಿಗೆ ಬಂದ ಕಾಯ್ದೆಯೇ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ.

ಈ ಕಾಯ್ದೆಯ ಅಡಿಯಲ್ಲಿ 50 ಸೌಹಾರ್ದ ಸಹಕಾರಿಗಳು ನೋಂದಣಿಗೊಂಡ ತರುವಾಯ ರಾಜ್ಯದಲ್ಲಿ ಒಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಚನೆಯಾಗಬೇಕೆಂಬ ಕಾಯ್ದೆಯ ಆಶಯದೊಂದಿಗೆ "ಸಂಯುಕ್ತ ಸಹಕಾರಿ" ದಿನಾಂಕ: 04.01.2002ರಲ್ಲಿ ನೋಂದಣಿಗೊಂಡು ಕಾರ್ಯ ಪ್ರಾರಂಭಿಸಿತು.

"ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣ"

2002ರಲ್ಲಿ ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣವನ್ನು ಧ್ಯೇಯವನ್ನಾಗಿಸಿಕೊಂಡ ಸಂಯುಕ್ತ ಸಹಕಾರಿಯು ನೋಂದಣಿಯಾಗಿ, ಕಳೆದ 23 ವರ್ಷಗಳಿಂದ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ.

ಸರ್ಕಾರದ–ಸಹಕಾರಿಗಳ ಹಾಗೂ ಸಾರ್ವಜನಿಕರ ಮನ್ನಣೆಯ ಮೂಲಕ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಾ, ಪ್ರಗತಿ ಪಥದಲ್ಲಿ ಮುನ್ನಡೆದಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿಗಳ ಮೇಲ್ವಿಚಾರಣೆ, ಉಸ್ತುವಾರಿ, ನಿಯಂತ್ರಣ ಹಾಗೂ ಜವಾಬ್ದಾರಿಯನ್ನು ನಿರ್ವಹಿಸುವ ಮಾತೃ ಸಂಸ್ಥೆಯಾಗಿದೆ. ಸದಸ್ಯರಿಂದಲೇ ಆಯ್ಕೆಗೊಳ್ಳುವ, ಪ್ರತಿನಿಧಿಗಳಿರುವ ಆಡಳಿತ ಮಂಡಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಅಗತ್ಯವಾದ ಶಾಸನಬದ್ಧ ಮಾರ್ಗದರ್ಶನಗಳನ್ನು ನೀಡುವ ದೇಶದ ವಿನೂತನ ಶಾಸನಬದ್ಧ ಸಂಸ್ಥೆಯಾಗಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಸಹಕಾರದಿಂದ ಸಮೃದ್ಧಿ



ಸಂಕಷ್ಟದಲ್ಲೂ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ
–ಐ.ಸಿ.ಎ.

ಸೌಹಾರ್ದ ಸಹಕಾರಿಗಳ ಹಲವು ವಿಶೇಷತೆಗಳು

- ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ: ರಾಜ್ಯದಲ್ಲಿ 6146 ಸೌಹಾರ್ದ ಸಹಕಾರಿಗಳು ನೋಂದಣಿಯಾಗಿದ್ದು, ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 66 ಲಕ್ಷಕ್ಕೂ ಹೆಚ್ಚು ಸದಸ್ಯರು ತೊಡಗಿಸಿಕೊಂಡಿದ್ದಾರೆ.
- ಸರಕಾರದ ಆರ್ಥಿಕ ನೆರವಿಲ್ಲದೇ ತಮ್ಮ ಸದಸ್ಯರುಗಳಿಂದ ಸಂಗ್ರಹಿಸಿದ ಶೇರುಗಳಿಂದ ಹಾಗೂ ಠೇವಣಿಗಳಿಂದ ಸೌಹಾರ್ದ ಸಹಕಾರಿಗಳು ಕಾರ್ಯ ನಿರ್ವಹಿಸುತ್ತಿವೆ.
- ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ ಇದಾಗಿದೆ.
- ಸಹಕಾರಿಗಳಿಗೆ ಆರ್ಥಿಕ ಉದ್ದಿಮೆಯ ಸ್ಥಾನ, ಸಹಕಾರಿ ತತ್ವಗಳನ್ನು ಕಾನೂನಿನಲ್ಲಿ ಅಳವಡಿಸಿ ಮಾರ್ಗದರ್ಶನ ವ್ಯವಸ್ಥೆ.
- ಸಹಕಾರಿಗಳ ಮೇಲ್ವಿಚಾರಣೆ, ಉಸ್ತುವಾರಿ, ನಿಯಂತ್ರಣ ಇತ್ಯಾದಿಗಳ ಜವಾಬ್ದಾರಿಗಳನ್ನು ಸೌಹಾರ್ದ ಸಹಕಾರಿಗಳಿಂದಲೇ ಶಾಸನಬದ್ಧವಾಗಿ ರಚಿತವಾಗಿರುವ ಸಂಯುಕ್ತ ಸಹಕಾರಿಗೆ ವಹಿಸಲಾಗಿದೆ.
- **ಡಿಸಿಬಿಎಂ ಕೋರ್ಸ್ :** ಸಹಕಾರಿಗಳ ಸಿಬ್ಬಂದಿಗಳಿಗಾಗಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸನ್ನು ಸಂಯುಕ್ತ ಸಹಕಾರಿ ಮತ್ತು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಯುಜಿಸಿಯಿಂದ ಮಾನ್ಯತೆ ಪಡೆದು ಡಿಸಿಬಿಎಂ ಕೋರ್ಸನ್ನು ಪ್ರಾರಂಭಿಸಲಾಗಿದೆ. ಎಲ್ಲ ಸಹಕಾರಿಗಳಿಗೆ ಹಾಗೂ ಯುವಕರಿಗೆ ಪ್ರವೇಶ ಪಡೆಯಲು ಮುಕ್ತ ಅವಕಾಶ.
- **ಸದಸ್ಯ ಶಿಕ್ಷಣ ಯೋಜನೆ:** ರಾಜ್ಯದ ಸೌಹಾರ್ದ ಸಹಕಾರಿಗಳ ಸದಸ್ಯರುಗಳಿಗಾಗಿ ಸೌಹಾರ್ದ ಸಹಕಾರಿಗಳ ಸ್ಥಳದಲ್ಲಿಯೇ ಸದಸ್ಯರಿಗಾಗಿ ಸದಸ್ಯ ಶಿಕ್ಷಣ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ಸಂಯುಕ್ತ ಸಹಕಾರಿ ರಚನೆ –ಆಡಳಿತ ವ್ಯವಸ್ಥೆ

- ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಮೇಲ್ವಿಚಾರಣೆ, ಉಸ್ತುವಾರಿ ಹಾಗೂ ನಿಯಂತ್ರಣ ನಿರ್ವಹಿಸುವ ಮಾತೃ ಸಂಸ್ಥೆಯಾಗಿದೆ. ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಹಾಗೂ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನಕುಮಾರ ಇವರನ್ನೊಳಗೊಂಡಂತೆ 21 ಜನ ಸೌಹಾರ್ದ ಸಹಕಾರಿಗಳಿಂದ ಚುನಾಯಿತ ಪ್ರತಿನಿಧಿಗಳು ಇರುತ್ತಾರೆ ಹಾಗೂ ಇಬ್ಬರು ವೃತ್ತಿಪರ ನಿರ್ದೇಶಕರು ಹಾಗೂ ಓರ್ವ ವ್ಯವಸ್ಥಾಪಕ ನಿರ್ದೇಶಕರು ಪದನಿಮಿತ್ತ ನಿರ್ದೇಶಕರು ಒಟ್ಟಾರ 24 ಜನ ಆಡಳಿತ ಮಂಡಳಿ ಸದಸ್ಯರು ಇದ್ದಾರೆ.
- ಸಂಯುಕ್ತ ಸಹಕಾರಿಯು ಬೆಂಗಳೂರಿನಲ್ಲಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ಪ್ರಾಂತವಾರುಗಳಲ್ಲಿ ಸ್ವಂತ ತರಬೇತಿ ಸಭಾಂಗಣಗಳನ್ನೊಳಗೊಂಡ ಕಛೇರಿಗಳನ್ನು ಹಾಗೂ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಸಂಪರ್ಕ ಕಛೇರಿಗಳನ್ನು ಹೊಂದಿದೆ.
- ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಮಾರ್ಗದರ್ಶನ ಹಾಗೂ ಅಭಿವೃದ್ಧಿಗಾಗಿ 04 ಪ್ರಾಂತೀಯ ಅಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದಲ್ಲಿ 24 ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಹಾಗೂ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು, ಬೆಳಗಾವಿ, ಕಲಬುರಗಿ ಮತ್ತು ಮೈಸೂರು ಪ್ರಾಂತಗಳಲ್ಲಿ ಕಛೇರಿ, ಇ–ಸ್ಟಾಂಪಿಂಗ್ ವಿಭಾಗ, ದಾವಾ ಪಂಚಾಯಿತಿ ಹಾಗೂ ಓರ್ವ ಸಲಹೆಗಾರರು ಸೇರಿ ಒಟ್ಟು 100 ಜನ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಜವಾಬ್ದಾರಿ ಹಾಗೂ ಕರ್ತವ್ಯಗಳ ನಿರ್ವಹಣೆ

- ಸಹಕಾರಿಗಳನ್ನು ಪ್ರವರ್ತಿಸುವುದು, ಸಂಘಟಿಸುವುದು, ಈ ಉದ್ದೇಶಕ್ಕಾಗಿ ಮಾದರಿ ಉಪವಿಧಿಗಳನ್ನು ರಚಿಸುವುದು, ಹಾಗೂ ಸಹಕಾರಿಗಳಿಗಾಗಿ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು.
- ಸಹಕಾರ ತರಬೇತಿ, ಶಿಕ್ಷಣ ಹಾಗೂ ತಿಳುವಳಿಕೆ ನೀಡುವುದು ಮತ್ತು ಸಹಕಾರ ತತ್ವಗಳನ್ನು ಪ್ರಚಾರ ಮಾಡುವುದು.
- ಸಂಶೋಧನೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳುವುದು ಮತ್ತು ಯಥಾದೃಷ್ಟ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ನೆರವಾಗುವುದು.
- ಸದಸ್ಯ ಸಹಕಾರಿಗಳಿಗೆ ನಡತೆ ಸಂಹಿತೆಯನ್ನು ಹಾಗೂ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು.
- ಸಹಕಾರಿಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವುದು. ಸದಸ್ಯ ಸಹಕಾರಿಗಳ ಪರಿವೀಕ್ಷಣೆ ಮಾಡುವುದು ಸಹಕಾರಿಗಳ ಪರವಾಗಿ ವ್ಯವಹಾರ ಹಾಗೂ ಸೇವೆಗಳನ್ನು ಕೈಗೊಳ್ಳುವುದು.
- ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಂಶೋಧನೆ, ಚರ್ಚಾ ಗೋಷ್ಠಿಗಳು, ಪ್ರಕಟಣಾ ಕಾರ್ಯ, ಮುಂತಾದ ಚಟುವಟಿಕೆಗಳಿಗೆ ಸಹಕರಿಸುವುದು ಮತ್ತು ಪಾಲ್ಗೊಳ್ಳುವುದು.

ಶಾಸನಾತ್ಮಕ ಕಾರ್ಯಚಟುವಟಿಕೆಗಳು:

ಶಾಸನಾತ್ಮಕ ಕಾರ್ಯನಿರ್ವಹಣೆಯಲ್ಲಿ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯು

- ಕಾನೂನು ನೆರವು
- ಸಲಹೆ ಮತ್ತು ಮಾರ್ಗದರ್ಶನ
- ಪರಿವೀಕ್ಷಣೆ ಭೇಟಿಗಳು
- ಶಾಖಾ ಅನುಮತಿ
- ಸಮಾಪನೆ ಶಿಫಾರಸ್ಸು
- ನಿರ್ದೇಶಕರ ಅನರ್ಹತೆ
- ದೂರುಗಳ ಪರಿಶೀಲನೆ ಮತ್ತು ವಿಲೇವಾರಿ
- ಸಂಯುಕ್ತ ಸಹಕಾರಿಯಿಂದ ವಿವಿಧ ಪ್ರಾಧಿಕಾರಗಳಿಗೆ ಅಗತ್ಯ ಮಾಹಿತಿ ನೀಡುವುದು
- ಟಾಸ್ಕ್‌ಫೋರ್ಸ್ ವಿಭಾಗದಿಂದ ಸಮಸ್ಯಾತ್ಮಕ ಸಹಕಾರಿಗಳ ನಿರ್ವಹಣೆ.
- ಸರ್ಕಾರ ಹಾಗೂ ಸಹಕಾರ ಇಲಾಖೆಯೊಂದಿಗೆ ಸಮನ್ವಯ ಬೆಳೆಸುವುದು.

ಸೇವಾ ಚಟುವಟಿಕೆಗಳು:

ರಾಷ್ಟ್ರದಲ್ಲಿ ಸಹಕಾರ ಕ್ಷೇತ್ರದ ಮೂಲಕ ಪ್ರಪ್ರಥಮವಾಗಿ ಇ–ಸ್ಟಾಂಪಿಂಗ್ ವ್ಯವಹಾರ ಆರಂಭಿಸಿದ ಹೆಗ್ಗಳಿಕೆ ಸೌಹಾರ್ದ ಸಹಕಾರಿ ಕ್ಷೇತ್ರದ್ದಾಗಿದೆ. ಪ್ರಸ್ತುತ ರಾಜ್ಯದಾದ್ಯಂತ 1624ಕ್ಕೂ ಹೆಚ್ಚು ಇ–ಸ್ಟಾಂಪಿಂಗ್ ಕೇಂದ್ರಗಳನ್ನು ಹೊಂದಿ ಪ್ರಸಕ್ತ ಸಾಲಿನಲ್ಲಿ 80 ಲಕ್ಷಕ್ಕೂ ಹೆಚ್ಚು ಇ–ಸ್ಟಾಂಪ್ ಪೇಪರ್‌ಗಳನ್ನು ಸಾರ್ವಜನಿಕರಿಗೆ ನೀಡಿದೆ. ಕಳೆದ ಆರ್ಥಿಕ ವರ್ಷದಲ್ಲಿ ರೂ.265 ಕೋಟಿಗೂ ಹೆಚ್ಚು ರಾಜಸ್ವವನ್ನು ಸಂಗ್ರಹಿಸಿ Stock Holding Corporation of India ಮೂಲಕ ರಾಜ್ಯ ಸರ್ಕಾರಕ್ಕೆ ಜಮಾ ಮಾಡಲಾಗಿದೆ.

ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಅಧ್ಯಯನ ಮಾಡಿದ ಸಂಸ್ಥೆಗಳ ಹಾಗೂ ವ್ಯಕ್ತಿಗಳ ಅಭಿಪ್ರಾಯ ಹಾಗೂ ಮೆಚ್ಚುಗೆ

ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ ಏಷಿಯಾ ಫೆಸಿಫಿಕ್‌ಯಿಂದ ಅಧ್ಯಯನ: ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ (ಏಷಿಯಾ ಫೆಸಿಫಿಕ್) ಕರ್ನಾಟಕ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಅಧ್ಯಯನಕ್ಕಾಗಿ ಆಡಳಿತ ತಜ್ಞೆ ಹಾಗೂ ವೃತ್ತಿಯಲ್ಲಿ ವಕೀಲರಾದ ಶ್ರೀಮತಿ ಲಾರೆನ್ಸ್ ಹಮ್ಮನ್‌ವರು ಡಿಸೆಂಬರ್ 2017ರ ಮಾಹೆಯಲ್ಲಿ ಭೇಟಿ ನೀಡಿ, ಸೌಹಾರ್ದ ಸಹಕಾರಿ ಕಾಯ್ದೆಯು ಅನುಕರಣೆಗೆ ಯೋಗ್ಯವಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ವಿಶ್ವ ವಿದ್ಯಾಲಯದವರಿಂದ ಮೌಲ್ಯಮಾಪನ: ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ಚಟುವಟಿಕೆಗಳನ್ನು ಪ್ರೊ. ಯಶವಂತ ಡೋಂಗ್ರೆಯವರ ನೇತೃತ್ವದಲ್ಲಿ ರಾಜ್ಯದಾದ್ಯಂತ ಅಧ್ಯಯನ ಮಾಡಿ ವರದಿಯನ್ನು ಸಲ್ಲಿಸಿದ್ದಾರೆ.

ಎನ್‌ಸಿಯುಐ ರವರಿಂದ ಸ್ವಾಯತ್ತ ಸಹಕಾರ ಕಾಯ್ದೆಗಳ ಅಧ್ಯಯನ: ದೇಶದಾದ್ಯಂತ 9 ರಾಜ್ಯಗಳಲ್ಲಿ ಸ್ವಾಯತ್ತ ಕಾಯ್ದೆ ಅಳವಡಿಸಿಕೊಂಡಿರುವುದನ್ನು ಸ್ವಾಯತ್ತ ಸಹಕಾರಿ ಕಾಯ್ದೆಗಳ ಅನುಷ್ಠಾನದ ಬಗ್ಗೆ ಎನ್.ಸಿ.ಯು.ಐ ನವರು ಪುಣೆಯ ವೈಕುಂಠ ಮೆಹತಾ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆಯ ಮೂಲಕ ಅಧ್ಯಯನ ಮಾಡಿಸಿದ್ದಾರೆ. ಡಾ. ಪರಂಜ್ಯೋತಿಯವರು ಈ ಅಧ್ಯಯನದ ನೇತೃತ್ವವನ್ನು ವಹಿಸಿದ್ದರು. ಸದರಿ ವರದಿಯಲ್ಲಿ ಕರ್ನಾಟಕದ ಸೌಹಾರ್ದ ಸಹಕಾರಿ ಮಾದರಿ ಅತ್ಯಂತ ಯಶಸ್ವಿಯಾಗಿದೆ. ಇದು ಇತರೆ ರಾಜ್ಯಗಳಲ್ಲಿ ಅನುಸರಿಸಬಹುದಾಗಿದೆ ಎಂದು ಪ್ರಶಂಸಿಸಿದ್ದಾರೆ.

ಸಹಕಾರಿ ಕ್ಷೇತ್ರ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ ಕುರಿತು ಪಿಹೆಚ್.ಡಿ: ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಡಾಕ್ಟರೇಟ್ ಪಡೆದ ಶ್ರೀ ಹೆಚ್. ಪಿ. ವೆಂಕಟೇಶ್, ಶ್ರೀ ನಾಗರಾಜ ಮತ್ತು ಶ್ರೀ ಸಿದ್ಧಾರ್ಥ ಮೈಸೂರು, ಶ್ರೀ ಶ್ರೀನಿಧಿ ಶಿವಮೊಗ್ಗ, ಶ್ರೀ ರಾಜೇಶ್ ಉಡುಪಿ, ಇವರುಗಳು ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ಸಂಯುಕ್ತ ಸಹಕಾರಿ ಕಾರ್ಯ ವೈಖರಿ ಕುರಿತು ಅಧ್ಯಯನ ನಡೆಸಿ ವಾಸ್ತವಿಕ ವರದಿಯನ್ನು ನೀಡಿದ್ದಾರೆ.

ಸಂಯುಕ್ತ ಸಹಕಾರಿಯ ವೆಬ್‌ಸೈಟ್ (ಆಧುನಿಕ ತಂತ್ರಜ್ಞಾನದ ಅಳವಡಿಕೆ)

ಸಂಯುಕ್ತ ಸಹಕಾರಿಯು ತನ್ನದೇ ಆದ ವೆಬ್‌ಸೈಟ್ www.souharda.coopನ್ನು ಹೊಂದಿದ್ದು, ಸೌಹಾರ್ದ ಸಹಕಾರಿ ಕ್ಷೇತ್ರದ ಪೂರ್ಣ ವಿವರಗಳನ್ನು ವೆಬ್‌ಸೈಟ್ ಮೂಲಕವೇ ಪಡೆಯಬಹುದಾಗಿದೆ. ಇದರಂತೆ ರಾಜ್ಯದ ಬಹುತೇಕ ಸೌಹಾರ್ದ ಸಹಕಾರಿಗಳು ಆಧುನಿಕ ತಂತ್ರಾಂಶವನ್ನು ಬಳಸಿಕೊಂಡು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.

ಪ್ರಕಟಣೆಗಳು: ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸಂಯುಕ್ತ ಸಹಕಾರಿ ಕಾಲಕಾಲಕ್ಕೆ ಅಗತ್ಯವೆನಿಸುವ 36 ವಿಧಗಳ ಪ್ರಕಟಣೆಗಳನ್ನು ಪ್ರಕಟಿಸಿದೆ.

ಪ್ರಚಾರ: ರಾಜ್ಯ/ ರಾಷ್ಟ್ರ/ ಅಂತರರಾಷ್ಟ್ರ ಮಟ್ಟದ ಸಹಕಾರಿ ಸೆಮಿನಾರ್‌ಗಳಲ್ಲಿ ಭಾಗವಹಿಸಿ, ಅವರುಗಳು ಹೊರ ತರುವಂತಹ ಸ್ಮರಣ ಸಂಚಿಕೆಗೆ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಜಾಹೀರಾತು ನೀಡಲಾಗುತ್ತಿದೆ. ಕಳೆದ 15 ವರ್ಷಗಳಿಂದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಒಂದು ದಿನದ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಯಶಸ್ವಿಯಾಗಿ ರಾಜ್ಯದಲ್ಲಿ ನಡೆಸಲಾಗುತ್ತಿದೆ.

ಸ್ವಾಭಿಮಾನಿ ಸಹಕಾರಿ: ಸಂಯುಕ್ತ ಸಹಕಾರಿಯು ಸ್ವಾಭಿಮಾನಿ ಸಹಕಾರಿ ಎಂಬ ಮಾಸಿಕ ಪತ್ರಿಕೆಯನ್ನು ಪ್ರಕಟಿಸಲಾಗುತ್ತಿದ್ದು, ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕಳುಹಿಸಲಾಗುತ್ತಿದೆ. ಈ ಪತ್ರಿಕೆಯ ಮೂಲಕ ಸೌಹಾರ್ದ ಸಹಕಾರಿ ಕಾರ್ಯಚಟುವಟಿಕೆಗಳನ್ನು ಪ್ರಚಾರ ಮಾಡುವುದು, ಸಂಯುಕ್ತ ಸಹಕಾರಿಯ ಮಾರ್ಗದರ್ಶನಗಳನ್ನು ಸರ್ಕಾರದ, ಸಹಕಾರ ಇಲಾಖೆಯ ಮಹತ್ವದ ಸುತ್ತೋಲೆಗಳು ಹಾಗೂ ಸೂಚನೆಗಳನ್ನು ಪ್ರಕಟಿಸಲಾಗುತ್ತದೆ.

ದಾವಾ ಪಂಚಾಯ್ತಿ ನ್ಯಾಯಾಲಯ ಸೌಹಾರ್ದ ಸಹಕಾರಿಗಳ ವ್ಯಾಜ್ಯ ಶೀಘ್ರ ವಿಲೇವಾರಿ

ಸೌಹಾರ್ದ ಸಹಕಾರಿಗಳ ಬೇಡಿಕೆಯನ್ನು ಪರಿಗಣಿಸಿ ಕರ್ನಾಟಕ ರಾಜ್ಯ ಸರ್ಕಾರವು ಸೌಹಾರ್ದ ಸಹಕಾರಿಗಳ ನಿ.441 ನ್ಯಾಯಾಲಯ ಸ್ಥಾಪಿಸಿದೆ. ವ್ಯಾಜ್ಯಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ನಿ.441 ಅಡಿಯಲ್ಲಿ ಸೌಹಾರ್ದ ಸಹಕಾರಿಗಳ ನ್ಯಾಯಾಲಯ ಇದುವರೆಗೆ ಇತ್ಯರ್ಥಗೊಳಿಸಿದ ದಾವೆಗಳ ಸಂಖ್ಯೆ 23351 ಹಾಗೂ ಗೌರವ ಮಧ್ಯಸ್ಥಗಾರರಿಂದ ಪ್ರಕರಣಗಳು ಶೀಘ್ರ ವಿಲೇವಾರಿಯಾಗುತ್ತಿರುವುದು ಹಾಗೂ 2022–23ನೇ ಸಾಲಿನಲ್ಲಿ ಸೌಹಾರ್ದ ಸಹಕಾರಿ ದಾವಾ ಪಂಚಾಯ್ತಿ ನ್ಯಾಯಾಲಯದಿಂದ ರಾಜ್ಯ ಸರ್ಕಾರಕ್ಕೆ ರೂ. 1.7 ಕೋಟಿಗೂ ಹೆಚ್ಚು ರಾಜಸ್ವ ನೀಡುತ್ತಿರುವುದು ಹೆಮ್ಮೆಯ ವಿಷಯ.

ರಾಜ್ಯದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು, ಸದಸ್ಯರು ತಾವುಗಳು ಸೌಹಾರ್ದ ಸಹಕಾರಿಗಳಾಗಿರುವುದಕ್ಕೆ ಹೆಮ್ಮೆಪಡುತ್ತಾರೆ

ಶಾಸನಬದ್ಧ ಕಾರ್ಯಚಟುವಟಿಕೆಗಳು

- **ವಿಚಾರಣೆ:** ಕಾಯ್ದೆ ಕಲಂ 35ರ ಪ್ರಕಾರ ಇಲ್ಲಿಯವರೆಗೆ ಒಟ್ಟು 31 ಸಹಕಾರಿಗಳ ವಿಚಾರಣೆ ನಡೆಸಲಾಗಿದೆ.
- **ಪರಿವೀಕ್ಷಣೆ:** ಕಾಯ್ದೆ ಕಲಂ 53(7) (ಯು)ರಡಿ (2012 ರಿಂದ 2023ರ ವರೆಗೆ) ಒಟ್ಟು 2738 ಸಹಕಾರಿಗಳ ಪರಿವೀಕ್ಷಣೆ ನಡೆಸಲಾಗಿದೆ.
- **ಸೌಹಾರ್ದ ಸಹಕಾರಿಗಳ ಬೇಟಿ:** 2022–23ನೇ ಸಾಲಿನಲ್ಲಿ ಒಟ್ಟು 2182 ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಲಾಗಿರುತ್ತದೆ.
- **ವಿಶೇಷಾಧಿಕಾರಿಗಳ ನೇಮಕ:** ಕಳೆದ ಹತ್ತು ವರ್ಷಗಳಲ್ಲಿ ಅಂದರೆ ಒಟ್ಟು 1220 ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.
- **ಲೆಕ್ಕಪರಿಶೋಧನಾ ವರದಿ:** ಇದುವರೆಗೆ 3592 ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಸಲ್ಲಿಕೆಯಾಗಿದ್ದು, 1783 ಸಹಕಾರಿಗಳ ಲೆಕ್ಕಪರಿಶೋಧನಾ ವರದಿಗಳ ಪರಿಶೀಲನೆಯಾಗಿವೆ.
- **ನಿರ್ದೇಶಕರ ಅನರ್ಹತೆ:** ಕಾಯ್ದೆ ಕಲಂ 25ರಡಿ ಇದುವರೆಗೂ ಒಟ್ಟು 134 ಸಹಕಾರಿಗಳ 868 ನಿರ್ದೇಶಕರನ್ನು ಆಯಾ ಸೌಹಾರ್ದ ಸಹಕಾರಿಯ ನಿರ್ದೇಶಕರ ಸ್ಥಾನದಿಂದ ಅನರ್ಹತೆಗೊಳಿಸಿ ಆದೇಶಿಸಲಾಗಿದೆ.
- **ಶಾಖಾ ಅನುಮತಿ:** ಈವರೆಗೆ ಒಟ್ಟು 1337 ಸಹಕಾರಿಗಳಿಂದ 3261 ಶಾಖೆಗಳನ್ನು ಆರಂಭಿಸಲು ಪ್ರಸ್ತಾವನೆಗಳು ಸಲ್ಲಿಕೆಯಾಗಿದ್ದು, ಅದರಲ್ಲಿ 1945 ಶಾಖೆಗಳು ಅನುಮೋದನೆಗೊಂಡಿರುತ್ತದೆ.

ಸೌಹಾರ್ದ ಸಹಕಾರಿಗಳ ಬಾಗಿಲಿಗೆ ಶಿಕ್ಷಣ ಹಾಗೂ ತರಬೇತಿ

- ರಾಜ್ಯಾದಾದ್ಯಂತ 10 ದಿನಗಳ 22 'ವ್ಯಕ್ತಿತ್ವ ವಿಕಸನ ತರಬೇತಿ'ಗಳನ್ನು ನಡೆಸಲಾಗಿದ್ದು, 1127 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. 07 ದಿನಗಳ 'ಬೇಸಿಕ್ ಬ್ಯಾಂಕಿಂಗ್ ಕೋರ್ಸ್' ಏಳು ಕೋರ್ಸ್‌ಗಳನ್ನು ನಡೆಸಲಾಗಿದ್ದು, 380 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. 2022–23ನೇ ಸಾಲಿನಲ್ಲಿ ಆಡಳಿತ ಪರಿಣಿತಿ, ಕಾರ್ಯದಕ್ಷತೆ ಅಭಿವೃದ್ಧಿ, ಕಾರ್ಯಕ್ಷಮತೆ ಅಭಿವೃದ್ಧಿ, ಪ್ರವೇಶ ತರಬೇತಿ, ಸೌಹಾರ್ದ ಸಹಕಾರಿಗಳಲ್ಲಿ ಗುಣಮಟ್ಟ ನಿರ್ವಹಣಾ ತರಬೇತಿ, ಸಾಲ ಪತ್ರ ದಾಖಲಾತಿ, ಮುಖ್ಯಕಾರ್ಯನಿರ್ವಾಹಕರ, ಸಂಪರ್ಕ, ಅವಲೋಕನಾ ಹಾಗೂ ಸಮಾಲೋಚನಾ ಸಭೆಗಳು, ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳಿಗೆ ಪ್ರತ್ಯೇಕ ತರಬೇತಿಗಳು, ಪತ್ರಿಕಾ ಗೋಷ್ಠಿಗಳು ಹೀಗೆ ವಿವಿಧ ಒಟ್ಟು 205 ತರಬೇತಿಗಳನ್ನು/ಸಭೆಗಳನ್ನು /ಸಮಾವೇಶವನ್ನು ನಡೆಸಿದ್ದು, 34262 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದಿರುವುದು ಹೆಮ್ಮೆಯ ವಿಷಯ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಶಾಸನಬದ್ಧವಾಗಿ ರಚನೆಗೊಂಡು. ಅರೆ ನ್ಯಾಯಿಕ ಅಧಿಕಾರವನ್ನು ಹೊಂದಿ, ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ ರಾಜ್ಯಾದಾದ್ಯಂತ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗುವಂತಹ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದಾದ್ಯಂತ ಹಮ್ಮಿಕೊಳ್ಳುತ್ತಾ ಬಂದಿದೆ. ಕೋವಿಡ್–19ರ ಸಂದರ್ಭದ ಕಾಲದಲ್ಲಿಯೂ ಸಹ ಸಹಕಾರಿಗಳಿಗೆ ತಂತ್ರಜ್ಞಾನ ಬಳಸಿಕೊಂಡು ಆನ್‌ಲೈನ್ ತರಬೇತಿ/ ತಾಂತ್ರಿಕ ಶಿಕ್ಷಣವನ್ನು ಒದಗಿಸುವ ಕಾರ್ಯ ಸಂಯುಕ್ತ ಸಹಕಾರಿ ವತಿಯಿಂದ ನಡೆದಿರುತ್ತದೆ.

GOVERNMENT OF UTTAR PRADESH

UP POWERING NEW INDIA
INVEST UP
Investment Promotion & Facilitation Agency of Govt. of Uttar Pradesh

THE MAHAKUMBH OF BUSINESS INVESTORS

ಹೂಡಿಕೆ ಯೋಜನೆಗಳು ಮೌಲ್ಯ
₹ 10 ಲಕ್ಷ ಕೋಟಿ+

ಉದ್ಘಾಟನೆ

UP NEW INDIA'S GROWTH ENGINE
GROUND BREAKING CEREMONY @4.0
— 19 FEB 2024 • LUCKNOW —

34 ಲಕ್ಷ+
ಉದ್ಯೋಗ ಅವಕಾಶಗಳು

ಉದ್ಘಾಟಕರು

ನರೇಂದ್ರ ಮೋದಿ

ಪ್ರಧಾನಮಂತ್ರಿ

ಇಲೆಕ್ಟ್ರಾನಿಕ್ಸ್ ಮ್ಯಾನುಫ್ಯಾಕ್ಚರಿಂಗ್ ಹಬ್

ಎಂಎಸ್ಎಂಇ ಹಬ್

ಡಿಫೆನ್ಸ್ ಇಂಡಸ್ಟ್ರಿಯಲ್ ಕಾರಿಡಾರ್

ಏರ್‌ಪೋರ್ಟ್ ಪ್ರದೇಶ

ಮೆಟ್ರೋ ಪ್ರದೇಶ

ಎಕ್ಸ್‌ಪ್ರೆಸ್ ಪ್ರದೇಶ

ಗಣ್ಯ ಉಪಸ್ಥಿತರು

ಆನಂದಿಬೆನ್ ಪಟೇಲ್
ರಾಜ್ಯಪಾಲರು
ಉತ್ತರ ಪ್ರದೇಶ

ರಾಜನಾಥ್ ಸಿಂಗ್
ರಕ್ಷಣಾ ಸಚಿವರು
ಭಾರತ ಸರ್ಕಾರ

ಯೋಗಿ ಆದಿತ್ಯನಾಥ್
ಮುಖ್ಯಮಂತ್ರಿಗಳು
ಉತ್ತರ ಪ್ರದೇಶ

ಕೇಶವ ಪ್ರಸಾದ್ ಮೌರ್ಯ
ಉಪ ಮುಖ್ಯಮಂತ್ರಿ, ಉತ್ತರ ಪ್ರದೇಶ

ಬ್ರಜೇಶ್ ಪಾಠಕ್
ಉಪ ಮುಖ್ಯಮಂತ್ರಿ, ಉತ್ತರ ಪ್ರದೇಶ

ನಂದ ಗೋಪಾಲ ಗುಪ್ತಾ 'ನಂದಿ'
ಸಚಿವರು, ಕೈಗಾರಿಕಾ ಅಭಿವೃದ್ಧಿ, ರಫ್ತು ಉತ್ತೇಜನ
ಎನ್‌ಆರ್‌ಐ & ಹೂಡಿಕೆ ಉತ್ತೇಜನ, ಉತ್ತರ ಪ್ರದೇಶ

ಜಸ್ವಂತ್ ಸಿಂಗ್ ಸೈನಿ
ರಾಜ್ಯ ಸಚಿವರು, ಸಂಸತ್ ವ್ಯವಹಾರಗಳು
ಮತ್ತು ಕೈಗಾರಿಕಾ ಅಭಿವೃದ್ಧಿ, ಉತ್ತರ ಪ್ರದೇಶ

ಇನ್ನಿತರ ಮಹನೀಯರು

ದಿನಾಂಕ: ಫೆಬ್ರವರಿ 19, 2024 । ಸಮಯ: ಮಧ್ಯಾಹ್ನ 12:00 ಗಂಟೆ
ಸ್ಥಳ: ಇಂದಿರಾ ಗಾಂಧಿ ಪ್ರತಿಷ್ಠಾನ, ಗೋಮತಿ ನಗರ, ಲಕ್ನೋ

ನೇರಪ್ರಸಾರ
DD NEWS Youtube.com/DDNEWS
Youtube.com/dduttarpradesh
UPGovtOfficial CMOUttarpradesh CMOfficeUP

Information and Public Relations Department, U.P.

ತಂಗಿ ಆರತಕ್ಷತೆಗೆ ಬಾರದಿದ್ದಕ್ಕೆ ಪತ್ನಿಗೆ ಚಾಕು ಇರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ದಿವ್ಯಶ್ರೀ (26) ಅವರಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಪತಿ ಜಯಪ್ರಕಾಶ್ (32) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಸುಂಕದಕಟ್ಟೆಯಲ್ಲಿ ಫೆ.15ರಂದು ನಡೆದಿರುವ ಘಟನೆ ಸಂಬಂಧ ದಿವ್ಯಶ್ರೀ ದೂರು ನೀಡಿದ್ದಾರೆ. ಕೊಲೆ ಯತ್ನ ಆರೋಪದಡಿ ಜಯಪ್ರಕಾಶ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಜಯಪ್ರಕಾಶ್ ಹಾಗೂ ದಿವ್ಯಶ್ರೀ ಪ್ರೀತಿಸಿ 2019ರಲ್ಲಿ ಮದುವೆಯಾಗಿದ್ದರು' ಎಂದು ತಿಳಿಸಿದರು.

'ಜಯಪ್ರಕಾಶ್ ಅವರ ತಂಗಿಗೆ ಮದುವೆ ನಿಶ್ಚಯವಾಗಿತ್ತು. ಆರತಕ್ಷತೆಗೆ ಬರಲು ದಿವ್ಯಶ್ರೀ ನಿರಾಕರಿಸಿದ್ದರು. ಇದೇ ವಿಷಯಕ್ಕೆ ಜಗಳ ಶುರುವಾಗಿತ್ತು. ತಮ್ಮ ಮನೆಯ ಕಾರ್ಯಕ್ರಮಗಳಿಗೆ ಬರುವುದಿಲ್ಲವೆಂದು ಸಿಟ್ಟಾಗಿದ್ದ ಜಯಪ್ರಕಾಶ್, ಪತ್ನಿ ಮೇಲೆ ಹಲ್ಲೆ ಮಾಡಿದ್ದ. ಚಾಕುವಿನಿಂದ ಕಾಲಿಗೆ ಇರಿದಿದ್ದ. ತೀವ್ರ ಗಾಯಗೊಂಡಿದ್ದ ದಿವ್ಯಶ್ರೀ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಸಂಚಾರ ಪೊಲೀಸರ ಕಾರ್ಯಾಚರಣೆ: ಖಾಸಗಿ ಬಸ್ಸುಗಳ 12 ಮಂದಿ ಚಾಲಕರ ವಿರುದ್ಧ ಪ್ರಕರಣ

ಮದ್ಯದ ಅಮಲಿನಲ್ಲಿ ಬಸ್ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಕುಡಿದು ಚಾಲನೆ ಮಾಡುತ್ತಿದ್ದ 12 ಖಾಸಗಿ ಬಸ್ ಚಾಲಕರ ವಿರುದ್ಧ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಗರದಲ್ಲಿ ಶನಿವಾರ ರಾತ್ರಿ ವಿಶೇಷ ಕಾರ್ಯಾಚರಣೆ ನಡೆಸಿದ ಪೊಲೀಸರು, 2,762 ಖಾಸಗಿ ಬಸ್‌ಗಳ ಚಾಲಕರನ್ನು ತಪಾಸಣೆ ನಡೆಸಿದರು.

'ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ಹೋಗುವ ಖಾಸಗಿ ಬಸ್‌ಗಳ ಚಾಲಕರು ಮದ್ಯ ಕುಡಿದು ಚಾಲನೆ ಮಾಡುತ್ತಿದ್ದ ಬಗ್ಗೆ ದೂರುಗಳು ಬಂದಿದ್ದವು. ಚಾಲಕರ ಈ ವರ್ತನೆಯಿಂದ ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಿತ್ತು. ಹೀಗಾಗಿ, ವಿಶೇಷ ಕಾರ್ಯಾಚರಣೆ ನಡೆಸಲಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆಲ್ಕೊಮೀಟರ್ ಬಳಸಿ ಚಾಲಕರ ತಪಾಸಣೆ ನಡೆಸಲಾಯಿತು. ಈ ಪೈಕಿ 12 ಚಾಲಕರು ಮದ್ಯ ಕುಡಿದಿದ್ದು ಪತ್ತೆಯಾಯಿತು. ಅವರ ವಿರುದ್ಧ ಪ್ರಕರಣ ದಾಖಲಿಸಿ, ಬಸ್‌ಗಳನ್ನು ಜಪ್ತಿ ಮಾಡಲಾಗಿದೆ. ಬಸ್ ಮಾಲೀಕರಿಗೂ ನೋಟಿಸ್ ನೀಡಲಾಗುವುದು' ಎಂದು ತಿಳಿಸಿದರು.

31 ವಾಹನ ವಿರುದ್ಧ ಪ್ರಕರಣ: '14 ದ್ವಿಚಕ್ರ ವಾಹನ, 13 ಕ್ಯಾಬ್, 4 ಆಟೊ ಚಾಲಕರ ವಿರುದ್ಧ ಮದ್ಯ ಸೇವಿಸಿ ವಾಹನ ಚಲಾಯಿಸುತ್ತಿದ್ದ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಅಧಿಕಾರಿ ತಿಳಿಸಿದರು.

ರೌಡಿ ಹತ್ಯೆಗೆ ಜೈಲಿನಿಂದ ಸುಪಾರಿ

ಬೆಂಗಳೂರು: ವಿವೇಕನಗರ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ರೌಡಿ ಸತೀಶ್ ಅಲಿಯಾಸ್ ಮಿಲ್ಟ್ರಿ (30) ಹತ್ಯೆಗೆ ಜೈಲಿನಿಂದ ಸುಪಾರಿ ನೀಡಿದ್ದ ಸಂಗತಿ ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

'ಮಾಯಾ ಬಜಾರ್ ನಿವಾಸಿ ಸತೀಶ್‌ನನ್ನು ಜ.24ರಂದು ಮನೆಗೆ ನುಗ್ಗಿ ಹತ್ಯೆ ಮಾಡಲಾಗಿತ್ತು. ಆರೋಪಿಗಳಾದ ಸುನೀಲ್ ಜೇಮ್ಸ್, ಕ್ಲೆಮೆಂಟ್, ಪ್ರಶಾಂತ್ ಹಾಗೂ ಧನುಷ್‌ನನ್ನು ಬಂಧಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸತೀಶ್ ಹಾಗೂ ಇನ್ನೊಬ್ಬ ರೌಡಿ ಶಿವಕುಮಾರ್ ಅಲಿಯಾಸ್ ಬಬ್ಲಿ ನಡುವೆ ಹಳೇ ವೈಷಮ್ಯವಿತ್ತು. ಕೊಲೆ ಹಿಂದೆ ಶಿವಕುಮಾರ್ ಕೈವಾಡವಿರುವ ಶಂಕೆ ಇತ್ತು. ಬಂಧಿತ ಆರೋಪಿಗಳ ವಿಚಾರಣೆ ನಡೆಸಿದಾಗ, ಶಿವಕುಮಾರ್ ಹೆಸರು ಬಾಯ್ಬಿಟ್ಟಿದ್ದರು.'

'ರೌಡಿ ಶಿವಕುಮಾರ್, ಪ್ರಕರಣವೊಂದರಲ್ಲಿ ಜೈಲು ಸೇರಿದ್ದ. ಜೈಲಿನಲ್ಲಿದ್ದುಕೊಂಡೇ ಸತೀಶ್‌ನನ್ನು ಕೊಲೆ ಮಾಡಲು ಮೂರು ತಿಂಗಳಿನಿಂದ ಸಂಚು ರೂಪಿಸುತ್ತಿದ್ದ. ಇದಕ್ಕಾಗಿ ತನ್ನ ಸಹಚರರಿಗೆ ₹30 ಲಕ್ಷಕ್ಕೆ ಸುಪಾರಿ ನೀಡಿದ್ದ. ಶಿವಕುಮಾರ್ ಮಾತಿನಂತೆ ಆರೋಪಿಗಳು ಮನೆಗೆ ನುಗ್ಗಿ ಸತೀಶ್‌ನನ್ನು ಕೊಂದಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜೈಲಿನಿಂದ ಬೆದರಿಕೆ ಕರೆ: ರೌಡಿ ಸೆರೆ

ಬೆಂಗಳೂರು: ಯುವತಿಯೊಬ್ಬರ ನಗ್ನ ಫೋಟೊಗಳನ್ನು ಅವರ ತಾಯಿಗೆ ಕಳುಹಿಸಿ ಹಣಕ್ಕಾಗಿ ಬೆದರಿಸಿದ್ದ ಆರೋಪದ ಅಡಿ ರೌಡಿ ಸೇರಿ ಮೂವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಯುವತಿಯ ತಾಯಿ ನೀಡಿದ್ದ ದೂರು ಆಧರಿಸಿ ಯಲಹಂಕ ನ್ಯೂ ಟೌನ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಈ ಪ್ರಕರಣದ ತನಿಖೆ ಕೈಗೊಂಡು ರೌಡಿ ಮನೋಜ್ ಅಲಿಯಾಸ್ ಕೆಂಚ, ಈತನ ಸಹಚರರಾದ ಸುಭಾಷ್ ಹಾಗೂ ಯೋಗೇಶ್‌ನನ್ನು ಸೆರೆ ಹಿಡಿಯಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ. 'ರೌಡಿ ಮನೋಜ್, ಅಪರಾಧ ಪ್ರಕರಣವೊಂದರಲ್ಲಿ ಜೈಲು ಸೇರಿದ್ದ. ಯುವತಿ ಹಾಗೂ ಅವರ ತಾಯಿಗೆ ಪರಿಚಯಸ್ಥನಾಗಿದ್ದ ಈತ, ಹಣಕ್ಕಾಗಿ ಆಗಾಗ ಬೆದರಿಕೆಯೊಡ್ಡುತ್ತಿದ್ದ. ಈ ಹಿಂದೆಯೂ ತಾಯಿಯನ್ನು ಬೆದರಿಸಿ ₹40 ಸಾವಿರ ಪಡೆದುಕೊಂಡಿದ್ದ.'

'ಇತ್ತೀಚೆಗೆ ಯುವತಿಯ ನಗ್ನ ಫೋಟೊವನ್ನು ತಾಯಿಗೆ ಕಳುಹಿಸಿದ್ದ ಕೆಂಚ, ಜೈಲಿನಿಂದ ಕರೆ ಮಾಡಿ ₹5 ಲಕ್ಷ ಹಣ ನೀಡುವಂತೆ ಬೇಡಿಕೆ ಇರಿಸಿದ್ದ. ಹಣ ನೀಡದಿದ್ದರೆ, ಸಾಮಾಜಿಕ ಮಾಧ್ಯಮಗಳಲ್ಲಿ ಫೋಟೊ ಅಪ್‌ಲೋಡ್ ಮಾಡುವುದಾಗಿ ಹಾಗೂ ಅಳಿಯನಿಗೆ ಕಳುಹಿಸುವುದಾಗಿ ಬೆದರಿಸಿದ್ದ' ಎಂದು ಸಿಸಿಬಿಯ ಮೂಲಗಳು ಹೇಳಿವೆ.

ಆರೋಪಿ ಕಿರುಕುಳದಿಂದ ಬೇಸತ್ತ ತಾಯಿ ಠಾಣೆಗೆ ದೂರು ನೀಡಿದ್ದರು' ಎಂದು ಸಿಸಿಬಿ ಮೂಲಗಳು ತಿಳಿಸಿವೆ. 'ಜೈಲಿನಿಂದಲೇ ರೌಡಿ ಕೆಂಚ ಕರೆ ಮಾಡಿದ್ದ. ಜೊತೆಗೆ, ಸಹಚರರ ಮೂಲಕವೂ ಯುವತಿಯ ತಾಯಿಗೆ ಕರೆ ಮಾಡಿಸಿ ಬೆದರಿಕೆ ಹಾಕಿಸಿದ್ದ. ಹೀಗಾಗಿ, ಎಲ್ಲರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು' ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಡಿಜಿಟಲ್ ಸ್ಕ್ಯಾನಿಂಗ್‌ನಲ್ಲಿ ಅಕ್ರಮ: ದೂರು ದಾಖಲು

ಬೆಂಗಳೂರು: ಆರ್.ಆರ್. ನಗರ ವ್ಯಾಪ್ತಿಯಲ್ಲಿ ಆಸ್ತಿ ದಾಖಲೆ ಡಿಜಿಟಲ್ ಸ್ಕ್ಯಾನಿಂಗ್ ವೇಳೆ ಅಕ್ರಮ ಮಾಡಲು ಮುಂದಾದ ಅಧಿಕಾರಿ ಹಾಗೂ ಅಕ್ರಮ ಆಸ್ತಿಯ ಮಾಲೀಕನ ವಿರುದ್ಧ ಪ್ರಕರಣ ದಾಖಲಾಗಿದೆ.

ಆರ್‌ಆರ್ ನಗರ ವಲಯದಲ್ಲಿನ ಉಪ ವಿಭಾಗದ ಸಹ ಕಂದಾಯ ಅಧಿಕಾರಿ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾದ ಓಂಕಾರಮೂರ್ತಿ, ವಾರ್ಡ್ ನಂ.160ರಲ್ಲಿನ ಹಲಗೆವಡೇರಹಳ್ಳಿಯಲ್ಲಿ 'ಎ' ರಿಜಿಸ್ಟ್ರರ್ ಪುಸ್ತಕ ಡಿಜಿಟಲ್ ಸ್ಕ್ಯಾನಿಂಗ್ ಮಾಡುವ ಸಂದರ್ಭದಲ್ಲಿ ಅಕ್ರಮವಾಗಿ ವ್ಯಕ್ತಿಯೊಬ್ಬರ ಆಸ್ತಿ ವಿವರವನ್ನು ನಮೂದು ಮಾಡಿ ಸಿಕ್ಕಿ ಬಿದ್ದಿದ್ದಾರೆ.

ಬಿಬಿಎಂಪಿ ಸಹಾಯಕ ಕಂದಾಯ ಅಧಿಕಾರಿ ಅರುಣ್ ಕುಮಾರ್ ಅವರು ಓಂಕಾರಮೂರ್ತಿ ಹಾಗೂ ಅಕ್ರಮ ನಮೂದಾದ ಆಸ್ತಿ ಮಾಲೀಕ ಯತಿನ್ ಗೌತಮ್ ವಿ. ವಿರುದ್ಧ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

2023ರ ನವೆಂಬರ್ ತಿಂಗಳಿನಿಂದ ಆರ್.ಆರ್.ನಗರ ಕಚೇರಿಯಲ್ಲಿ, ಆಸ್ತಿ ವಹಿಗಳನ್ನು ಕಂಪ್ಯೂಟರೀಕರಣ ಮಾಡಲು ಸ್ಕ್ಯಾನ್ ಮಾಡಲಾಗುತ್ತಿತ್ತು. ಹಲಗೆವಡೇರಹಳ್ಳಿ, ಗ್ರಾಮಕ್ಕೆ ಸಂಬಂಧಿಸಿದ 'ಎ' ಖಾತಾ ವಹಿ ಪುಸ್ತಕವನ್ನು ಸ್ಕ್ಯಾನ್ ಮಾಡುವಾಗ ವ್ಯಾಲ್ಯೂಮ್ ನಂ. 38ರ 'ಎ' ಖಾತಾ ಪುಸ್ತಕದ ಪುಟ ಸಂಖ್ಯೆ 122ರಲ್ಲಿ ಕ್ರಮ ಸಂಖ್ಯೆ 7362ರಲ್ಲಿ ಯಾವುದೇ ಹೆಸರು ಇರಲಿಲ್ಲ. ಇದನ್ನೇ ಬಂಡವಾಳ ಮಾಡಿಕೊಂಡು ಪ್ರಥಮ ದರ್ಜೆ ಸಹಾಯಕರಾಗಿರುವ ವಿಷಯ ನಿರ್ವಾಹಕ ಓಂಕಾರಮೂರ್ತಿ ಖಾಲಿ ಇದ್ದ ಸ್ಥಳದಲ್ಲಿ 66/1 ಹಾಗೂ 9/5 ಎಂಬ ಸಂಖ್ಯೆಯ, 40X60 ಅಳತೆಯ ನಿವೇಶನದ ವಿವರ ಹಾಗೂ ಅದರ ಆಸ್ತಿ ಮಾಲೀಕ ಯತಿನ್ ಗೌತಮ್ ವಿ. ಎಂದು ನಮೂದಿಸಿದ್ದರು. ಫೆ.12ರಂದು ಸಹಾಯಕ ಕಂದಾಯ ಅಧಿಕಾರಿ ಅರುಣ್ ಕುಮಾರ್ ಪರಿಶೀಲನೆ ನಡೆಸಿದಾಗ ಈ ಅಕ್ರಮ ಗಮನಕ್ಕೆ ಬಂದಿದೆ.

ಒಂದೇ ವಿಮಾನದಲ್ಲಿ ಡಿಕೆಶಿ– ಎಸ್‌ಟಿಎಸ್

ಬೆಂಗಳೂರು: ಮಂಗಳೂರಿನಲ್ಲಿ ಭಾನುವಾರ ನಡೆದ ಕರ್ಣಾಟಕ ಬ್ಯಾಂಕಿನ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಯಶವಂತಪುರ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ಜೊತೆಯಾಗಿ ತೆರಳಿದರು.

ಕಾಂಗ್ರೆಸ್ ಕಡೆ ಮುಖ ಮಾಡಿರುವ ಸೋಮಶೇಖರ್, ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಜೊತೆ ಚರ್ಚೆ ನಡೆಸಿದ್ದಾರೆ. ಆದರೆ, ಕಾಂಗ್ರೆಸ್ ಸೇರುವ ಬಗ್ಗೆ ಬಹಿರಂಗವಾಗಿ ಅವರು ಎಲ್ಲಿಯೂ ಮಾತನಾಡಿಲ್ಲ.

ಮಂಗಳೂರಿನ ಕಾರ್ಯಕ್ರಮದಲ್ಲಿ ಭಾಗವಹಿಸಲು ಡಿ.ಕೆ. ಶಿವಕುಮಾರ್ ಮತ್ತು ಸೋಮಶೇಖರ್ ಅವರು ವಿಶೇಷ ವಿಮಾನದಲ್ಲಿ ತೆರಳಿದರು. ಕಾರ್ಯಕ್ರಮ ಮುಗಿದ ಬಳಿಕ ಅದೇ ವಿಮಾನದಲ್ಲಿ ಮರಳಿದರು.

ಗಾಂಜಾ ಅಮಲು; ಪೊಲೀಸರ ಮೇಲೆ ಟೆಕಿಗಳ ಹಲ್ಲೆ

ಪ್ರಜಾವಾಣಿ ವಾರ್ತೆ

ಗೋಕರ್ಣ: ಗಾಂಜಾ ಸೇವನೆ ಮಾಡಿ ಅಡ್ಡಾದಿಡ್ಡಿಯಾಗಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಇಬ್ಬರು ಮಹಿಳಾ ಟೆಕಿಗಳು, ತಮ್ಮನ್ನು ಪ್ರಶ್ನಿಸಿದ ಮೂವರು ಮಹಿಳಾ ಪೊಲೀಸರ ಮೇಲೆ ಶನಿವಾರ ರಾತ್ರಿ ತೀವ್ರ ಹಲ್ಲೆ ನಡೆಸಿದ್ದಾರೆ.

ಬಿಹಾರ ಮೂಲದ ಪಲ್ಲವಿ ಪ್ರಿಯಾ ಸುನಿಲಕುಮಾರ್ (29) ಮತ್ತು ಜಾರ್ಖಂಡ್‌ನ ಪ್ರಿಯಾ ರಾಯ್ ಧರ್ಮೇಂದ್ರಕುಮಾರ್ (26) ಪೊಲೀಸರ ಮೇಲೆ ಹಲ್ಲೆ ನಡೆಸಿದವರು. ಇಬ್ಬರೂ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದು ಗೆಳೆಯರೊಂದಿಗೆ ಗೋಕರ್ಣಕ್ಕೆ ಬಂದಿದ್ದರು.

ಇವರು ಅಡ್ಡಾದಿಡ್ಡಿ ಬೈಕ್ ಚಲಾಯಿಸಿ ಪಾದಚಾರಿಗಳಿಗೆ ಭಯಪಡಿಸುತ್ತಿದ್ದನ್ನು ಕಂಡು ಮಹಿಳಾ ಪೊಲೀಸ್ ಸಿಬ್ಬಂದಿ ಅವರನ್ನು ಪ್ರಶ್ನಿಸಿದ್ದಾರೆ. ಇದರಿಂದ ಕೋಪಗೊಂಡ ಟೆಕಿಗಳು ಮೊದಲು ಆ ಮಹಿಳಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ. ಸಹಾಯಕ್ಕೆ ಬಂದ ಮತ್ತಿಬ್ಬರು ಮಹಿಳಾ ಪೊಲೀಸರ ಮೇಲೂ ತೀವ್ರ ಹಲ್ಲೆ ಮಾಡಿದ್ದಾರೆ. ಅವರನ್ನು ತಕ್ಷಣವೇ ವಶಕ್ಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ, ಗಾಂಜಾ ಸೇವಿಸಿದ್ದು ದೃಢಪಟ್ಟಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಇಬ್ಬರನ್ನೂ ಬಂಧಿಸಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಹಲ್ಲೆಗೊಳಗಾದ ಪೊಲೀಸ್ ಸಿಬ್ಬಂದಿಗೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದೆ ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

ನಿಧನ

ಕೆ. ಕೃಷ್ಣರಾಜು ರೆಡ್ಡಿ

(ಲೇಟ್ ಎ.ಕೆ. ಕೃಷ್ಣಾರೆಡ್ಡಿ ಇವರ ಮಗ)

ಇವರು ದಿ:17/2/2024 ರಂದು ನಿಧನ ಹೊಂದಿದ್ದು, ಇವರು ಪತ್ನಿ ಮತ್ತು ಇಬ್ಬರು ಮಕ್ಕಳು ತಮ್ಮಂದಿರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು ಕೃಷ್ಣಾರೆಡ್ಡಿ ಬಡಾವಣೆ HBR Layout ಇಲ್ಲಿ ದಿನಾಂಕ 19/2/2024 ಸಂಜೆ 3 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ.

ದುಃಖಿತರು : ಬಂಧು ಮಿತ್ರರು ಹಾಗೂ ಆತ್ಮೀಯ ಸ್ನೇಹಿತರು

'ಡಬ್ಬಿಯನ್ನು ಜಜ್ಜುವಾಗ ಸ್ಫೋಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ರಾಮಸಂದ್ರದಲ್ಲಿರುವ ಮಳಿಗೆಯೊಂದರಲ್ಲಿ ಬೆಂಕಿ ಅವಘಡ ಸಂಭವಿಸಿ ಮೂವರು ಸಜೀವ ದಹನವಾಗಿರುವ ಸಂಬಂಧ ಕುಂಬಳಗೋಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವಸತಿ ಪ್ರದೇಶದಲ್ಲಿದ್ದ ಖಾಲಿ ಜಾಗದಲ್ಲಿ ಶೆಡ್ ನಿರ್ಮಿಸಿ ಅಕ್ರಮವಾಗಿ ಮಳಿಗೆ ತೆರೆಯಲಾಗಿತ್ತು. ಬೆಂಕಿ ಅವಘಡ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮಳಿಗೆ ಮಾಲೀಕ, ನಿವೇಶನ ಮಾಲೀಕರು ಹಾಗೂ ಇತರರನ್ನು ಆರೋಪಿಗಳನ್ನಾಗಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಅವಘಡದಿಂದ ಅಕ್ಕಪಕ್ಕದ ಮನೆಗಳಿಗೂ ಹಾನಿಯಾಗಿದೆ. ಬೈಕ್, ಆಟೊ ಹಾಗೂ ಕಾರು ಜಖಂಗೊಂಡಿವೆ. ಹಾನಿ ಸಂಬಂಧ ಸ್ಥಳೀಯರಿಂದಲೂ ಹೇಳಿಕೆ ಪಡೆಯಲಾಗಿದೆ' ಎಂದು ತಿಳಿಸಿದರು.

'ಸುಗಂಧ ದ್ರವ್ಯ ಡಬ್ಬಿಯಲ್ಲಿರುವ ರಾಸಾಯನಿಕ ಸೋರಿಕೆಯಿಂದ ಬೆಂಕಿ ಹೊತ್ತಿಕೊಂಡಿರುವ ಅನುಮಾನವಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು ಸ್ಥಳಕ್ಕೆ ಬಂದು ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಅವರು ವರದಿ ನೀಡಿದ ಬಳಿಕವೇ ಅವಘಡಕ್ಕೆ ನಿಖರ ಕಾರಣವೇನು ಎಂಬುದು ಗೊತ್ತಾಗಲಿದೆ' ಎಂದು ಪೊಲೀಸರು ಹೇಳಿದರು.

'ಮಹಿಳೆ ಮೃತ'

'ಅವಘಡದಲ್ಲಿ ಮೃತಪಟ್ಟಿರುವ ಮೂವರು ಕಾರ್ಮಿಕರ ಪೈಕಿ ಒಬ್ಬರು ಮಹಿಳೆ ಎಂದು ಹೇಳಲಾಗುತ್ತಿದೆ. ಆದರೆ, ಮೂವರು ಮೃತದೇಹಗಳು ಗುರುತು ಸಿಗದಷ್ಟು ಸುಟ್ಟು ಕರಕಲಾಗಿವೆ. ಮೃತದೇಹಗಳನ್ನು ಆಸ್ಪತ್ರೆಯಲ್ಲಿ ಇರಿಸಲಾಗಿದೆ. ಮೃತದೇಹಗಳನ್ನು ಸಂಬಂಧಿಕರ ಮೂಲಕ ಗುರುತಿಸಬೇಕಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ ಹೇಳಿದರು.

ಖಾಲಿ ಡಬ್ಬಿ ಜಜ್ಜುತ್ತಿದ್ದ ಕಾರ್ಮಿಕರು: 'ಸುಗಂಧ ದ್ರವ್ಯದ 500ಕ್ಕೂ ಹೆಚ್ಚು ತಗಡಿನ ಖಾಲಿ ಡಬ್ಬಿಗಳನ್ನು ಇತ್ತೀಚೆಗೆ ಸಲೀಂ ಖರೀದಿಸಿದ್ದರು. ಅವುಗಳನ್ನು ಮಳಿಗೆಯಲ್ಲಿ ಸಂಗ್ರಹಿಸಿಟ್ಟಿದ್ದರು. ಅದೇ ಡಬ್ಬಿಗಳನ್ನು ಜಜ್ಜಿ ಸಮತಟ್ಟಾಗಿ ಮಾಡಿ ಮರು ಬಳಕೆಗೆ ಕಳುಹಿಸುವ ಉದ್ದೇಶ ಮಾಲೀಕರದ್ದಾಗಿತ್ತು. ಕಾರ್ಮಿಕರು, ಮೂರು ದಿನಗಳಿಂದ ಡಬ್ಬಿ ಜಜ್ಜುವ ಕೆಲಸದಲ್ಲಿ ತೊಡಗಿದ್ದರು' ಎಂದು ಅಧಿಕಾರಿ ಹೇಳಿದರು.

'ಭಾನುವಾರ ಬೆಳಿಗ್ಗೆಯೂ ಎಂಟು ಕಾರ್ಮಿಕರು ಕೆಲಸಕ್ಕೆ ಬಂದಿದ್ದರು. ಸುಗಂದ ದ್ರವ್ಯದ ಡಬ್ಬಿಗಳನ್ನು ಜಜ್ಜುತ್ತಿದ್ದರು. ಸಮತಟ್ಟಾದವನ್ನು ಚೀಲದಲ್ಲಿ ತುಂಬಿ ಆಟೊದಲ್ಲಿ ಇರಿಸಲಾಗುತ್ತಿತ್ತು. ಸಂಜೆ 5.30 ಗಂಟೆ ಸುಮಾರಿಗೆ ಶೆಡ್‌ನಿಂದ ಸ್ಫೋಟದ ಸದ್ದು ಕೇಳಿಸಿತು. ಇದಾದ ನಂತರ, ಹಲವು ಬಾರಿ ಸ್ಫೋಟ ಉಂಟಾಯಿತು. ಅದರ ಜೊತೆಗೆ ಬೆಂಕಿ ಕೆನ್ನಾಲಗೆಯೂ ಹೆಚ್ಚಿತ್ತು' ಎಂದು ಅಧಿಕಾರಿ ತಿಳಿಸಿದರು.

ಮಳಿಗೆಯಲ್ಲಿ ಹೊತ್ತಿ ಉರಿದ ಬೆಂಕಿ

ಹೊತ್ತಿ ಉರಿದಿದ್ದ ಬೆಂಕಿ: 'ಕೆಲವೇ ನಿಮಿಷಗಳಲ್ಲಿ ಇಡೀ ಮಳಿಗೆಗೆ ಬೆಂಕಿ ಆವರಿಸಿತ್ತು. ಮಳಿಗೆಯಲ್ಲಿ ಸಿಲುಕಿದ್ದ ಕಾರ್ಮಿಕರು ಕೂಗಾಡುತ್ತಿದ್ದರು. ಕೆಲ ಸ್ಥಳೀಯರು ರಕ್ಷಣೆಗಾಗಿ ಒಳಗೆ ಹೋಗಲು ಯತ್ನಿಸಿದರು. ಆದರೆ, ಅದು ಸಾಧ್ಯವಾಗಲಿಲ್ಲ' ಎಂದು ಸ್ಥಳೀಯರು ಹೇಳಿದರು.

'ಸ್ಥಳೀಯರು, ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಐವರು ಕಾರ್ಮಿಕರನ್ನು ರಕ್ಷಿಸಿದರು. ಮೂವರು ಕಾರ್ಮಿಕರು ಹೊರಗೆ ಬರಲು ಸಾಧ್ಯವಾಗದೇ, ಸಂಪೂರ್ಣ ಸುಟ್ಟುಹೋಗಿದ್ದಾರೆ' ಎಂದು ಸ್ಥಳೀಯರೊಬ್ಬರು ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Hospital & Medical Jobs

WANTED WARD,OT, ICU Nursing Staff Accommodation given Chaitanya Hospitsl No.80/117 P&T Colony R.T.Nagar Bangalore Contact:9900520357

BUSINESS

Business to Business

Business

WANTED BUSINESS PARTNERS For Saree Business 10 Lakhs Investment Monthly Income 4 Lakhs: 8892501007/ 9606701007

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager The Printers (Mysore) Pvt. Ltd. Bengaluru

PERSONAL

Change of Name

CHANGE OF NAME

I, **RAHUL RAI** Residing at B-325, Mahaveer Rhyolite, Nyanappana Halli, Arekere, Bengaluru, Karnataka- 560076 have changed my name to **RAHOUL ASHOK RAI** vide affidavit dated 16.2.2024 before notary L. Gopalakrishna, Bengaluru. Henceforth I shall be called **RAHOUL ASHOK RAI** only.

I, CALEB JAIN S/o. Rajesh J, R/a. No. 401, 4th Floor, MIMS Northwest Apt, 6th A Main, HRBR Layout, 2nd Block, VTC Kalyannagar Post Bangalore- 560043 have changed my name to CALEB ERNET MOSES vide affidavit dated 15.02.2024 sworn before notary Y.R. Chandrashekar Bangalore.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

DH DECCAN HERALD Classifieds More value, more impact | ಪ್ರಜಾವಾಣಿ | JOB HUNT

JOB — Get your HIRING NEEDS answered. Get the right people for your company...Book your Ad with us now !

www.dhclassifieds.com BOOK NOW

For more details contact: +91 9845114560 | +91 9886213331 | +91 9900428036 | +91 9731810277 | +91 9901641752 | 080-45557163/164

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

(ಕರ್ನಾಟಕ ಸರ್ಕಾರ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ದೂರವಾಣಿ ಸಂಖ್ಯೆ:– 08152–200049

ಇ–ಮೇಲ್: eemidklr@rediffmail.com, eemigwddkolar@gmail.com

ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/240/2023–24/ದಿನಾಂಕ:14–02–2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:07/2023-24/ದಿನಾಂಕ:14-02-2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ **"ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಮಾಲೂರು–ಚೊಕ್ಕಂಡಹಳ್ಳಿ ದೊಡ್ಡ ಕೆರೆಯ ಅಭಿವೃದ್ಧಿಯನ್ನು ಪ್ರಾಧಿಕಾರದ ಪುನರುಜ್ಜೀವನ ಶುಲ್ಕದ ನಿಧಿಯ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗೆ"** ಕೆ.ಡಬ್ಲ್ಯೂ–4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮವಳಿ ಅನ್ವಯ 1ನೇ ದರ್ಜೆ ನೋಂದಾಯಿತ ಗುತ್ತಿಗೆದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 927.00 ಲಕ್ಷ. ನಿಗದಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟ್‌ಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp.karnataka.gov.in ದಿನಾಂಕ:19/02/2024ರ ಸಂಜೆ 04:00 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯನ್ನು ದಿನಾಂಕ:22/02/2024 ರಂದು ಬೆಳಗ್ಗೆ 11.00 ಗಂಟೆಗೆ **ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ** ಇಲ್ಲಿ ಆಯೋಜಿಸಲಾಗಿರುತ್ತದೆ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ (Upload) ಕೊನೆಯ ದಿನಾಂಕ:27/02/2024ರ ಸಂಜೆ 04:00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:28/02/2024ರ ಸಂಜೆ 04:30 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

ನಂದಿನಿ

ಕೋಚಿಮುಲ್ ಹಾಲು ಉತ್ಪಾದಕರ, ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಾಮಾನ್ಯ ಕಲ್ಯಾಣ ಟ್ರಸ್ಟ್ (ನೋಂದಣಿ), ಕೋಲಾರ.

ಎನ್.ಹೆಚ್.–75, ಹುತ್ತೂರು ಅಂಚೆ. ಕೋಲಾರ–563 102.

ಕ್ರ.ಸಂ.ಕೋಚಿಹಾಒ/ಶೇ.ತಾಂ./ಟ್ರಸ್ಟ್/ಇ ಟೆಂಡರ್/ರಾ.ವಿ/10438/2023–24 ದಿ:14.02.2024

ಇ–ಟೆಂಡರ್ ಪ್ರಕಟಣೆ

ಕೋಚಿಮುಲ್ ಹಾಲು ಉತ್ಪಾದಕರ, ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಾಮಾನ್ಯ ಕಲ್ಯಾಣ ಟ್ರಸ್ಟ್ ಎನ್.ಹೆಚ್–75, ಹುತ್ತೂರು ಅಂಚೆ, ಕೋಲಾರ–563102. ರವರಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರ ರಾಸುಗಳಿಗೆ (ಮಿಶ್ರ ತಳಿ ಹೈನುರಾಸುಗಳು ಮತ್ತು ಪಡ್ಡೆಗಳು, ಸ್ಥಳೀಯ ಹೈನುರಾಸುಗಳು ಮತ್ತು ಎಮ್ಮೆಗಳು) ಗುಂಪು ವಿಮಾ ಸೌಲಭ್ಯವನ್ನು ಒಂದು ವರ್ಷದ ಅವಧಿಗೆ ಆಸಕ್ತಿಯುಳ್ಳ ಮತ್ತು IRDAI ನಲ್ಲಿ ನೋಂದಣಿಯಾಗಿರುವ ಅರ್ಹ ಜೀವ ವಿಮಾ ಕಂಪನಿಗಳಿಂದ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ಗಳನ್ನು ಇ–ಟೆಂಡರ್ ಮೂಲಕ ಅಹ್ವಾನಿಸಲಾಗಿದೆ.

ವಿವರಗಳು ಈ ಕೆಳಕಂಡಂತಿವೆ

1	ಇ–ಟೆಂಡರ್ ಲಭಿಸುವ ದಿನಾಂಕ ಮತ್ತು ಸಮಯ	ದಿನಾಂಕ: 19.02.2024 ರಿಂದ 06.04.2024 ಸಂಜೆ 5:30 ಗಂಟೆಯವರೆಗೆ.
2	ಟೆಂಡರ್ ಬಗ್ಗೆ ಸ್ಪಷ್ಟನೆ/ ಅಕ್ಷೇಪಣೆ ಪಡೆಯುವ ಕೊನೆಯ ದಿನಾಂಕ: ಮತ್ತು ಸಮಯ	ದಿನಾಂಕ: 25.03.2024 ರಂದು ಸಂಜೆ 5:30 ಗಂಟೆಯವರೆಗೆ.
3	ಟೆಂಡರ್ ಸಲ್ಲಿಸುವ / ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 06.04.2024 ರಂದು ಸಂಜೆ 5:30 ಗಂಟೆಯ ಒಳಗೆ.
4	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ:08.04.2024 ರಂದು ಬೆಳಗ್ಗೆ 10.00 ಗಂಟೆಯ ನಂತರ.
5	ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 10.04.2024 ರಂದು ಬೆಳಗ್ಗೆ 10.00 ಗಂಟೆಯ ನಂತರ
6	ತಾಂತ್ರಿಕ / ವಾಣಿಜ್ಯ ಟೆಂಡರ್‌ಗಳನ್ನು ತೆರೆಯುವ ಸ್ಥಳ	ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಮಂಡಳಿ ಸಭಾಂಗಣ ಕೋಲಾರ ಡೇರಿ, ಎನ್.ಹೆಚ್.–75, ಹುತ್ತೂರು ಅಂಚೆ. ಕೋಲಾರ–563102.

ಟೆಂಡರ್ ಸಂಬಂಧ ನೀಡಬೇಕಾದ ಅರ್ಜಿ ಶುಲ್ಕ, ಇ.ಎಂ.ಡಿ ಮೊತ್ತ, ಭದ್ರತಾ ಠೇವಣಿ ಹಾಗೂ ಟೆಂಡರ್ ಷರತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ https;//www.kppp.karnataka.gov.in ನಲ್ಲಿ ಲಭ್ಯವಿರುತ್ತದೆ.

ಸಹಿ/–ಮ್ಯಾನೇಂಜಿಗ್ ಟ್ರಸ್ಟೀ,
(ಕೋಮುಲ್ ಟ್ರಸ್ಟ್), ಇ–ಟೆಂಡರ್ ಅಹ್ವಾನ ಪ್ರಾಧಿಕಾರ

ನಗರದಲ್ಲಿ ಇಂದು

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ: ಅತಿಥಿ:ನಿತ್ಯಾನಂದ ವಿವೇಕವಂಶಿ, ರಕ್ತದಾನ ಶಿಬಿರ, ಆಯೋಜನೆ ಮತ್ತು ಸ್ಥಳ: ಬಿಎನ್‌ಎಂ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್, ಬನಶಂಕರಿ 2ನೇ ಹಂತ, ಬೆಳಿಗ್ಗೆ 9

'ದ್ರಾಕ್ಷಿ-ಕಲ್ಲಂಗಡಿ ಮಾರಾಟ ಮೇಳ-2024' ಉದ್ಘಾಟನೆ: ಎಸ್.ಎಸ್. ಮಲ್ಲಿಕಾರ್ಜುನ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ರಾಮಲಿಂಗಾರೆಡ್ಡಿ, ಪಿ.ಸಿ. ಮೋಹನ್, ಉದಯ್ ಬಿ. ಗರುಡಾಚಾರ್, ಬಿ.ಡಿ. ಭೂಕಾಂತ್, ಸಿ. ಪಾಪಣ್ಣ, ಶಾಮ್ಲ ಇಕ್ಬಾಲ್, ರಮೇಶ್ ಡಿ.ಎಸ್., ಆಯೋಜನೆ: ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ (ಹಾಪ್‌ಕಾಮ್ಸ್), ಸ್ಥಳ: ಹಡ್ಸನ್ ವೃತ್ತ, ನೃಪತುಂಗ ರಸ್ತೆ, ಮಧ್ಯಾಹ್ನ 12

ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ, ವಿ.ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ ಪ್ರದಾನ: ಕೆ. ಮರುಳಸಿದ್ದಪ್ಪ, ಪ್ರಶಸ್ತಿ ಪುರಸ್ಕೃತರು: ಮೀರಾಸಾಬಿಹಳ್ಳಿ ಶಿವಣ್ಣ, ಈಶ್ವರ ದೈತೋಟ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಬೂದನೂರು ಪುಟ್ಟಸ್ವಾಮಿ ಅವರ 'ಮೂಡ್ಲುಮಲೆ ಮಾದಯ್ಯ' ಪುಸ್ತಕ ಬಿಡುಗಡೆ: ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷತೆ: ಕಾಳೇಗೌಡ ನಾಗವಾರ, ಪುಸ್ತಕದ ಕುರಿತು: ವೆಂಕಟೇಶ ಇಂದ್ವಾಡಿ, ಅತಿಥಿಗಳು: ಶಿವರಾಮೇಗೌಡ ನಾಗವಾರ, ಉಪಸ್ಥಿತಿ: ರೀತಿ ಬೂದನೂರು, ಆಯೋಜನೆ: ಸಾಹಿತ್ಯ ಸಂಗಮ ಟ್ರಸ್ಟ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4.30

ಬಂಜಗೆರೆ ಜಯಪ್ರಕಾಶ್

ಪುರಂದರದಾಸರು, ಕನಕದಾಸರು, ತ್ಯಾಗರಾಜರ ಆರಾಧನಾ ಮಹೋತ್ಸವ: ಉದ್ಘಾಟನೆ: ಅರ್ಚನ ಕುಲಕರ್ಣಿ, ಗುರುರಾಘವೇಂದ್ರ ಸಂಸ್ಮರಣ ಹಾಗೂ ವ್ಯಾಸ ಪ್ರಶಸ್ತಿ ಪುರಸ್ಕೃತರು: ಎಚ್. ಶ್ರೀನಿವಾಸಮೂರ್ತಿ ಆಚಾರ್ಯ, ರಘುಪತಿ ನಾರಾಯಣ ಭಟ್ಟ, ಪುತ್ತೂರು ನರಸಿಂಹನಾಯಕ್, ಆಯೋಜನೆ: ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ, ಸ್ಥಳ: ದೇವಗಿರಿ ವೆಂಕಟೇಶ್ವರ ಟ್ರಸ್ಟ್, ದೇವಗಿರಿ ವೆಂಕಟೇಶ್ವರ ದೇವಸ್ಥಾನ, ಸಂಜೆ 5

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಮಂಜುನಾಥ ಭಾರತೀ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ರಾಣಿ ಕೆಳದಿ ಚೆನ್ನಮ್ಮ ವಿಜಯೋತ್ಸವ: ಉದ್ಘಾಟನೆ: 'ಮುಖ್ಯಮಂತ್ರಿ' ಚಂದ್ರು, 'ಕರ್ನಾಟಕ ಪ್ರಾದೇಶಿಕ ವಿಚಾರಗಳ ಮಂಡನೆ' ಕುರಿತು: ಅಜಯ್ ಕುಮಾರ್ ಬಿ. ಶರ್ಮ, ಆನಂದ್ ಗುರು, ಗುರುದೇವ್ ನಾರಾಯಣ್ ಕುಮಾರ್, ಅರುಣ್ ಜಾವಗಲ್, ಅತಿಥಿಗಳು: ಕವಿರಾಜ್, ಎಂ. ಜಗದೀಶ್, ಧರ್ಮೇಂದ್ರ ಅರೇನಹಳ್ಳಿ, ಆಯೋಜನೆ: ಕನ್ನಡ ಮೊದಲು, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5ರಿಂದ

ಕರ್ನಾಟಕದ ಜಾನಪದ ಉತ್ಸವ: ಉದ್ಘಾಟನೆ: ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ನರೇಂದ್ರಬಾಬು, ಅತಿಥಿಗಳು: ಎನ್. ನಮ್ರತ, ಭಾರತಿ ಎಂ.ಪಿ., 'ಸಾಕ್ಷಿ ಕಲ್ಲು' ನಾಟಕ ಪ್ರದರ್ಶನ: ರಚನೆ: ಗೊ.ರು. ಚನ್ನಬಸಪ್ಪ, ನಿರ್ದೇಶನ: ರಾಮಮೂರ್ತಿ ಆರ್., ಆಯೋಜನೆ: ಪದ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.30

'ಐ ವಾಂಟ್ ಟು ಸ್ಲೀಪ್' ನಾಟಕ ಪ್ರದರ್ಶನ: ಕಥೆ, ನಿರ್ದೇಶನ: ದಿನೇಶ್ ಕುಮಾರ್, ಆಯೋಜನೆ ಮತ್ತು ಸ್ಥಳ: ರಾಷ್ಟ್ರೀಯ ನಾಟಕ ಶಾಲೆ, ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಅಡ್ಡಗಟ್ಟಿ ಹಲ್ಲೆ: ಆರೋಪಿ ಬಂಧನ

ಬೆಂಗಳೂರು: ಯುವಕ ಹಾಗೂ ಯುವತಿ ಹೊರಟಿದ್ದ ಬೈಕ್ ಅಡ್ಡಗಟ್ಟಿ ಹಲ್ಲೆ ಮಾಡಿದ್ದ ಆರೋಪದಡಿ ಎನ್. ರಾಕೇಶ್ (23) ಅವರನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕುಂದನಹಳ್ಳಿ ನಿವಾಸಿ ರಾಕೇಶ್, ಫೆ.1ರಂದು ಸಂಜೆ ಕೃತ್ಯ ಎಸಗಿ ಪರಾರಿಯಾಗಿದ್ದ. ಈತನ ಕೃತ್ಯವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದ ಸಾರ್ವಜನಿಕರೊಬ್ಬರು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು. ವಿಡಿಯೊ ಆಧರಿಸಿ ಪ್ರಕರಣ ದಾಖಲಿಸಿಕೊಂಡು ರಾಕೇಶ್‌ನನ್ನು ಸೆರೆ ಹಿಡಿಯಲಾಗಿದೆ' ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಶಿವಕುಮಾರ್ ಗುಣಾರೆ ತಿಳಿಸಿದರು.

'ಆರೋಪಿ ರಾಕೇಶ್, ಯುವಕನನ್ನು ತಳ್ಳಾಡಿದ್ದ. ಕಾಲಿನಿಂದ ಒದ್ದಿದ್ದ. ರಕ್ಷಣೆಗೆ ಬಂದವರನ್ನೂ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ' ಎಂದು ಹೇಳಿದರು.

'ವಿಡಿಯೊ ಗಮನಕ್ಕೆ ಬರುತ್ತಿದ್ದಂತೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಯುವಕ–ಯುವತಿಯಿಂದ ಹೇಳಿಕೆ ಪಡೆಯಬೇಕಿದೆ' ಎಂದರು. ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ

'ದಿನಕ್ಕೆ 2 ಬಾರಿ ಉಚಿತ ಯೋಗ ತರಬೇತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಆಯುಷ್ ಚಿಕಿತ್ಸಾಲಯಗಳಲ್ಲಿ ಆಯುಷ್ಮಾನ್ ಮಂದಿರಗಳ ಮೂಲಕ ನುರಿತ ಯೋಗ ತರಬೇತುದಾರರಿಂದ ದಿನಕ್ಕೆ ಎರಡು ಬಾರಿ ಉಚಿತ ಯೋಗ ತರಬೇತಿ ಕಾರ್ಯಕ್ರಮ ಜಾರಿಗೆ ತರಲಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ರಥಸಪ್ತಮಿ ಅಂಗವಾಗಿ ವಿಧಾನಸೌಧದ ಮುಂಭಾಗದಲ್ಲಿ ಆಯುಷ್ ಇಲಾಖೆ ಮತ್ತು ಯೋಗ ಗಂಗೋತ್ರಿ ಟ್ರಸ್ಟ್ ಸಹಯೋಗದಲ್ಲಿ ಭಾನುವಾರ ನಡೆದ ಯೋಗ ಮತ್ತು 108 ಸೂರ್ಯ ನಮಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಸೂರ್ಯ ನಮಸ್ಕಾರ ಮಾಡುವುದರಿಂದ ಉತ್ತಮ ಶಾರೀರಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯ ಬೆಳೆಸಿಕೊಳ್ಳಬಹುದು' ಎಂದರು.

'ಸೂರ್ಯನಮಸ್ಕಾರ, ಇತರ ಆಸನಗಳು, ಪ್ರಾಣಾಯಾಮ ಹಾಗೂ ಧ್ಯಾನ ಮತ್ತಿತರ ಅಭ್ಯಾಸಗಳಿಂದ ದೇಹ, ಮನಸ್ಸು ಚುರುಕುಗೊಳ್ಳುತ್ತದೆ. ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಆಧುನಿಕ ಜಗತ್ತಿನ ಬದಲಾದ ಜೀವನ ಶೈಲಿಯಿಂದ ಉಂಟಾಗುವ ಮನುಷ್ಯನ ಶಾರೀರಿಕ ಮತ್ತು ಮಾನಸಿಕ ಸಮಸ್ಯೆಗಳಿಗೆ ಸೂರ್ಯ ನಮಸ್ಕಾರದಂಥ ಯೋಗಾಭ್ಯಾಸಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಸೂಕ್ತ' ಎಂದು ಅಭಿಪ್ರಾಯಪಟ್ಟರು.

ವಿಧಾನಸೌಧದ ಎದುರು ಭಾನುವಾರ ನಡೆದ 'ಸೂರ್ಯ ನಮಸ್ಕಾರ – ಯೋಗ ಉತ್ಸವ 2024' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಯೋಗ ಅಭ್ಯಾಸಿಗಳು ಪ್ರಜಾವಾಣಿ ಚಿತ್ರ

ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಮಾತನಾಡಿ, 'ಮನಸ್ಸು ಮತ್ತು ಆರೋಗ್ಯ ಚೆನ್ನಾಗಿರಬೇಕೆಂದರೆ ಯೋಗ ಅಭ್ಯಾಸ ಅತ್ಯವಶ್ಯಕವಾಗಿದೆ. ನಾನು ಕೂಡಾ ಕಳೆದ ಕೆಲವು ವರ್ಷಗಳಿಂದ ಯೋಗಭ್ಯಾಸ ಮಾಡುತ್ತಿರುವುದರಿಂದ ಬಹಳಷ್ಟು ಬದಲಾಗಿದ್ದೇನೆ. ಸೂರ್ಯ ನಮಸ್ಕಾರ ಮಾಡುವುದು ಸ್ವಲ್ಪ ಕಷ್ಟವಾದರೂ, ಇದರಿಂದ ಸದೃಢವಾದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಆದ್ದರಿಂದ, ಎಲ್ಲರೂ ಯೋಗಭ್ಯಾಸ ಮತ್ತು ಸೂರ್ಯ ನಮಸ್ಕಾರ ಮಾಡುವುದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದರು.

ಆಯುಷ್ ಇಲಾಖೆಯ ಆಯುಕ್ತ ಶ್ರೀನಿವಾಸಲು, ಯೋಗ ಗಂಗೋತ್ರಿ ಸಂಸ್ಥೆಯ ಪ್ರಮುಖರಾದ ಡಾ. ಆರಾಧ್ಯ ಗುರುರಾಜ ಇದ್ದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಮೇಲ್ ಮಾಡಿ: peoplesproblem@prajavani.co.in
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

‘ಜೋಡಿಹುಸ್ಕೂರು: ರಸ್ತೆ ದುರಸ್ತಿಗೊಳಿಸಿ’

ಮಹದೇವಪುರ ಕ್ಷೇತ್ರದ ಮಂಡೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜೋಡಿಹುಸ್ಕೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ದೊಡ್ಡ ಗುಂಡಿಗಳು ಬಿದ್ದಿದ್ದು, ಸಂಪೂರ್ಣ ಹಾಳಾಗಿದೆ. ಈ ರಸ್ತೆ ಇದುವರೆಗೂ ಡಾಂಬರು ಕಂಡಿಲ್ಲ. ಇಂತಹ ರಸ್ತೆಯಲ್ಲಿ ಗ್ರಾಮದ ನಿವಾಸಿಗಳು ತಮ್ಮ ಜಮೀನುಗಳು ಹಾಗೂ ದೇವಸ್ಥಾನಕ್ಕೆ ಹೋಗಿಬರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಇದುವರೆಗೂ ಪ್ರಯೋಜನವಾಗಿಲ್ಲ. ಕೂಡಲೇ ಈ ರಸ್ತೆಯನ್ನು ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಎಂ.ಜಗದೀಶ್ ಗೌಡ, ಜೋಡಿಹುಸ್ಕೂರು

‘ಪಾದಚಾರಿ ಮಾರ್ಗ ಸರಿಪಡಿಸಿ’

ಬೆಂಗಳೂರು ರೈಲು ನಿಲ್ದಾಣ ಪಕ್ಕದ ಅಂಡರ್‌ಪಾಸ್‌ನಲ್ಲಿರುವ ಪಾದಚಾರಿ ಮಾರ್ಗದ ಕಾಮಗಾರಿಯು ಅರ್ಧಕ್ಕೆ ನಿಂತಿದೆ.

ಆ ಸ್ಥಳದಲ್ಲಿ ಇದೀಗ ನೀರು ಪಾಚಿಕಟ್ಟಿಕೊಂಡಿರುವ ಪರಿಣಾಮ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದೆ. ಪ್ರತಿದಿನ ಇದೇ ಪಾದಚಾರಿ ಮಾರ್ಗದಲ್ಲಿ ಅಸಂಖ್ಯಾತ ಜನರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬಿಬಿಎಂಪಿಯು ಕೂಡಲೇ ಅರ್ಧಕ್ಕೆ ಬಿಟ್ಟಿರುವ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಸ್ವಚ್ಛತೆಗೆ ಒತ್ತು ನೀಡಬೇಕು.

ಶಿವಪ್ರಸಾದ್
ಪಾದಚಾರಿ

‘ಕುಡಿಯುವ ನೀರು ಪೂರೈಕೆಗೆ ಆಗ್ರಹ’

ಜೆ.ಪಿ. ನಗರದ ಕೃಷ್ಣಮ್ ರಾಜು ಬಡಾವಣೆಯ ಕಲ್ಯಾಣಿ ಮ್ಯಾಗ್ನಮ್ ರಸ್ತೆಯ 7ನೇ ಅಡ್ಡರಸ್ತೆಯ ನಿವಾಸಿಗಳಿಗೆ ಕಾವೇರಿ ನೀರು ಪೂರೈಕೆ ಆಗುತ್ತಿಲ್ಲ. ಇದರಿಂದ, ಖಾಸಗಿ ಟ್ಯಾಂಕರ್‌ನವರಿಗೆ ಹಣ ಕೊಟ್ಟು ಕುಡಿಯುವ ನೀರು ಖರೀದಿ ಮಾಡುವ ಪರಿಸ್ಥಿತಿ ಎದುರಾಗಿದೆ. ಈ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿಕಾರಿಗಳಿಗೆ ದೂರು ನೀಡಿದರೂ ಸರಿಯಾಗಿ ಸ್ಪಂದಿಸುತ್ತಿಲ್ಲ. ಕೂಡಲೇ ಈ ಭಾಗಕ್ಕೆ ಸಮರ್ಪಕವಾಗಿ ಕುಡಿಯುವ ನೀರಿನ ಪೂರೈಕೆ ಮಾಡಬೇಕು.

ಅನಿತಾ, ಕೃಷ್ಣಮ್ ರಾಜು ಬಡಾವಣೆ

‘ರಸ್ತೆಯಲ್ಲಿ ಹರಿಯುತ್ತಿದೆ ಚರಂಡಿ ನೀರು’

ನಾಗವಾರ ಜಂಕ್ಷನ್ ಸಿಗ್ನಲ್ ರಸ್ತೆಯಲ್ಲಿ ಕಳೆದ ಒಂದು ತಿಂಗಳಿಂದ ತ್ಯಾಜ್ಯ ನೀರು ಮುಖ್ಯರಸ್ತೆಯಲ್ಲಿ ಹರಿಯುತ್ತಿದೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ರಸ್ತೆಯಲ್ಲಿ ತ್ಯಾಜ್ಯ ನೀರು ಹರಿಯುತ್ತಿರುವ ಪರಿಣಾಮ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಇದರಿಂದ, ಅಪಘಾತಗಳು ಸಂಭವಿಸುವ ಅಪಾಯವಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಯನ್ನು ಬಗೆಹರಿಸಿ ಸುಗಮ ಸಂಚಾರಕ್ಕೆ ಅವಕಾಶ ಮಾಡಿ ಕೊಡಬೇಕು.

ರವಿ, ನಾಗವಾರ

ಕಾಡಾನೆ ದಾಳಿ: ಇಬ್ಬರು ಮಹಿಳೆಯರ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ಇಲ್ಲಿಗೆ ಸಮೀಪದ ತಮಿಳುನಾಡು ಗಡಿಗ್ರಾಮ ಅಣ್ಣೆಯಾಳ ಬಳಿ ಭಾನುವಾರ ಕಾಡಾನೆ ದಾಳಿಯಿಂದ ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ.

ತಮಿಳುನಾಡಿನಅಣ್ಣೆಯಾಳಗ್ರಾಮದ ಅಂಗನವಾಡಿ ಕಾರ್ಯಕರ್ತೆ ವಸಂತಮ್ಮ (37) ಮತ್ತು ಕೃಷಿ ಕೂಲಿ ಕಾರ್ಮಿಕ ಮಹಿಳೆ ಅಶ್ವಥಮ್ಮ(40) ಮೃತರು.

ರಜೆ ಇದ್ದ ಕಾರಣ ವಸಂತಮ್ಮ ತೋಟದ ಕೆಲಸಕ್ಕೆ ತೆರಳಿದ್ದರು. ಅಶ್ವಥಮ್ಮ ಎಂದಿನಂತೆ ಕೂಲಿ ಕೆಲಸ ಮಾಡುತ್ತಿದ್ದರು. ತೋಟಕ್ಕೆ ನುಗ್ಗಿದ ಕಾಡಾನೆಗಳ ಹಿಂಡು ಅಲ್ಲಿ ಕೆಲಸ ಮಾಡುತ್ತಿದ್ದ ಈ ಇಬ್ಬರ ಮೇಲೆ ದಾಳಿ ನಡೆಸಿದೆ. ಅಲ್ಲದೆ ಹಸುಗಳ ಮೇಲೂ ದಾಳಿ ನಡೆಸಿದ್ದು, ಮೂರು ಹಸುಗಳು ಗಾಯಗೊಂಡಿವೆ.

ಕಾಡಾನೆ ದಾಳಿ ನಿಯಂತ್ರಿಸುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ ಎಂದು ಆರೋಪಿಸಿ ತಮಿಳುನಾಡಿನ ಥಳೀ ವಿಧಾನಸಭಾ ಕ್ಷೇತ್ರದ ಶಾಸಕ ಟಿ.ರಾಮಚಂದ್ರನ್ ನೇತೃತ್ವದಲ್ಲಿ ಗ್ರಾಮಸ್ಥರು ರಸ್ತೆ ತಡೆ ನಡೆಸಿದರು.

ಕಳೆದ ಕೆಲವು ದಿನಗಳಿಂದ ಗುಮ್ಮಳಾಪುರ, ಅಣ್ಣೆಯಾಳ, ಥಳೀ ಮತ್ತು ಆನೇಕಲ್ ತಾಲ್ಲೂಕಿನ ಮೆಣಸಿಗನಹಳ್ಳಿ, ಕಾಳನಾಯಕನಹಳ್ಳಿ ಗ್ರಾಮಗಳಲ್ಲಿ ಕಾಡಾನೆಗಳ ಹಿಂಡು ಗೋಚರಿಸುತ್ತಿದೆ.

ಆನೇಕಲ್‌ಗೆ ಸಮೀಪದ ಅಣ್ಣೆಯಾಳದಲ್ಲಿ ಕಾಡಾನೆ

‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮದಲ್ಲಿ ಡಿ.ಕೆ. ಶಿವಕುಮಾರ್

ಬೆಂಗಳೂರಿಗೆ ಹೊಸ ರೂಪ ನೀಡಲು ಯೋಜನೆ

ಪ್ರಜಾವಾಣಿ ವಾರ್ತೆ

ಯಶವಂತಪುರ ಮತ್ತು ಆರ್‌.ಆರ್‌. ನಗರ ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಬಿ.ಪಿ.ಇಡಿ ಮೈದಾನದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ‘ಬಾಗಿಲಿಗೆ ಬಂತು ಸರ್ಕಾರ ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಾರ್ವಜನಿಕರ ಅಹವಾಲು ಆಲಿಸಿದರು

ರಾಜರಾಜೇಶ್ವರಿನಗರ: ‘ಬೆಂಗಳೂರಿಗೆ ಹೊಸ ರೂಪ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಹಲವು ಯೋಜನೆಗಳನ್ನು ಘೋಷಿಸಿದ್ದಾರೆ. ಇದಕ್ಕೆ ಪೂರಕವಾಗಿ ಸದ್ಯದಲ್ಲೇ ಪಾಲಿಕೆ ಬಜೆಟ್ ಮಂಡನೆಯಾಗಲಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಬಿ.ಪಿ.ಇಡಿ ಮೈದಾನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬೆಂಗಳೂರಿನ ಹೊಸ ಯೋಜನೆಗಳಿಗೆ ಸಂಪನ್ಮೂಲ ಕ್ರೋಡೀಕರಿಸಲು ನಮ್ಮದೇ ಆದ ಯೋಜನೆಗಳಿವೆ. ಬೆಂಗಳೂರಿನಲ್ಲಿ ಇನ್ನು ಮುಂದೆ ಮೆಟ್ರೊ ಸಂಚರಿಸುವ ಮಾರ್ಗದಲ್ಲಿ ಫ್ಲೈಓವರ್ ನಿರ್ಮಾಣಕ್ಕೂ ತೀರ್ಮಾನ ಮಾಡಲಾಗಿದೆ. ಈ ಬಗ್ಗೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ’ ಎಂದರು.

‘ಯಶವಂತಪುರದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಟನಲ್ ರಸ್ತೆ ನಿರ್ಮಾಣಕ್ಕಾಗಿ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲಾಗುತ್ತಿದೆ. ಸುಮನಹಳ್ಳಿ, ಗೊರಗುಂಟೆ ಪಾಳ್ಯ ಸೇರಿದಂತೆ ಇತರ ಕಡೆಗಳಲ್ಲಿ ಈ ಯೋಜನೆ ತರಲು ಸಿದ್ಧತೆ ಮಾಡುತ್ತಿದ್ದೇವೆ’ ಎಂದರು.

ಹಲವು ಸಮಸ್ಯೆ ಇತ್ಯರ್ಥ: ಮಾತು ಬಾರದ ಸುನೀತಾ ಬಾಯಿ ತನ್ನ ಮಗಳು ಅರ್ಪಿತಾ ಮೂಲಕ ಸಮಸ್ಯೆ ಹೇಳಿಕೊಂಡರು. ಮಗುವಿನ ವಾಕ್ಚಾತುರ್ಯಕ್ಕೆ ಮೆಚ್ಚುಗೆ ಸೂಚಿಸಿದ ಡಿ.ಕೆ. ಶಿವಕುಮಾರ್, ‘ಸುನೀತಾ ಬಾಯಿ ಅವರಿಗೆ ಪಿಂಚಣಿ ಮತ್ತು ಗೃಹಲಕ್ಷ್ಮೀ ಹಣ ಬರುವಂತೆ ವ್ಯವಸ್ಥೆ ಮಾಡಬೇಕು’ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಆರ್.ಆರ್ ನಗರ ವಾಸಿ ಎರಡು ಕಾಲುಗಳಿಲ್ಲದ ರಾಜಪ್ಪ ಅವರು ಪೆಟ್ಟಿಗೆ ಅಂಗಡಿಯ ಬೇಡಿಕೆ ಇಟ್ಟಾಗ, ತಕ್ಷಣ ಸ್ಪಂದಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು. ‘ಕೆಂಪೇಗೌಡ ಬಡಾವಣೆಗೆ ಜಮೀನು ಸ್ವಾಧೀನ ಪಡಿಸಿಕೊಳ್ಳುವ ಮುನ್ನವೇ ನಮ್ಮ ಜಾಗದಲ್ಲಿ ಮನೆ ನಿರ್ಮಾಣ ಮಾಡಿದ್ದೆವು. ಆದರೂ ಮನೆ ಕೆಡವಲಾಗಿದೆ’ ಎಂದು ಚಂದ್ರಶೇಖರ್ ಅಲವತ್ತುಕೊಂಡರು.

ಪೀಣ್ಯದಲ್ಲಿ ಜೋಪಡಿ ಕಟ್ಟಿಕೊಂಡು ವಾಸ ಮಾಡುತ್ತಿದ್ದು, ಜಾಗದ ಮಾಲೀಕರಿಗೆ ತಿಂಗಳಿಗೆ ₹1 ಸಾವಿರ ಕಟ್ಟುತ್ತಿದ್ದೇವೆ ಎಂದು ರೇಣುಕಾ, ರಂಗಮ್ಮ, ಗುರುಬಾಯಿ, ಕವಿತಾ, ಶಾಂತಮ್ಮ ಸಚಿವರ ಬಳಿ ಹೇಳಿಕೊಂಡರು. ‘ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಅರ್ಜಿ ಸಲ್ಲಿಸಿ, ಖುದ್ದಾಗಿ ನಾನೇ ಮನೆ ಸಿಗುವಂತೆ ವ್ಯವಸ್ಥೆ ಮಾಡುತ್ತೇನೆ’ ಎಂದು ಸಚಿವರು ಆಶ್ವಾಸನೆ ನೀಡಿದರು.

‘ಗಂಡ, ಮಕ್ಕಳಿಲ್ಲದ ನಾನು ಒಬ್ಬಂಟಿ. ನನ್ನ ಬಳಿ ಪಡಿತರ ಚೀಟಿ ಇಲ್ಲ’ ಎಂದು ಆರ್.ಆರ್.ನಗರದ ಸಿದ್ದಲಿಂಗಮ್ಮ ಕಣ್ಣೀರಿಟ್ಟಾಗ ‘ನಿಮ್ಮ ಜೊತೆಗೆ ನಮ್ಮ ಸರ್ಕಾರ ಇದೆ’ ಎಂದು ಸಮಾಧಾನ ಮಾಡಿದರು.

ತುರ್ತು ಕಾರ್ಯದ ನಿಮಿತ್ತ ಡಿ.ಕೆ. ಶಿವಕುಮಾರ್ ಅವರು ತೆರಳಿದ ನಂತರ ಸಂಸದ ಡಿ.ಕೆ.ಸುರೇಶ್ ಅವರು ಜನರ ಸಮಸ್ಯೆಗಳನ್ನು ಆಲಿಸಿದರು.

ಶಾಸಕರಾದ ಮುನಿರತ್ನ, ಎಸ್‌.ಟಿ. ಸೋಮಶೇಖರ್, ರಾಜ್ಯಸಭೆಯ ಮಾಜಿ ಸದಸ್ಯ ರಾಜೀವ್ ಗೌಡ, ಆಡಳಿತಾಧಿಕಾರಿ ರಾಕೇಶ್ ಸಿಂಗ್, ಬಿಡಿಎ ಆಯುಕ್ತ ಜಯರಾಮ್, ಜಲಮಂಡಳಿ ವ್ಯವಸ್ಥಾಪಕ ನಿರ್ದೇಶಕ ರಾಮ್ ಪ್ರಸಾತ್ ಮನೋಹರ್, ವಲಯ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್, ಅಧಿಕಾರಿಗಳು ಭಾಗವಹಿಸಿದ್ದರು.

ಡಿಸಿಎಂ ಹೊಗಳಿದ ಶಾಸಕರು

ಬಿಜೆಪಿ ಶಾಸಕರಾದ ಯಶವಂತಪುರ ಕ್ಷೇತ್ರದ ಎಸ್‌.ಟಿ. ಸೋಮಶೇಖರ್ ಮತ್ತು ಆರ್‌.ಆರ್‌. ನಗರ ಕ್ಷೇತ್ರದ ಮುನಿರತ್ನ ಇಬ್ಬರೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಹೊಗಳಿದರು. ಸಂಸದ ಡಿ.ಕೆ. ಸುರೇಶ್ ಕಾರ್ಯಕ್ಕೂ ಮೆಚ್ಚುಗೆ ವ್ಯಕ್ತಪಡಿಸಿದರು.

‘ಬೆಂಗಳೂರಿನ ಅಭಿವೃದ್ಧಿಯ ಬಗ್ಗೆ ಡಿ.ಕೆ. ಶಿವಕುಮಾರ್ ದೂರದೃಷ್ಟಿ ಹೊಂದಿದ್ದಾರೆ. ಬೆಂಗಳೂರಿಗೆ ಉತ್ತಮ ಕೊಡುಗೆ ಕೊಟ್ಟೇ ಕೊಡುತ್ತಾರೆ ಎಂಬ ನಂಬಿಕೆ ಇದೆ’ ಎಂದು ಶಾಸಕ ಮುನಿರತ್ನ ವಿಶ್ವಾಸ ವ್ಯಕ್ತಪಡಿಸಿದರು.

‘ಜನಸ್ಪಂದನ ಸಭೆಗಳಲ್ಲಿ ಜನರ ಸಮಸ್ಯೆಗಳು ಪರಿಹಾರಗೊಳ್ಳುತ್ತಿವೆ. ನನ್ನ ಕ್ಷೇತ್ರದಲ್ಲಿ ಕಸ ವಿಲೇವಾರಿ ಸಮಸ್ಯೆ, ನೀರಿನ ಸಮಸ್ಯೆಗಳೆಲ್ಲ ಮುಕ್ತಿ ಕಾಣುತ್ತಿವೆ. ಡಿ.ಕೆ. ಸಹೋದರರಿಬ್ಬರೂ ಉತ್ತಮ ಕೆಲಸ ಮಾಡುತ್ತಿದ್ದಾರೆ’ ಎಂದು ಶಾಸಕ ಸೋಮಶೇಖರ್ ಶ್ಲಾಘಿಸಿದರು.

ಸುದ್ದಿ 2 ನಿಮಿಷ

ರಸ್ತೆ ದುರಸ್ತಿಗೆ ₹280 ಕೋಟಿ ಬಿಡುಗಡೆ

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನಾ ಕೋಟಾದಲ್ಲಿ 28 ವಿಧಾನಸಭೆ ಕ್ಷೇತ್ರಗಳಿಗೆ ₹280 ಕೋಟಿ ಬಿಡುಗಡೆ ಮಾಡಿದ್ದಾರೆ.

ಪಕ್ಷಭೇದ ಮರೆತು ಎಲ್ಲ ವಿಧಾನಸಭೆ ಕ್ಷೇತ್ರಗಳಿಗೆ ತಲಾ ₹10 ಕೋಟಿ ಬಿಡುಗಡೆ ಮಾಡಿದ್ದು, ಈ ಹಣದಲ್ಲಿ ರಸ್ತೆ ದುರಸ್ತಿ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಸ್ಥಳೀಯ ಶಾಸಕರೊಂದಿಗೆ ಚರ್ಚಿಸಿ ಕಾಮಗಾರಿಗಳನ್ನು ನಡೆಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚಿಸಿದ್ದಾರೆ.

ಅನುದಾನ ಬಿಡುಗಡೆ ಮಾಡಿ ಫೆ.13ರಂದು ಟಿಪ್ಪಣಿಯನ್ನು ಮುಖ್ಯ ಆಯುಕ್ತರಿಗೆ ಕಳುಹಿಸಿದ್ದಾರೆ.

ಕುಣಿಗಲ್: ಕುದುರೆ ಫಾರ್ಮ್ ರಕ್ಷಣೆಗೆ ಆಗ್ರಹಿಸಿ ಬೈಕ್ ರ್‍ಯಾಲಿ

ಕುಣಿಗಲ್: ಕುಣಿಗಲ್ ಕುದುರೆ ಫಾರ್ಮ್‌ನಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್ ನಿರ್ಮಾಣ ಖಂಡಿಸಿ ಬೆಂಗಳೂರಿನ ವೃಕ್ಷ ಫೌಂಡೇಷನ್ ಮತ್ತು ಬೈಕ್ ರೈಡರ್ಸ್ ತಂಡಗಳು ಭಾನುವಾರ ಬೆಂಗಳೂರಿನಿಂದ ಕುಣಿಗಲ್‌ವರೆಗೆ ಬೈಕ್ ರ್‍ಯಾಲಿ ನಡೆಸಿದರು.

ಬೆಂಗಳೂರಿನ ಜಯನಗರದಿಂದ ‘ಸ್ಟಡ್ ಫಾರ್ಮ್ ಉಳಿಸಿ’ ಎಂಬ ಘೋಷವಾಕ್ಯ ಇದ್ದ ಬಾವುಟ ಪ್ರದರ್ಶಿಸುತ್ತ ಬಂದ ತಂಡಗಳು ಪಟ್ಟಣದ ಹುಚ್ಚಮಾಸ್ತಿ ಗೌಡ ವೃತ್ತದಲ್ಲಿ ಸಭೆ ನಡೆಸಿದರು.

ಕುಣಿಗಲ್ ಕುದುರೆ ಫಾರ್ಮ್‌ನಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್ ಮಾಡುವುದರಿಂದ ಕುದುರೆ ತಳಿ ಸಂವರ್ಧನ ಕೇಂದ್ರ ಹಾಗೂ ಅದರ ಸುಂದರ ಪರಿಸರದಲ್ಲಿರುವ ಪ್ರಾಣಿ, ಪಕ್ಷಿ ಮತ್ತು ಮರಗಳ ಸಂಪತ್ತು ನಶಿಸಲಿದೆ. ಕುದುರೆ ಫಾರ್ಮ್ ಉಳಿವಿಗಾಗಿ ನಡೆಯುತ್ತಿರುವ ಹೋರಾಟಕ್ಕೆ ವಿದೇಶಗಳಿಂದಲೂ ಬೆಂಬಲ ಸಿಗುತ್ತಿದೆ. ಹೋರಾಟ ಮುಂದುವರೆಸಲಾಗುವುದು ಎಂದು ವೃಕ್ಷ ಫೌಂಡೇಶನ್‌ನ ವಿಜಯ್ ನಿಶಾಂತ್ ಹೇಳಿದರು.

ಕುದುರೆ ಫಾರ್ಮ್ ಉಳಿವು ಹೋರಾಟ ಸಮಿತಿಯ ಬಿ.ಎಂ. ಹುಚ್ಚೇಗೌಡ, ಬಿ.ಎನ್. ಜಗದೀಶ್, ಜಿ.ಕೆ.ನಾಗಣ್ಣ, ಕೆ.ಎಲ್.ಹರೀಶ್, ತರೀಕೆರೆ ಪ್ರಕಾಶ್, ಬೈಕ್ ರೈಡರ್ಸ್ ತಂಡದ ಮಾಧವ್, ಚೇತನ್, ಚೈತ್ರಾ ಸೇರಿದಂತೆ ವಿವಿಧ ತಂಡಗಳು ಭಾಗವಹಿಸಿದ್ದವು.

‘ಕಲ್ಲಡ್ಕ ರಿಪಬ್ಲಿಕ್ ಅನ್ನು ಮಟ್ಟ ಹಾಕಲಿ’

ಪ್ರಜಾವಾಣಿ ವಾರ್ತೆ

ಕ್ರಿಯಾ ಮಾಧ್ಯಮ ಪ್ರಕಾಶನದ ತಡಗಳಲೆ ಸುರೇಂದ್ರ ರಾವ್ (ಎಡದಿಂದ ಎರಡನೆಯವರು) ಅನುವಾದಿಸಿದ ‘ವಿ.ಡಿ. ಸಾವರ್ಕರ್–ಏಳು ಮಿಥ್ಯೆಗಳು’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಜನವಾದಿ ಮಹಿಳಾ ಸಂಘಟನೆ ರಾಜ್ಯ ಉಪಾಧ್ಯಕ್ಷೆ ಕೆ.ಎಸ್. ವಿಮಲಾ, ಚಿಂತಕ ಕೆ. ಪ್ರಕಾಶ್, ಪುಸ್ತಕದ ಮೂಲ ಕರ್ತೃ ಶಂಸುಲ್ ಇಸ್ಲಾಂ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಸಾಮಾಜಿಕ ಹೋರಟಗಾರ್ತಿ ಮೀನಾಕ್ಷಿ ಬಾಳಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಕಲ್ಲಡ್ಕ ರಿಪಬ್ಲಿಕ್ ಅನ್ನು ಮಟ್ಟಹಾಕಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಆಗ ಮಾತ್ರ ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟವಾಗಿ ಉಳಿಯಲು ಸಾಧ್ಯ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಪ್ರತಿಪಾದಿಸಿದರು.

ತಡಗಳಲೆ ಸುರೇಂದ್ರ ರಾವ್ ಅನುವಾದಿಸಿದ ‘ವಿ.ಡಿ. ಸಾವರ್ಕರ್ ಏಳು ಮಿಥ್ಯೆಗಳು’ ಪುಸ್ತಕ ಬಿಡುಗಡೆ ಮತ್ತು ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಹತ್ತು ವರ್ಷಗಳ ಹಿಂದೆ ಪ್ರವೀಣ್ ತೊಗಾಡಿಯಾ ನೇತೃತ್ವದಲ್ಲಿ ದೊಡ್ಡ ತ್ರಿಶೂಲಗಳನ್ನು ವಿತರಿಸಿದ್ದರು. ಅವರನ್ನು ಬಂಧಿಸಿದರೆ ದಂಗೆ ಉಂಟಾಗುತ್ತದೆ ಎಂದು ಕಾಂಗ್ರೆಸ್ ನಾಯಕರು ಸೇರಿದಂತೆ ಎಲ್ಲರೂ ಹೇಳಿದ್ದರು. ಅವರನ್ನು ಬಂಧಿಸಿ, ಅಜ್ಮೇರ್ ಸುತ್ತಮುತ್ತ ನಿಷೇಧಾಜ್ಞೆ ಹೇರಿದ ಮೇಲೆ ಯಾವ ಹಿಂಸೆಯೂ ಆಗಲಿಲ್ಲ. ತ್ರಿಶೂಲ ವಿತರಣೆ ನಿಂತೇ ಹೋಯಿತು. ರಾಜ್ಯದ ಹಿಂದುತ್ವದ ಪ್ರಯೋಗಶಾಲೆಯಾದ ಕಲ್ಲಡ್ಕ ರಿಪಬ್ಲಿಕ್ ಮೇಲೆ ಇಂಥದ್ದೇ ಕ್ರಮ ಕೈಗೊಳ್ಳಬೇಕು’ ಎಂದು ಹೇಳಿದರು.

ಅಂಕಣಕಾರ ಶಂಸುಲ್ ಇಸ್ಲಾಂ ಮಾತನಾಡಿ, ‘ಸಂಘ ಪರಿವಾರ ಎಂಬುದು ಉತ್ತಮ ಶಬ್ದ. ಅವುಗಳನ್ನು ಆರ್‌ಎಸ್‌ಎಸ್ ಮತ್ತು ಅದರ ಅಂಗ-ಸಂಸ್ಥೆಗಳಿಗೆ ಬಳಸಬಾರದು. ಅವು ಬೆಂಕಿ ಹಚ್ಚುವ ಗ್ಯಾಂಗ್, ಹಿಂಸಾ ಗ್ಯಾಂಗ್‌ಗಳು’ ಎಂದು ಕಿಡಿಕಾರಿದರು.

‘ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಸಿಖ್ ರಾಷ್ಟ್ರೀಯವಾದಗಳೆಂದು ವಿಭಾಗಿಸುತ್ತಾ ಹೋದರೆ ದೇಶ ಉಳಿಯುವುದೇ’ ಎಂದು ಪ್ರಶ್ನಿಸಿದರು.

ಪುಸ್ತಕ ಪರಿಚಯಿಸಿದ ಮೀನಾಕ್ಷಿ ಬಾಳಿ, ‘ಸಾವರ್ಕರ್ ತನ್ನ ಬಗ್ಗೆ ಹಲವು ಸುಳ್ಳುಗಳನ್ನು ಹೇಳಿದ್ದರು. ಈಗ ಸಾವರ್ಕರ್ ಬಗ್ಗೆ ಸುಳ್ಳುಗಳು ಹರಡುತ್ತಿವೆ. ಸಾವರ್ಕರ್ ಬಗೆಗಿನ ಪ್ರಮುಖ ಏಳು ಸುಳ್ಳುಗಳನ್ನು ಈ ಕೃತಿಯಲ್ಲಿ ಸಾಕ್ಷಿ ಸಹಿತ ವಿವರಿಸಲಾಗಿದೆ’ ಎಂದು ತಿಳಿಸಿದರು.

ಜಾತಿ ಧರ್ಮ ಮೀರಿ 1857ರ ಸಿಪಾಯಿ ದಂಗೆಯಲ್ಲಿ ಸೈನಿಕರು ಪಾಲ್ಗೊಂಡಿದ್ದು ಬ್ರಿಟಿಷರಿಗೆ ನುಂಗಲಾರದ ತುತ್ತಾಗಿತ್ತು. ಅದಕ್ಕಾಗಿ ಧರ್ಮಗಳ ಹೆಸರಲ್ಲಿ ಸಮಾಜವನ್ನು ಒಡೆಯಬೇಕಿತ್ತು. ಇಂಗ್ಲೆಂಡ್‌ನಲ್ಲಿ ಕೊಲೆ ಪ್ರಕರಣದಲ್ಲಿ ಬಂಧಿತರಾಗಿದ್ದ ಸಾವರ್ಕರ್ ಅವರನ್ನು ಈ ಕೆಲಸಕ್ಕೆ ಬ್ರಿಟಿಷರು ಬಳಸಿಕೊಂಡರು ಎಂದು ತಡಗಳಲೆ ಸುರೇಂದ್ರ ರಾವ್ ಮಾಹಿತಿ ನೀಡಿದರು.

ಜಾತ್ಯತೀತವನ್ನು ಸಮಾಜವಾದದ ಜೊತೆಗೆ ಬೆಸೆಯದೇ ಹೋದರೆ ಜಾತ್ಯತೀತ ಪ್ರಜಾಪ್ರಭುತ್ವ ಇನ್ನಷ್ಟು ದುರ್ಬಲಗೊಳ್ಳಲಿದೆ ಎಂದು ಚಿಂತಕ ಕೆ. ಪ್ರಕಾಶ್ ಪ್ರತಿಪಾದಿಸಿದರು.

ರಾಜ್ಯಸಭೆ ಚುನಾವಣೆ ಮುಗಿಯಲಿ ಎಂದ ಮಾಜಿ ಸಚಿವ

ಬಿಜೆಪಿಗೆ ಶಿವಶಂಕರ ರೆಡ್ಡಿ?

• ಡಿ.ಎಂ.ಕುರ್ಕೆ ಪ್ರಶಾಂತ್

ಶಿವಶಂಕರ ರೆಡ್ಡಿ

ಗೌರಿಬಿದನೂರು: ಮಾಜಿ ಸಚಿವ ಹಾಗೂ ಗೌರಿಬಿದನೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ನಾಯಕ ಎನ್. ಎಚ್.ಶಿವಶಂಕರ ರೆಡ್ಡಿ ಅವರು ಬಿಜೆಪಿ ಸೇರುತ್ತಾರೆ ಎಂಬ ಚರ್ಚೆ ಜಿಲ್ಲೆಯಲ್ಲಿ ಜೋರಾಗಿ ನಡೆಯುತ್ತಿದೆ.

ಬಿಜೆಪಿಯ ಮುಖಂಡರು ಸಹ ಶಿವಶಂಕರ ರೆಡ್ಡಿ ಅವರನ್ನು ಸಂಪರ್ಕಿಸಿ-ದ್ದಾರೆ ಎನ್ನುತ್ತವೆ ಮೂಲಗಳು. ‘ಕೆಲವು ವಿಚಾರಗಳನ್ನು ಈಗ ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಎಲ್ಲವೂ ತಿಳಿಯಲಿದೆ’ ಎಂದು ಮಾಜಿ ಸಚಿವರ ಆಪ್ತರು ಪ್ರತಿಕ್ರಿಯಿಸಿದ್ದಾರೆ.

‘ಬಿಜೆಪಿ ಸೇರುವಿರಾ’ ಎನ್ನುವ ಪ್ರಶ್ನೆಗೆ ಶಿವಶಂಕರ ರೆಡ್ಡಿ ಅವರು, ‘ಕಾದು ನೋಡೋಣ’ ಎಂದು ಚುಟುಕಾಗಿ ಉತ್ತರಿಸಿದರು. ‘ನಾನು ಕಾಂಗ್ರೆಸ್ ಟಿಕೆಟ್ ಕೇಳುತ್ತಿದ್ದೇನೆ. ಎಲ್ಲ ವಿಚಾರಗಳ ಬಗ್ಗೆ ಒಂದು ಸ್ಪಷ್ಟತೆ ಬರಲಿ. ರಾಜ್ಯಸಭೆ ಚುನಾವಣೆ ಪೂರ್ಣವಾಗಲಿ. ಅಲ್ಲಿಯವರೆಗೆ ಕಾದು ನೋಡೋಣ’ ಎಂದರು.

ಶಿವಶಂಕರ ರೆಡ್ಡಿ ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯೂ ಆಗಿದ್ದಾರೆ. ಬೆಂಗಳೂರಿನಲ್ಲಿ ಕಳೆದ ಡಿಸೆಂಬರ್‌ನಲ್ಲಿ ವೀಕ್ಷಕ ಜಮೀರ್ ಅಹಮದ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಗೌರಿಬಿದನೂರು ಕ್ಷೇತ್ರದ ಕಾಂಗ್ರೆಸ್ ನಾಯಕರು ರೆಡ್ಡಿ ಅವರಿಗೆ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಮಾಜಿ ಸಂಸದ ಎಂ. ವೀರಪ್ಪ ಮೊಯಿಲಿ ಮತ್ತು ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ಸಹ ಕಾಂಗ್ರೆಸ್ ಟಿಕೆಟ್‌ನ ಪ್ರಬಲ ಆಕಾಂಕ್ಷಿಗಳಾಗಿದ್ದಾರೆ. ಈ ಇಬ್ಬರು ನಾಯಕರು ಈಗಾಗಲೇ ಸಂಘಟನೆಯಲ್ಲಿ ತೊಡಗಿದ್ದಾರೆ. ಟಿಕೆಟ್ ವಿಚಾರವಾಗಿ ಪಕ್ಷದಲ್ಲಿನ ಆಂತರಿಕ ಬೆಳವಣಿಗೆಗಳನ್ನು ಗಮನಿಸಿ ಶಿವಶಂಕರ ರೆಡ್ಡಿ ಮುಂದಿನ ಹೆಜ್ಜೆ ಇಡುವ ಸಾಧ್ಯತೆ ಇದೆ.

ಶಿವಶಂಕರ ರೆಡ್ಡಿ ಅವರ ರಾಜಕೀಯ ಎದುರಾಳಿಯೂ ಆದ ಶಾಸಕ ಕೆ.ಎಚ್.ಪುಟ್ಟಸ್ವಾಮಿ ಗೌಡ, ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸುವುದಾಗಿ ಈಗಾಗಲೇ ಘೋಷಿಸಿದ್ದಾರೆ. ಗೌಡರ ಅಳಿಯ ಶಾಸಕ ಶರತ್ ಬಚ್ಚೇಗೌಡ ಕಿಯೋನಿಕ್ಸ್ ಅಧ್ಯಕ್ಷ-ರಾಗಿದ್ದಾರೆ. ಪುಟ್ಟಸ್ವಾಮಿ ಗೌಡ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಆಪ್ತವಲಯದಲ್ಲಿ ಗುರುತಿಸಿಕೊಂಡಿದ್ದಾರೆ.

ಶಿವಶಂಕರ ರೆಡ್ಡಿ ಕಾಂಗ್ರೆಸ್ ಪಕ್ಷದಲ್ಲಿ ರಾಜ್ಯ ಮಟ್ಟದಲ್ಲಿ ಪ್ರಭಾವಿ ಎನಿಸಿದ್ದವರು. ಆದರೆ ಈಗ ವರ್ಗಾವಣೆ, ನಾಮನಿರ್ದೇಶನಗಳ ವಿಚಾರದಲ್ಲಿ ಅವರ ಮಾತಿಗೆ ಹೆಚ್ಚಿನ ಮನ್ನಣೆ ಸಹ ದೊರೆಯುತ್ತಿಲ್ಲ.

ಈ ಎಲ್ಲ ಬೆಳವಣಿಗೆಗಳ ಕಾರಣದಿಂದ ಶಿವಶಂಕರ ರೆಡ್ಡಿ ಕಾಂಗ್ರೆಸ್ ವರಿಷ್ಠರೊಂದಿಗೆ ಮುನಿಸಿಕೊಂಡಿದ್ದಾರೆ. ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ಹಿಂದಿನಿಂದಲೂ ಬಿಜೆಪಿಗೆ ಹೇಳಿಕೊಳ್ಳುವಂತಹ ನೆಲೆಗಟ್ಟು ಇಲ್ಲ. ಹಾಗಾಗಿ ಕಾಂಗ್ರೆಸ್ ಪ್ರಭಾವಿ ನಾಯಕರಿಗೆ ಬಿಜೆಪಿಯಲ್ಲಿ ಸಹಜವಾಗಿ ರತ್ನಗಂಬಳಿ ಸ್ವಾಗತ ದೊರೆಯಲಿದೆ.

ಸದ್ಯ ಯಲಹಂಕ ಶಾಸಕ ವಿಶ್ವನಾಥ್ ಅವರ ಪುತ್ರ ಅಲೋಕ್ ಮತ್ತು ಮಾಜಿ ಸಚಿವ ಡಾ.ಕೆ.ಸುಧಾಕರ್ ಬಿಜೆಪಿ ಟಿಕೆಟ್‌ನ ಪ್ರಮುಖ ಆಕಾಂಕ್ಷಿಗಳಾಗಿ-ದ್ದಾರೆ. ಒಂದು ವೇಳೆ ಶಿವಶಂಕರ ರೆಡ್ಡಿ ಅವರು ಬಿಜೆಪಿಗೆ ಕಾಲಿಟ್ಟರೆ ಮತ್ತೊಂದು ರೀತಿಯ ರಾಜಕೀಯ ಲೆಕ್ಕಾಚಾರಕ್ಕೆ ಕಾರಣವಾಗಲಿದೆ.

ಚಂಡೀಗಢ: ಮೇಯರ್ ರಾಜೀನಾಮೆ

ಚಂಡೀಗಢ(ಪಿಟಿಐ): ಚಂಡೀಗಢದ ನೂತನ ಮೇಯರ್ ಮನೋಜ್ ಸೋನ್‌ಕರ್ ಭಾನುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಜನವರಿ 30ರಂದು ನಡೆದ ಮೇಯರ್ ಚುನಾವಣೆಯಲ್ಲಿ ಅಕ್ರಮ ನಡೆದಿರುವ ಕುರಿತು ಆರೋಪಗಳು ಕೇಳಿಬಂದಿದ್ದವು. ಅಲ್ಲದೇ, ಈ ವಿಚಾರವಾಗಿ ಆಮ್ ಆದ್ಮಿ ಪಕ್ಷ (ಎಎಪಿ) ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ನಡೆಯಲಿದೆ.

ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್–ಎಎಪಿ ಮೈತ್ರಿ ಮಾಡಿಕೊಂಡಿದ್ದರೂ, ಬಿಜೆಪಿ ಅಭ್ಯರ್ಥಿಯಾಗಿದ್ದ ಮನೋಜ್ ಸೋನ್‌ಕರ್ ಆಯ್ಕೆಯಾಗಿದ್ದರು.

ಬಿಜೆಪಿಗೆ ಸೇರ್ಪಡೆ: ಈ ಮಧ್ಯೆ ಆಮ್ ಆದ್ಮಿ ಪಕ್ಷದ ಮೂವರು ಪಾಲಿಕೆ ಸದಸ್ಯರು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

ಎಸ್‌.ಆರ್‌. ರಾಮಸ್ವಾಮಿ ಅವರಿಗೆ ‘ಎಸ್‌.ಎಲ್ ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ’ ನೀಡಿ ಭಾನುವಾರ ಗೌರವಿಸಲಾಯಿತು. (ನಿಂತವರು ಎಡದಿಂದ) ಲೇಖಕ ಶಶಾಂಕ್ ಪರಾಷ್, ಪ್ರತಿಷ್ಠಾನದ ಟ್ರಸ್ಟಿ ಎಸ್‌.ಬಿ. ಉದಯಶಂಕರ್, ಎಸ್‌.ಎಲ್‌. ಭೈರಪ್ಪ, ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಜಿ.ಎಲ್‌. ಶೇಖರ್, ಕನ್ನಡ ವಿದ್ವಾಂಸ ಟಿ.ವಿ. ವೆಂಕಟಾಚಲಶಾಸ್ತ್ರಿ ಮತ್ತು ವಿದ್ವಾಂಸ ಶತಾವಧಾನಿ ಆರ್‌. ಗಣೇಶ್ ಪಾಲ್ಗೊಂಡಿದ್ದರು

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ದೂರವಾಣಿ ಸಂಖ್ಯೆ:– 08152–200049
ಇ–ಮೇಲ್: eemidklr@rediffmail.com, eemigwddkolar@gmail.com
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/234/2023–24/ ದಿನಾಂಕ:14–02–2024
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:05/2023-24/ದಿನಾಂಕ:14-02-2024
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆ.ಡಬ್ಲ್ಯೂ–2 & 3 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮವಳಿ ಅನ್ವಯ 3ನೇ ದರ್ಜೆ ಮತ್ತು ಮೇಲ್ಪಟ್ಟು ನೋಂದಾಯಿತ ಗುತ್ತಿಗೆದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಒಟ್ಟು 15 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 100.00 ಲಕ್ಷ ಹಾಗೂ ಕನಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 50.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟ್‌ಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp.karnataka.gov.in ದಿನಾಂಕ:19/02/2024ರ ಸಂಜೆ 04:00 ಗಂಟೆಯಿಂದ ಪಡೆಯಬಹುದು (Download). ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ (Upload) ಕೊನೆಯ ದಿನಾಂಕ:27/02/2024ರ ಸಂಜೆ 04:00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:28/02/2024ರ ಸಂಜೆ 04:30 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.
ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ದೂರವಾಣಿ ಸಂಖ್ಯೆ:– 08152–200049
ಇ–ಮೇಲ್: eemidklr@rediffmail.com, eemigwddkolar@gmail.com
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/237/2023–24/ದಿನಾಂಕ:14–02–2024
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:06/2023-24/ದಿನಾಂಕ:14-02-2024
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆ.ಡಬ್ಲ್ಯೂ–4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮವಳಿ ಅನ್ವಯ 2ನೇ ದರ್ಜೆ ಮತ್ತು ಮೇಲ್ಪಟ್ಟು ನೋಂದಾಯಿತ ಗುತ್ತಿಗೆದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಒಟ್ಟು 04 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 400.00 ಲಕ್ಷ ಹಾಗೂ ಕನಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 250.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟ್‌ಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp.karnataka.gov.in ದಿನಾಂಕ:19/02/2024ರ ಸಂಜೆ 04:00 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯನ್ನು ದಿನಾಂಕ:22/02/2024 ರಂದು ಬೆಳಗ್ಗೆ 11.00 ಗಂಟೆಗೆ **ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ** ಇಲ್ಲಿ ಆಯೋಜಿಸಲಾಗಿರುತ್ತದೆ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ (Upload) ಕೊನೆಯ ದಿನಾಂಕ:27/02/2024ರ ಸಂಜೆ 04:00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:28/02/2024ರ ಸಂಜೆ 04:30 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.
ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

‘ಸಾವರ್ಕರ್’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಕಾದಂಬರಿಕಾರ ಎಸ್‌.ಎಲ್ ಭೈರಪ್ಪ ಅಭಿಮತ

‘ಸಾವರ್ಕರ್ ತುಳಿಯುವಿಕೆ ರಾಷ್ಟ್ರೀಯತೆ ತುಳಿದಂತೆ’

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಎಸ್‌.ಎಲ್‌. ಭೈರಪ್ಪ (ಮಧ್ಯದವರು) ಅವರು ವಿಕ್ರಮ್ ಸಂಪತ್ (ಎಡದಿಂದ ನಾಲ್ಕನೆಯವರು) ಅವರ ‘ಸಾವರ್ಕರ್–ವಿಸ್ಮೃತಿಗೆ ಸರಿದ ಗತಕಾಲದ ಮಾರ್ದನಿಗಳು ಕ್ರಾಂತಿಸೂರ್ಯನ ಮೇಲೆ ಕ್ಷ–ಕಿರಣ’ ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಪ್ರಕಾಶಕ ಎಂ.ಎ. ಸುಬ್ರಹ್ಮಣ್ಯ, ಬಾಬು ಕೃಷ್ಣಮೂರ್ತಿ ಮತ್ತು ಅನುವಾದಕ ನರೇಂದ್ರ ಕುಮಾರ್ ಎಸ್‌.ಎಸ್‌. ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಸಾವರ್ಕರ್ ಅವರ ಹೆಸರಿಗೆ ಮಸಿ ಬಳಿಯಬೇಕೆಂದು ಕಾಂಗ್ರೆಸಿಗರು ನಿರಂತರವಾಗಿ ಪ್ರಯತ್ನಿಸುತ್ತಾ ಬಂದಿದ್ದಾರೆ. ಸಾವರ್ಕರನ್ನು ತುಳಿಯುವುದು ಹಾಗೂ ರಾಷ್ಟ್ರೀಯತೆ ತುಳಿಯುವುದು ಎರಡೂ ಒಂದೇ’ ಎಂದು ಕಾದಂಬರಿಕಾರ ಎಸ್.ಎಲ್. ಭೈರಪ್ಪ ತಿಳಿಸಿದರು.

ಸಾಹಿತ್ಯ ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯ-ಕ್ರಮದಲ್ಲಿ ನರೇಂದ್ರಕುಮಾರ್ ಎಸ್. ಎಸ್. ಅವರು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ (ಮೂಲ ಲೇಖಕ ವಿಕ್ರಮ್ ಸಂಪತ್) ‘ಸಾವರ್ಕರ್–ವಿಸ್ಮೃತಿಗೆ ಸರಿದ ಗತಕಾಲದ ಮಾರ್ದನಿಗಳು ಕ್ರಾಂತಿಸೂರ್ಯನ ಮೇಲೆ ಕ್ಷ–ಕಿರಣ’ ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

‘ಸ್ವಾತಂತ್ರ್ಯ ಹೋರಾಟದಲ್ಲಿ ಸಾವರ್ಕರ್ ಅಗ್ರಸ್ಥಾನ ಪಡೆಯುತ್ತಾರೆ. ಅವರಿಗೆ ‘ಭಾರತ ರತ್ನ’ ಏಕೆ ಕೊಟ್ಟಿಲ್ಲ ಎಂಬ ಪ್ರಶ್ನೆಗಳನ್ನು ಕೇಳಲಾಗುತ್ತಿದೆ. ‘ಭಾರತ ರತ್ನ’ ವಿಷಯದಲ್ಲಿ ಸರಿಯಾಗಿ ವಿಶ್ಲೇಷಿಸಿದರೆ ಅರ್ಹತೆ ಇದ್ದವರ ಜತೆಗೆ ಅರ್ಹತೆ ಇಲ್ಲದವರಿಗೂ ನೀಡಲಾಗಿದೆ. ‘ಭಾರತ ರತ್ನ’ ಪ್ರಶಸ್ತಿ ಸಾವರ್ಕರ್ ಅವರಿಗೆ ದೊಡ್ಡದಲ್ಲ. ಆ ಪುರಸ್ಕಾರ-ವನ್ನೂ ಮೀರಿದವರಾಗಿದ್ದಾರೆ ಎಂಬ ಕಾರಣಕ್ಕೇ ಪ್ರಧಾನಿ ಮೋದಿ ಅವರು ಸಾವರ್ಕರ್ ಅವರಿಗೆ ಮರಣೋತ್ತರ-ವಾಗಿ ಪ್ರಶಸ್ತಿ ನೀಡಿರಲಿಕ್ಕಿಲ್ಲ’ ಎಂದರು.

> ದೇಶದ ನಿಜವಾದ ಇತಿಹಾಸ ಜನರಿಗೆ ತಿಳಿಯಬೇಕು ಎಂಬ ಕಾರಣಕ್ಕೆ ಈ ಕೃತಿ ರಚಿಸಿದ್ದೇನೆ. ಸಾವರ್ಕರ್ ಯಾವ ಪಕ್ಷಕ್ಕೂ ಸೇರಿದವರಲ್ಲ. ಅವರು ರಾಜಕೀಯ ವ್ಯಕ್ತಿಯೂ ಅಲ್ಲ
>
> **ವಿಕ್ರಮ್ ಸಂಪತ್**, ಲೇಖಕ

‘ಸಾವರ್ಕರ್ ಬಗ್ಗೆ ಯಾವುದೋ ಒಂದು ಅಂಶವನ್ನು ಇಟ್ಟುಕೊಂಡು ಇಲ್ಲಸಲ್ಲದ ಆರೋಪ ಹೊರಿಸಲಾಗಿದೆ. ಈ ಮೂಲಕ ದೇಶದ ಜನರ ದಿಕ್ಕು ತಪ್ಪಿಸುವ ಕೆಲಸವನ್ನು ಜವಾಹರಲಾಲ್ ನೆಹರೂ ಆದಿಯಾಗಿ ಕಾಂಗ್ರೆಸ್‌ನವರು ಮಾಡಿಕೊಂಡು ಬಂದಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಜವಾಹರಲಾಲ್ ನೆಹರೂ ಅವರಿಗೆ ಗಾಂಧೀಜಿ ಮೊದಲಾದವರ ಅತಿಯಾದ ಬೆಂಬಲವಿತ್ತು. ಜೈಲಿನಲ್ಲಿ ವಿವಿಧ ಸೌಲಭ್ಯಗಳನ್ನು ಪಡೆದ ನೆಹರೂ, ‘ಡಿಸ್ಕವರಿ ಆಫ್ ಇಂಡಿಯಾ’ ಪುಸ್ತಕವನ್ನು ಮಗಳಿಗಾಗಿ ಬರೆದಿದ್ದಾರೆ. ಬ್ರಿಟಿಷರು ಬರೆದ ‘ಹಿಸ್ಟರಿ ಆಫ್ ಇಂಡಿಯಾ’ ಕೃತಿಯನ್ನೇ ಇದು ಹೋಲಲಿದೆ’ ಎಂದು ವ್ಯಂಗ್ಯವಾಡಿದರು.

ಏಟು ತಿನ್ನದೆ ಹೋರಾಟ: ‘ಸುಭಾಷ್ ಚಂದ್ರ ಬೋಸ್ ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಅವರು ಅಹಿಂಸೆಯಿಂದ ಸ್ವಾತಂತ್ರ್ಯ ಪಡೆಯಲು ಸಾಧ್ಯವಿಲ್ಲ, ಕ್ರಾಂತಿ ಅಗತ್ಯ ಎಂದು ಹೇಳಿದ್ದರು. ಆ ವೇಳೆಗೆ ಬಂದ ಗಾಂಧೀಜಿ, ಕ್ರಾಂತಿಯ ಬದಲು ಅಹಿಂಸಾತ್ಮಕ ಹೋರಾಟ ಅಗತ್ಯ ಅಂದಾಗ ಉಳಿದವರು ಸಮ್ಮತಿ ಸೂಚಿಸಿದರು. ಆ ವೇಳೆಗೆ ಕೆಲ ಕ್ರಾಂತಿಕಾರರು ಹೋರಾಡಿ ಸುಸ್ತಾಗಿದ್ದರು. ಏಟು ತಿನ್ನದೆ ಹೋರಾಟ ಮಾಡುವ ಈ ವಿಧಾನದಿಂದ ಗಾಂಧಿ ತುಂಬಾ ಜನಪ್ರಿಯ ಆದರು. ಹಿಂದೂಗಳು ಹೋರಾಟದ ಮನೋಭಾವ ಕಳೆದುಕೊಳ್ಳಲು ಮೂಲ ಕಾರಣ ಗಾಂಧೀಜಿಯ ಅಹಿಂಸಾ ಪರಿಕಲ್ಪನೆ’ ಎಂದು ಭೈರಪ್ಪ ಹೇಳಿದರು.

‘ಗಾಂಧೀಜಿಯನ್ನು ನಾಥೂರಾಮ್ ಗೋಡ್ಸೆ ಹತ್ಯೆ ಮಾಡಿದ ಬಳಿಕ ತನಿಖಾ ಸಮಿತಿ ರಚಿಸಲಾಯಿತು. ಈ ಸಮಿತಿ ಮೂಲಕ ಸಾವರ್ಕರ್ ಅವರನ್ನು ಸಿಕ್ಕಿಹಾಕಿಸುವ ಪ್ರಯತ್ನವನ್ನೂ ನೆಹರೂ ಮಾಡಿದರು. ಆಗ ಕಾನೂನು ಸಚಿವರಾಗಿದ್ದ ಅಂಬೇಡ್ಕರ್, ಈ ಬಗ್ಗೆ ಸಂದೇಶವನ್ನು ಸಾವರ್ಕರ್ ಅವರಿಗೆ ಗೌಪ್ಯವಾಗಿ ರವಾನಿಸಿದ್ದರು. ಅಂಬೇಡ್ಕರ್ ಅವರನ್ನು ಕೂಡ ನೆಹರೂ ಬಿಟ್ಟಿರಲಿಲ್ಲ’ ಎಂದು ತಿಳಿಸಿದರು.

ಪುಸ್ತಕ ಪರಿಚಯ

ಪುಸ್ತಕ: ‘ಸಾವರ್ಕರ್–ವಿಸ್ಮೃತಿಗೆ ಸರಿದ ಗತಕಾಲದ ಮಾರ್ದನಿಗಳು ಕ್ರಾಂತಿಸೂರ್ಯನ ಮೇಲೆ ಕ್ಷ–ಕಿರಣ’
ಲೇಖಕ: ವಿಕ್ರಮ್ ಸಂಪತ್
ಅನುವಾದಕ: ನರೇಂದ್ರಕುಮಾರ್ ಎಸ್.ಎಸ್.
ಪುಟಗಳು: 568
ಬೆಲೆ: ₹ 855
ಪ್ರಕಾಶನ: ಸಾಹಿತ್ಯ ಪ್ರಕಾಶನ

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಅಭಿಮತ

‘ಪ್ರಜಾಪ್ರಭುತ್ವದ ಪರಿಕಲ್ಪನೆ ನೀಡಿದ ಶರಣರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘12ನೇ ಶತಮಾನದಲ್ಲಿಯೇ ಶರಣರು ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಅನುಭವ ಮಂಟಪದ ಮೂಲಕ ಜಗತ್ತಿಗೆ ಸಾರಿದ್ದರು. ಶರಣರು ರಚಿಸಿದ ವಚನಗಳ ಸಾರ ನಮ್ಮ ಸಂವಿಧಾನದಲ್ಲಿ ಅಡಕವಾಗಿವೆ’ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಹೇಳಿದರು.

ಪ್ರಬುದ್ಧ ಸಮಾಜ ನಿರ್ಮಾಣ ವೇದಿಕೆ ಭಾನುವಾರ ಆಯೋಜಿಸಿದ್ದ ‘ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ’ ಅರಿವಿನ ಅನುಭಾವಿಗಳ ಅನುಭವ ಮಂಟಪದಲ್ಲಿ ಮುಕ್ತ ಸಂವಾದ ಎಂಬ ಕಾರ್ಯಕ್ರಮದಲ್ಲಿ ‘ಬಸವ ತತ್ವದ ಮೂಲ ಆಶಯವೇ ಸಂವಿಧಾನ’ ಎಂಬ ವಿಷಯದ ಕುರಿತು ಅವರು ಮಾತನಾಡಿದರು.

‘ಬಸವತತ್ವದ ದರ್ಶನವನ್ನು ಇಡೀ ಜಗತ್ತಿಗೆ ಪರಿಚಯಿಸುವ ಉದ್ದೇಶದಿಂದ ಸರ್ಕಾರ ಬಸವಣ್ಣ ಅವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿರುವುದು ಶ್ಲಾಘನೀಯ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಕಾರ್ಯ ಚಟುವಟಿಕೆಗಳಲ್ಲಿ ಶರಣರ ವಚನಗಳು ಪ್ರತಿಧ್ವ-ನಿಸಿದರೆ ಮಾತ್ರ ಬಸವಣ್ಣ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತೆ’ ಎಂದು ಅವರು ಹೇಳಿದರು.

> ಸನಾತನ ಧರ್ಮವೆಂದರೆ ಹೆಣ್ಣುಮಕ್ಕಳಿಗೆ ಹಿಂಸೆ ನೀಡುವ, ಮಹಿಳೆಯರನ್ನು ಇಬ್ಭಾಗ ಮಾಡುವ ಧರ್ಮ. ದಬ್ಬಾಳಿಕೆ ಮಾಡಿ ಅವರನ್ನು ಕೊಲ್ಲುವುದೇ ಸನಾತನ ಧರ್ಮ
>
> **ಅಕ್ಕೈ ಪದ್ಮಶಾಲಿ,** ಸಾಮಾಜಿಕ ಹೋರಾಟಗಾರ್ತಿ

‘ವಚನ ಸಾಹಿತ್ಯದಲ್ಲಿ ನಾವು ಮಾನವ ಹಕ್ಕುಗಳ ಪ್ರತಿಪಾದನೆಯ-ನ್ನು ಕಾಣಬಹುದು. ಆದರೆ, ಇಂದು ಸರ್ಕಾರದಿಂದಲೇ ಈ ಹಕ್ಕುಗಳ ಉಲ್ಲಂ-ಘನೆಯಾಗುತ್ತಿದೆ. ದೇಶದಲ್ಲಿ ಇಂದು ಏನನ್ನೂ ಮಾತನಾಡದ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೂಲ ಆಶಯಗಳು ಧ್ವಂಸವಾಗುತ್ತಿವೆ. ಕಳೆದ ಹತ್ತು ವರ್ಷಗಳಲ್ಲಿ ಸಂಸತ್ತಿನ ಶೇ 24 ರಷ್ಟು ಸಮಯ ಧರಣಿ, ಪ್ರತಿಭಟನೆಯಲ್ಲಿ ಕಳೆದು ಹೋಗಿದೆ. ಶೇ 47ರಷ್ಟು ಮಸೂದೆಗಳು ಚರ್ಚೆ ಇಲ್ಲದೇ ಮಂಡನೆಯಾಗಿವೆ. ಪ್ರಶ್ನೆ ಮಾಡಿದ 146 ಜನರನ್ನು ಸಂಸತ್ತಿನಿಂದ ಅಮಾನತ್ತು ಮಾಡಲಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ’ ಮುಕ್ತ ಸಂವಾದದಲ್ಲಿ ಫಾದರ್ ಎಸ್‌.ಜೆ. ಅರುಣ್ ಲೂಯಿಸ್, ಅಕ್ಕೈ ಪದ್ಮಶಾಲಿ, ಎಸ್‌.ಜಿ. ಸಿದ್ಧರಾಮಯ್ಯ, ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್, ಜಿ.ಬಿ. ಪಾಟೀಲ್ ಮತ್ತು ಎಂ.ಎಸ್‌. ಆಶಾದೇವಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಸಾಮಾಜಿಕಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಮಾತನಾಡಿ,‘ಆರ್‌ಎಸ್ ಎಸ್ ಮತ್ತು ಬಿಜೆಪಿಯ ನಂಟು ಹೊಂದಿರುವ ಜೋಗತಿ ಮಂಜಮ್ಮ ಅವರು ಮೂಲಭೂತವಾದಿ ಆಗಿದ್ದಾರೆ. ನಮ್ಮ ಸಮುದಾಯವನ್ನು ಇಬ್ಭಾಗ ಮಾಡುವ ಕೆಲಸ ಮಾಡುತ್ತಿದ್ದಾರೆ’ ಎಂದು ಆರೋಪಿಸಿದರು.

‘ಕುವೆಂಪು ಒಳಗಿನ ಬಸವಣ್ಣ’ ಕುರಿತು ಸಾಹಿತಿ ಕೆ.ವೈ. ನಾರಾಯಣಸ್ವಾಮಿ, ‘ಮಹಿಳಾ ಘನತೆ ಮತ್ತು ಸಮಾನತೆ ಸಾಧ್ಯವಾಗಿಸುವ ಬಸವತತ್ವ’ದ ಕುರಿತು ವಿಮರ್ಶಕಿ ಎಂ.ಎಸ್. ಆಶಾದೇವಿ, ‘ಸಮಸಮಾಜದ ನಿರ್ಮಾಣಕ್ಕೆ ಪ್ರಸ್ತುತ ಸಂದರ್ಭದಲ್ಲಿ ಬಸವಣ್ಣನವರ ಅಗತ್ಯ’ ಕುರಿತು ಸಾಹಿತಿ ಬಂಜಗೆರೆ ಜಯಪ್ರಕಾಶ್, ‘ಭಗವದ್ಗೀತೆ–ಖುರಾನ್–ಬೈಬಲ್‌ನಲ್ಲಿ ಬಸವತತ್ವದ ಆಶಯಗಳು’ ಕುರಿತು ಅರ್ಥ ಶಾಸ್ತ್ರಜ್ಞ ಟಿ.ಆರ್. ಚಂದ್ರಶೇಖರ್, ‘ಮತ್ತೆ ಕಲ್ಯಾಣ’ ವಿಷಯದ ಕುರಿತು ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಕಾರ್ಯದರ್ಶಿ ಜಿ.ಬಿ. ಪಾಟೀಲ ಮಾತನಾಡಿದರು. ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಭಾಗವಹಿಸಿದ್ದರು.

ಬಿಸಿಎಂ ಹಾಸ್ಟೆಲ್‌ಗೆ ಸಿದ್ಧಗಂಗಾ ಮಠದಿಂದ ಅಕ್ಕಿ ಸಾಲ

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಅಕ್ಕಿ ಕೊರತೆ ಎದುರಾದ ಕಾರಣ ಸಿದ್ಧಗಂಗಾ ಮಠದಿಂದ ಅಕ್ಕಿ ಸಾಲ ಪಡೆಯಲಾಗಿದೆ.

ತಾಲ್ಲೂಕಿನ 17 ವಿದ್ಯಾರ್ಥಿ ನಿಲಯಗಳಲ್ಲಿ ಅಕ್ಕಿ ಖಾಲಿಯಾಗಿತ್ತು. ಹಾಗಾಗಿ ಇಲಾಖೆಯ ಅಧಿಕಾರಿಗಳು ಕಳೆದ ಡಿಸೆಂಬರ್‌ನಲ್ಲಿ 120 ಕ್ವಿಂಟಲ್ ಅಕ್ಕಿಯನ್ನು ಸಿದ್ಧಗಂಗಾ ಮಠದಿಂದ ಸಾಲವಾಗಿ ಪಡೆದಿದ್ದಾರೆ.

ದಿಬ್ಬೂರು ಮತ್ತು ಗಾರ್ಡನ್ ರಸ್ತೆಯಲ್ಲಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ, ರೈಲು ನಿಲ್ದಾಣದ ರಸ್ತೆಯಲ್ಲಿರುವ ಎರಡು ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ ಸೇರಿದಂತೆ ತಾಲ್ಲೂಕಿನ 17 ವಿದ್ಯಾರ್ಥಿ ನಿಲಯಗಳಲ್ಲಿ ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದ್ದಾರೆ. ಸದ್ಯ ಮಠದ ಅಕ್ಕಿಯನ್ನು ವಿದ್ಯಾರ್ಥಿಗಳ ಊಟಕ್ಕೆ ಬಳಸಲಾಗುತ್ತಿದೆ.

ಶಿಕ್ಷಣ

ಯುಎಸ್ ಕಾನ್ಸಲ್ ಜನರಲ್ ಕ್ರಿಸ್ಟೋಫರ್ ಹಾಡ್ಜಸ್

ಪ್ರತಿಭಾನ್ವಿತರಿಗೆ ಅಮೆರಿಕ ವಿ.ವಿಗಳಲ್ಲಿ ಮುಕ್ತ ಪ್ರವೇಶ

ಕ್ರಿಸ್ಟೋಫರ್ ಹಾಡ್ಜಸ್

2022ರಿಂದೀಚೆಗೆ ಚೆನ್ನೈ ಯುಎಸ್ ಕಾನ್ಸುಲೇಟ್ ಜನರಲ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ, ತಮಿಳುನಾಡು, ಕೇರಳ, ಪುದುಚೆರಿ, ಅಂಡಮಾನ್ ನಿಕೋಬಾರ್ ದ್ವೀಪ ಸಮೂಹಗಳು ಇವರ ಕಾರ್ಯವ್ಯಾಪ್ತಿಗೆ ಬರುತ್ತವೆ. ಇದಕ್ಕೆ ಮೊದಲು Coordinator for Afghan Relocation Efforts (CARE)ಗೆ ಹಿರಿಯ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದರು. 2000ದಿಂದ ವಿದೇಶಾಂಗ ಸೇವೆಯ ಕ್ಷೇತ್ರದಲ್ಲಿದ್ದಾರೆ. ಜೆರುಸಲೆಮ್, ಹನೊಯಿ, ವಿಯೆಟ್ನಾಂ, ಅಕ್ರಾ, ಘಾನಾ ರಾಷ್ಟ್ರಗಳಲ್ಲಿ ಸಾರ್ವಜನಿಕ ಸಂಪರ್ಕ ಅಧಿಕಾರಿಯಾಗಿಯೂ, ಆಸ್ಟ್ರಿಯಾ, ಜರ್ಮನಿ, ಸ್ವಿಟ್ಜರ್ಲೆಂಡ್ ಮತ್ತು ಯುರೋಪಿಯನ್ ವಿದೇಶಾಂಗ ಇಲಾಖೆಯಲ್ಲಿ ಉಪನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ ಅನುಭವ ಇದೆ.

ದಕ್ಷಿಣ ಭಾರತೀಯ ವಿದ್ಯಾರ್ಥಿಗಳಿಗೆ ಅಮೆರಿಕದ ವಿಶ್ವವಿದ್ಯಾಲಯಗಳು ಮುಕ್ತವಾಗಿವೆ. ಕಲಿಕೆಗೆ ಅಗತ್ಯದ ಸೌಲಭ್ಯಗಳನ್ನು ಒದಗಿಸುವಲ್ಲಿ ಒಕ್ಕೂಟ ರಾಷ್ಟ್ರವು ಸಾಧ್ಯ ಇರುವುದನ್ನೆಲ್ಲ ಮಾಡುತ್ತದೆ. ಭಾರತೀಯ ರಾಜ್ಯಗಳಲ್ಲಿ ದಕ್ಷಿಣದಿಂದಲೇ ಹೆಚ್ಚಿನ ವಿದ್ಯಾರ್ಥಿಗಳು ಅಮೆರಿಕಕ್ಕೆ ಬರುತ್ತಾರೆ. ಉನ್ನತ ಶಿಕ್ಷಣ ಉತ್ತೇಜನಕ್ಕೆಂದೇ ದಕ್ಷಿಣದ ರಾಜ್ಯಗಳಲ್ಲಿ ಶಿಕ್ಷಣ ಮೇಳಗಳನ್ನು ಆಯೋಜಿಸುತ್ತಿದ್ದೇವೆ ಎಂದು ಯುಎಸ್ ಕಾನ್ಸಲ್ ಜನರಲ್ ಕ್ರಿಸ್ಟೋಫರ್ ಹಾಡ್ಜಸ್ ಹೇಳಿದರು.

ಶಿಕ್ಷಣ ಮೇಳದ ಪ್ರಯುಕ್ತ ಈಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದ ಅವರು ಅಮೆರಿಕದ ವಿಶ್ವವಿದ್ಯಾಲಯಗಳು, ಶಿಕ್ಷಣ ಕ್ಷೇತ್ರದಲ್ಲಿರುವ ವಿಪುಲ ಅವಕಾಶಗಳ ಕುರಿತು 'ಪ್ರಜಾವಾಣಿ' ಜತೆಗೆ ಚರ್ಚಿಸಿದರು.

ಅಮೆರಿಕದ ವಿಶ್ವವಿದ್ಯಾಲಯಗಳಲ್ಲಿ ಜಗತ್ತಿನ ಎಲ್ಲೆಡೆಯ ವಿದ್ಯಾರ್ಥಿಗಳೂ ಕಾಣಸಿಗುತ್ತಾರೆ. ಅಮೆರಿಕದ ಶಿಕ್ಷಣದ ಗುಣಮಟ್ಟ, ವೈವಿಧ್ಯತೆ ಮತ್ತು ಹೊಸತನವನ್ನು ಸೃಷ್ಟಿಸುತ್ತ ಹೋಗುತ್ತದೆ. ಕಾಲಕಳೆದಂತೆ ಪ್ರತಿಯೊಂದನ್ನೂ ಹೊಸದಾಗಿಸುವ ಉತ್ಸಾಹದಿಂದಲೇ ಇಲ್ಲಿಯ ಶಿಕ್ಷಣದ ಗುಣಮಟ್ಟವು ಹೆಚ್ಚಿನ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತದೆ. ಇಲ್ಲಿ ಸಂಶೋಧನೆ ಮತ್ತು ಪ್ರಾಯೋಗಿಕ ಆಧಾರದ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ.

ವಿದ್ಯಾರ್ಥಿಗಳು ಕ್ರಿಯಾಶೀಲರಾಗಿರಲು, ಹೊಸತನ್ನು ಕಲಿಯಲು, ಹೊಸ ವಿಷಯಗಳನ್ನು ಅನ್ವೇಷಿಸಲು ಪ್ರೇರೇಪಿಸುವ ಶಿಕ್ಷಣ ಪದ್ಧತಿಯನ್ನು ಅಲ್ಲಿ ಅನುಸರಿಸುವುದರಿಂದ ಜಾಗತಿಕ ಮನ್ನಣೆ ಇದೆ. ಇದೀಗ ಕ್ವಾಂಟಮ್ ಥಿಯರಿ, ಆಧುನಿಕ ತಂತ್ರಜ್ಞಾನ, ಯಾಂತ್ರಿಕ ಬುದ್ಧಿಮತ್ತೆ, ಹಸಿರು ಹೈಡ್ರೋಜನ್‌ನಂತಹ ನೂತನ ಕ್ಷೇತ್ರಗಳಲ್ಲಿ ಅಧ್ಯಯನ ನಡೆಸಲು ಭಾರತ ಯುಎಸ್ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಈ ಕ್ಷೇತ್ರಗಳಲ್ಲಿ ಹೂಡಿಕೆಗಳನ್ನು ಉತ್ತೇಜಿಸುತ್ತದೆ ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳನ್ನಷ್ಟೆ ಅಲ್ಲದೆ, ಮಾನವೀಯ ವಿಜ್ಞಾನ ಕ್ಷೇತ್ರದಲ್ಲಿಯೂ ಯುಎಸ್ ವಿಶ್ವವಿದ್ಯಾಲಯಗಳು ಹೆಚ್ಚಿನ ಅವಕಾಶಗಳನ್ನು ನೀಡುತ್ತಿವೆ. ದಿನನಿತ್ಯದ ಸಮಸ್ಯೆಗಳಿಗೆ ಸ್ಪಂದಿಸುವಂಥ ಹೊಸ ಹೊಸ ಪಠ್ಯಕ್ರಮವನ್ನು ಪರಿಚಯಿಸುವುದು ನಮ್ಮ ವಿಶ್ವವಿದ್ಯಾಲಯಗಳ ವಿಶೇಷ ವಾಗಿದೆ. ಇಲ್ಲಿಂದ ಬರುವ ಪ್ರತಿಭಾನ್ವಿತ ವಿದ್ಯಾರ್ಥಿಗಳು, ಮಾನವ ಸಂಪನ್ಮೂಲವಾಗಿ ರೂಪ ತಾಳುತ್ತ ಹೋಗುತ್ತಾರೆ. ಚೆನ್ನೈನಲ್ಲಿರುವ ಯುಎಸ್ ಕಾನ್ಸುಲೇಟ್ ಜನರಲ್ ಅಮೆರಿಕದ ವಿಶ್ವವಿದ್ಯಾಲಯಗಳನ್ನು ದಕ್ಷಿಣ ಭಾರತದ ವ್ಯಾಪಾರ ಮತ್ತು ಸಂಶೋಧನಾ ಪಾಲುದಾರರೊಂದಿಗೆ ಸಂಪರ್ಕಿಸುತ್ತಿದೆ ಎಂದರು. ಯು ಎಸ್ ಕಾನ್ಸುಲೇಟ್ ಜನರಲ್ ಚೆನ್ನೈ ನಮ್ಮ ಅಧಿಕೃತ @EducationUSAindia ನೊಂದಿಗೆ ತಮ್ಮ #StudyInTheUS ಕನಸನ್ನು ಯೋಜಿಸಲು ಕರ್ನಾಟಕ, ಕೇರಳ ಮತ್ತು ತಮಿಳುನಾಡಿನ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿದೆ.

ಯುನೈಟೆಡ್ ಸ್ಟೇಟ್ಸ್‌ನಲ್ಲಿ ಸ್ನಾತಕೋತ್ತರ ಅಥವಾ ಡಾಕ್ಟರೇಟ್ ಕಾರ್ಯಕ್ರಮಗಳಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ಇಲ್ಲಿ ಸದಾ ಮುಕ್ತ ಅವಕಾಶವಿದೆ. ಉಳಿದ ದೇಶಗಳಿಗೆ ಹೋಲಿಸಿದರೆ ಭಾರತೀಯ ವಿದ್ಯಾರ್ಥಿಗಳು ಕಷ್ಟಸಹಿಷ್ಣುಗಳು. ಉತ್ಸಾಹಿಗಳು, ಮರಳಿ ಪ್ರಯತ್ನ ಮಾಡುವ ಪ್ರಯತ್ನಶೀಲರು. ಉತ್ತಮ ಮೂಲ ಸೌಲಭ್ಯ ಇರುವ ವಿಶ್ವವಿದ್ಯಾಲಯಗಳಿಗೆ, ಪ್ರತಿಭಾನ್ವಿತ ವಿದ್ಯಾರ್ಥಿಗಳು ಬರಲಿ ಎಂಬುದು ಶಿಕ್ಷಣ ಮೇಳಗಳ ಉದ್ದೇಶ. ಈ ಮೇಳಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಿದ್ದರೆ EducationUSA ವೆಬ್‌ಸೈಟ್ ಸಾಕಷ್ಟು ಮಾಹಿತಿ ಒದಗಿಸಿಕೊಡುತ್ತದೆ. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸ್ವಾಗತ ಎನ್ನುತ್ತ ತಮ್ಮ ಮಾತು ಮುಗಿಸಿದರು.

ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರು ಅಮೆರಿಕದಲ್ಲಿ ಅಧ್ಯಯನ ಮಾಡುವುದು ಹೇಗೆ ಎಂಬುದರ ಕುರಿತು ಹೆಚ್ಚುವರಿ ಸಂಪನ್ಮೂಲಗಳಿಗಾಗಿ, https://www.usief.org.in/Study-in-the-US.aspx ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

30) ಪ್ಲಾಸಿ ಕದನದ ಪರಿಣಾಮಗಳೇನು?

ಉತ್ತರ:– ಪ್ಲಾಸಿ ಕದನದ ಪರಿಣಾಮಗಳು

1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು.

31) ಕಾಲಾನುಕ್ರಮದಲ್ಲಿ ಜೋಡಿಸಿ

1) ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಬಂದನು

2) ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್‌ನು ಬಾಂಬೆಯನ್ನು ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು.

3) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಬಂದು ತಲುಪಿದನು

4) ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

ಉತ್ತರ:– 1) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಬಂದು ತಲುಪಿದನು

2) 1617ರಲ್ಲಿ ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಬಂದನು

3) ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್‌ನು ಬಾಂಬೆಯನ್ನು 1668ರಲ್ಲಿ ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು.

4) ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು 1764ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

32) ಭಾರತದಲ್ಲಿ 6ಪ್ರಮುಖ ವಿಧದ ಅರಣ್ಯಗಳನ್ನು ಹೆಸರನ್ನು ತಿಳಿಸಿ

ಉತ್ತರ:– ವಿಶಾಲವಾದ ಭಾರತದಲ್ಲಿ ಅನೇಕ ವಿಧದ ಅರಣ್ಯಗಳಿವೆ. ಅವುಗಳನ್ನು 6 ಪ್ರಮುಖ ವಿಧಗಳಾಗಿ ವಿಂಗಡಿಸಲಾಗಿದೆ.

1. ಉಷ್ಣವಲಯದ ನಿತ್ಯಹರಿದ್ವರ್ಣದ ಅರಣ್ಯಗಳು
2. ಉಷ್ಣವಲಯದ ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳು
3. ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು
4. ಮ್ಯಾಂಗ್ರೋವರ್ ಅರಣ್ಯಗಳು
5. ಮರುಭೂಮಿ ಸಸ್ಯವರ್ಗ
6. ಹಿಮಾಲಯದ ಅಲ್ಫೈನ್ ಅರಣ್ಯಗಳು

33) ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು ಸ್ಪಷ್ಟೀಕರಿಸಿ

(2019 ಮಾರ್ಚ್ ವಾರ್ಷಿಕ ಪರೀಕ್ಷೆ 2 ಅಂಕದ ಪ್ರಶ್ನೆ)

ಉತ್ತರ:– ಬಕ್ಸಾರ್ ಕದನದ ಪರಿಣಾಮ ಬಿಹಾರ, ಒಡಿಶಾ ಮತ್ತು ಬಂಗಾಳ ಪ್ರಾಂತ್ಯಗಳು ಇಂಗ್ಲಿಷರ ವಶವಾದವು ಮೊಘಲ್ ಚಕ್ರವರ್ತಿ ಷಾ ಅಲಂ ದಿವಾನಿ ಹಕ್ಕನ್ನು ಇಂಗ್ಲಿಷರಿಗೆ ನೀಡಿದನು.

1765ರಲ್ಲಿ ಕಂಪನಿ ಗವರ್ನರ್ ಆಗಿ ನೇಮಕಗೊಂಡಿದ್ದ ರಾಬರ್ಟ್‌ಕ್ಲೈವನು ದ್ವಿ–ಸರ್ಕಾರವನ್ನು ಜಾರಿಗೆ ತಂದನು. ಇದರ ಪ್ರಕಾರ ಇಂಗ್ಲಿಷರು ದಿವಾನಿ ಹಕ್ಕಿನಿಂದಾಗಿ ಭೂ ಕಂದಾಯವನ್ನು ವಸೂಲಿ ಮಾಡಿಕೊಂಡು ತಮ್ಮ ಸಂಪತ್ತನ್ನು ವೃದ್ಧಿಸಿಕೊಂಡರು.. ಈ ರೀತಿ ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು

34) ರಾಬರ್ಟ್ ಕ್ಲೈವ್ ಬಗ್ಗೆ ಬರೆಯಿರಿ

ಉತ್ತರ:– ಭಾರತದಲ್ಲಿ ಬ್ರಿಟಿಷ್ ಅಧಿಕಾರವನ್ನು ಕಟ್ಟಿದ ಪ್ರಥಮ ಅಧಿಕಾರಿ ರಾಬರ್ಟ್‌ಕ್ಲೈವ್. ಈತನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕಾರಕೂನನಾಗಿ ಸೇವೆಗೆ ಸೇರಿದ್ದನು. ಕಾರ್ನಾಟಿಕ್ ಯುದ್ಧದಲ್ಲಿ ಅದರಲ್ಲೂ ಆರ್ಕಾಟ್‌ನ ಮುತ್ತಿಗೆಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿ, ಬ್ರಿಟಿಷರ ವಿಜಯಕ್ಕೆ ಕಾರಣನಾದನು. ದಕ್ಷಿಣ ಭಾರತದಲ್ಲಿ ಬ್ರಿಟಿಷರ ಅಸ್ತಿತ್ವ ರೂಪಿಸುವಲ್ಲಿ ಸಫಲನಾದ ಈತ ಬಂಗಾಳದ ವಿಜಯಕ್ಕೂ ಕಾರಣನಾದನು. 1757ರ ಪ್ಲಾಸಿ ಕದನದ ವಿಜಯದಿಂದಾಗಿ ಬಂಗಾಳದ ನವಾಬನ ಮೇಲೆ ಹಿಡಿತವನ್ನು ಸಾಧಿಸಿದನು. ಇದರಿಂದ ಅಪಾರ ಸಂಪತ್ತನ್ನು ಕ್ಲೈವನು ಸಂಪಾದಿಸಿದ್ದಲ್ಲದೆ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೂ ಲಾಭವನ್ನು ತಂದುಕೊಟ್ಟನು. ಅಪಾರ ಸಂಪತ್ತಿನಿಂದ ಇಂಗ್ಲೆಂಡಿಗೆ ಹಿಂದಿರುಗಿದ ಕ್ಲೈವನು ಸಂಸತ್ತಿನ ಸದಸ್ಯನಾಗಿ ಸಹ ನೇಮಕಗೊಂಡನು. ರಾಬರ್ಟ್ ಕ್ಲೈವನು ಇಂಗ್ಲೆಂಡಿಗೆ ಹಿಂದಿರುಗಿದ ನಂತರ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ವ್ಯಾಪಾರದಲ್ಲಿ ನಷ್ಟವನ್ನು ಅನುಭವಿಸತೊಡಗಿತು. ಅವನ ಮೇಲೆ ಆಪಾದನೆಗಳು ಇದ್ದಾಗ್ಯೂ ಸಹ ಅನಿವಾರ್ಯತೆಯಲ್ಲಿ ಸರ್ಕಾರವು ಮತ್ತೆ ಕ್ಲೈವ್‌ನನ್ನು ಬ್ರಿಟಿಷರ ಘನತೆ ಮತ್ತು ಹಿತಾಸಕ್ತಿಗಳನ್ನು ಕಾಪಾಡುವ ಸಲುವಾಗಿ ಭಾರತಕ್ಕೆ ಸೇನಾಪತಿಯಾಗಿ ಕಳುಹಿಸಿಕೊಟ್ಟಿತು. ಬಕ್ಸಾರ್ ಕದನದಲ್ಲಿ ಮತ್ತೆ ವಿಜಯಿಯಾಗಿ ಬ್ರಿಟಿಷರಿಗೆ ಘನತೆಯನ್ನು ತಂದುಕೊಟ್ಟ ಕ್ಲೈವನು ಬಂಗಾಳ, ಬಿಹಾರ, ಒರಿಸ್ಸಾ ಪ್ರಾಂತ್ಯಗಳ ಮೇಲೆ ದಿವಾನಿ ಹಕ್ಕನ್ನು ಕಂಪನಿಗೆ ತಂದುಕೊಟ್ಟನು. ಇದರಿಂದ ಮತ್ತೆ ಸಂಪತ್ತನ್ನು ತನಗೂ ಮತ್ತು ಈಸ್ಟ್ ಇಂಡಿಯಾ ಕಂಪನಿಗೆ ದೊರಕಿಸಿಕೊಂಡು 1767ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದನು.

35) ಹಿರಾಕುಡ್ ಯೋಜನೆಯ ಪ್ರಮುಖ ಉದ್ದೇಶಗಳೇನು?

ಉತ್ತರ:– ಹಿರಾಕುಡ್ ಯೋಜನೆಯ ಮುಖ್ಯ ಉದ್ದೇಶಗಳೆಂದರೆ– ಪ್ರವಾಹ ನಿಯಂತ್ರಣ, ನೀರಾವರಿ ಪೂರೈಕೆ ಮತ್ತು ಜಲವಿದ್ಯುತ್ ತಯಾರಿಕೆ. ಜೊತೆಗೆ ಒಳನಾಡಿನ ಜಲಸಾರಿಗೆ, ಮೀನುಗಾರಿಕೆ ಮತ್ತು ಅರಣ್ಯ ಪೋಷಣೆಗಳಿಗೂ ನೆರವಾಗುವುದು.

36) ಮ್ಯಾಂಗ್ರೋವ್ ಅರಣ್ಯಗಳ ಬಗ್ಗೆ ಬರೆಯಿರಿ

ಉತ್ತರ:– ಮ್ಯಾಂಗ್ರೋವ್ ಅರಣ್ಯಗಳು ತೀರ ಪ್ರದೇಶಗಳ ತಗ್ಗು ವಲಯಗಳು ಸಮುದ್ರದ ಉಬ್ಬರದ ಕಾಲದಲ್ಲಿ ನೀರಿನಿಂದ ಆವರಿಸಲ್ಪಡುತ್ತವೆ. ಈ ಕಾಡುಗಳು ನದಿ ಮುಖಜ ಭೂಮಿಗಳು ಮತ್ತು ನದಿ ಅಳಿವೆಗಳ ತಗ್ಗು ಪ್ರದೇಶಗಳಲ್ಲಿ ಕಂಡುಬರುತ್ತವೆ. ಗಂಗಾ, ಮಹಾನದಿ, ಗೋದಾವರಿ, ಕೃಷ್ಣಾ ನದಿ ಮುಖಜ ಭೂಮಿಯಲ್ಲಿ ಕಂಡುಬರುವುದನ್ನು ನೋಡುತ್ತೇವೆ. ಗಂಗಾ ನದಿಯ ಮುಖಜ ಭೂಮಿಯಲ್ಲಿ ಸುಂದರಿ ಮರಗಳು ಹೇರಳವಾಗಿರುವದರಿಂದ ಈ ಪ್ರದೇಶವನ್ನು ಸುಂದರಬನ್ ಎಂದು ಕರೆಯುತ್ತಾರೆ. ಈ ಅರಣ್ಯಗಳ ಕ್ಷೇತ್ರ ದೇಶದಲ್ಲಿ 4.4 ಸಾವಿರ ಚ.ಕಿ.ಮೀ ರಷ್ಟಿದೆ

(ಮುಂದುವರಿಯುವುದು..........)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

REVISION : MODEL QUESTIONS

48. Draw an ideal pyramid of energy and mention the units. **(.....Contd)**

Ans:- a)



b) Ans:- The sequential, gradual and predicable changes in the species composition in an area are called succession or ecological succession, they are two type primary succession and Secondary succession.

49. a) Distinguish between primary productivity and secondary productivity of an ecosystem.

Ans:-

Primary Productivity	*Secondary Productivity*
It is the rate at which organic matter is built up by producers.	It is the rate at which organic matter is built up by consumers.
It is the result of synthesis of fresh organic matter from inorganic materials.	It is the result of synthesis of organic matter from organic matter.

b) Define food web?

Ans:- Many organisms occupy positions in different food chains and several food chains become interconnected to form a food web.

50. Briefly explain any three prevention and control measures of drug/ alcohol abuse.

Ans:- 1) Avoid undue peer pressure.

2) Educating and counselling problems and stresses to avoid disappointments and failure in life.

3) Seeking professional and medical help whenever required.

4) seeking help from parents and friends.

Answer any four of the following questions in about 200 to 250 words each:

51. Describe the out breeding devices that prevent the auto-gamy.

Ans:- Continued self-pollination results in inbreeding depression, flowering plants have developed out breeding devices to discourage self-pollination and to encourage cross-pollination.

1) Pollen grains are released before the stigma becomes receptive or stigma becomes receptive before pollens are released.

2) In some species the anthers and stigma are placed in different position, so that pollen cannot come in contact with stigma of the same flower.

3. Self-incompatibility, it is a genetic mechanism were pollens are prevented from fertilizing the ovule by inhibiting pollen tube germination.

4. By- production of unisexual flowers.

52. Draw a neat labelled diagram of human sperm.

Ans.



53. a. What is medical termination of pregnancy? Mention the safe period for medical Termination of pregnancy.

Ans. 1. It is defined as international or voluntary termination of pregnancy before full term.

2. MTP was legalised my Government of India in 1971. If India in 1971.

3. MTP is done in the following situations.

i. Failure of contra captive used during coitus or rapes.

ii. When continued pregnancy is harmful or fatal to either mother or foetus or both.

iii. It is performed during first trimester)ie) up to 12 weeks of pregnancy.

b. Write three simple principles to prevent sexually transmitted diseases.

Ans. i. Avoid sex with unknown partners/multiple partners.

ii. Always use condoms during coitus.

iii. Contact a qualified doctor for any doubt in early stage of infection.

54. Mention the steps involved in DNA finger printing?

Ans. FR. Alec Jeffery developed the Technique of DNA finger printing an attempt to identify DNA marker for inherited deceases. DNA finger printing uses short nucleotide repeats called variable number Tandem Repeats (VNTRs) as markers. VNTRs vary from person to person.

(Contd.........)

ಪರೀಕ್ಷೆಯ ದಿನ ತಿಂಡಿ ಹೀಗಿರಲಿ...

ದೀಪಾ ಬಿ.ಆರ್.

ಪರೀಕ್ಷೆಯ ದಿನ ಮಕ್ಕಳು ಮತ್ತು ಪೋಷಕರು ಹೆಚ್ಚು ಒತ್ತಡ ಮತ್ತು ಆತಂಕದಲ್ಲಿರುತ್ತಾರೆ. ಹಾಗಂತ ಬೆಳಗಿನ ತಿಂಡಿ ಮಾಡಿಸದೆ ಮಕ್ಕಳನ್ನು ಖಾಲಿ ಹೊಟ್ಟೆಯಲ್ಲಿ ಪರೀಕ್ಷೆಗೆ ಕಳುಹಿಸಬೇಡಿ. ಬ್ರೆಡ್, ಬಿಸ್ಕತ್ತು, ಕಾಫಿ/ಹಾಲು ಇತ್ಯಾದಿಗಳಿಂದಲೂ ಹೊಟ್ಟೆ ತುಂಬಿಸಲು ಪ್ರಯತ್ನಿಸಬೇಡಿ.

ಮಕ್ಕಳು ಹೆಚ್ಚು ಹೊತ್ತು ಉಪವಾಸವಿದ್ದರೆ ರಕ್ತದಲ್ಲಿನ ಸಕ್ಕರೆ ಮಟ್ಟ ಕಡಿಮೆಯಾಗಿ ಅವರ ಏಕಾಗ್ರತೆಗೆ ತೊಂದರೆ ಉಂಟು ಮಾಡುತ್ತದೆ. ಉತ್ತರ ಬರೆಯುವಲ್ಲಿ ಗಮನ ಕೇಂದ್ರೀಕರಿಸಲು ಸಾಧ್ಯವಾಗುವುದಿಲ್ಲ.

ಹಾಗಾಗಿ ಪರೀಕ್ಷೆಯ ದಿನ ಬೆಳಗಿನ ಉಪಾಹಾರ ಅತ್ಯಗತ್ಯ. ಸಂಕೀರ್ಣ ಕಾರ್ಬೊಹೈಡ್ರೇಟ್‌ಗಳು ಮತ್ತು ಪ್ರೊಟೀನ್ ಭರಿತ ಖಾದ್ಯಗಳನ್ನು ಉಪಾಹಾರಗಳಲ್ಲಿ ಹೇರಳವಾಗಿರುವಂತೆ ನೋಡಿಕೊಳ್ಳಬೇಕು. ಇದು ದೇಹದಲ್ಲಿ ಗೆಸೆಮಿಕ್ ಇಂಡೆಕ್ಸ್ ಕಡಿಮೆ ಇರುವಂತೆ ಮಾಡುತ್ತದೆ. ದೇಹದಲ್ಲಿನ ಗ್ಲುಕೋಸ್ ಪ್ರಮಾಣ ಸುಸ್ಥಿತಿಯಲ್ಲಿಡುತ್ತದೆ. ಮಕ್ಕಳ ಹೊಟ್ಟೆ ದೀರ್ಘಕಾಲದವರೆಗೂ ತುಂಬಿದಂತೆ ಅನಿಸುತ್ತದೆ.

ಉದಾಹರಣೆಗೆ: ಸಿರಿಧಾನ್ಯ ಹಾಗು ದ್ವಿದಳ ಧಾನ್ಯಗಳಿಂದ ಮಾಡಿದ ಇಡ್ಲಿ, ದೋಸೆ, ತರಕಾರಿಭರಿತ ಅವಲಕ್ಕಿ ಅಥವಾ ಉಪ್ಪಿಟ್ಟು, ದಾಲ್ ಕಿಚಡಿ ನೀಡಬಹುದಾಗಿದೆ. ಮೊಟ್ಟೆಗಳೊಂದಿಗೆ ಸಂಪೂರ್ಣ ಧಾನ್ಯದ ಬ್ರೆಡ್ ಸ್ಯಾಂಡ್‌ವಿಚ್, ಚಪಾತಿಯೊಂದಿಗೆ ಮೊಟ್ಟೆ ಅಥವಾ ಪನೀರ್ ಭುರ್ಜಿ, ಬೀಜಗಳೊಂದಿಗೆ ಓಟ್ಸ್, ಮ್ಯೂಸ್ಲಿ ಇತ್ಯಾದಿ ಆರೋಗ್ಯಕರವಾದ ಉಪಾಹಾರವನ್ನು ಮಕ್ಕಳಿಗೆ ಕೊಡಿ. ಜೊತೆಗೆ ರಾತ್ರಿ ನೆನೆಸಿದ ಬಾದಾಮಿ, ರಾಗಿ ಗಂಜಿ ಅಥವಾ ಮಾಲ್ಟ್ ಬಾದಾಮ್ ಹಾಲು ಸಹ ನೀಡಬಹುದು.

ಹಣ್ಣುಗಳಲ್ಲಿ ಬಾಳೆಹಣ್ಣು ಶಕ್ತಿಯ ಉತ್ತಮ ಮೂಲವಾಗಿದೆ ಮತ್ತು ಸಂಪೂರ್ಣ ಪೋಷಕಾಂಶಗಳನ್ನು ಒದಗಿಸುತ್ತವೆ. ಬಾಳೆಹಣ್ಣಿನಲ್ಲಿ ಟ್ರಿಪ್ಟೊಫಾನ್ ಎಂಬ ಅಮೈನೋ ಆಮ್ಲ ವಿಷಯಗಳನ್ನು ಕಲಿಯುವ ಮತ್ತು ನೆನಪಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ಮನಸ್ಥಿತಿಯನ್ನು ನಿಯಂತ್ರಿಸುತ್ತದೆ. ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಕಾಪಾಡಿಕೊಳ್ಳಲು, ಮಾನಸಿಕ ಗೊಂದಲ ಮತ್ತು ಅವ್ಯವಸ್ಥೆಯನ್ನು ತಡೆಯಲು ಪರೀಕ್ಷೆಯ ಮೊದಲು ಬಾಳೆಹಣ್ಣನ್ನು ಸೇವಿಸುವುದು ಒಳ್ಳೆಯದು. ಮೊಸರು ಪ್ರೊಟೀನ್ ಮಾತ್ರವಲ್ಲದೆ ಉತ್ತಮ ಪ್ರೋಬಯಾಟಿಕ್ ಕೂಡ.. ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

IIBS BENGALURU
Redefining Leading Talents
International Institute of Business Studies
Approved by AICTE | Affiliated to Bangalore City University
Ministry of Education, Government of India

NAAC A GRADE
Highest CGPA 3.20 in 4-Point Scale

ADMISSIONS OPEN FOR PGDM / MBA
BATCH (2024-26) (Dual Specialization)
CAMPUS PLACEMENT 2021-23
HIGHEST SALARY PACKAGE OFFERED
PGDM ₹51 LAKHS per Annum
MBA ₹48 LAKHS per Annum
MERIT SCHOLARSHIP*
FEMALE CANDIDATES UPTO ₹2.30 LAKHS
MALE CANDIDATES UPTO ₹2.10 LAKHS
*TO AVAIL MERIT SCHOLARSHIP APPLY ON OR BEFORE 19TH FEB 2024
#75, Muthugadahalli, Jala Hobli
Near International Airport, Bengaluru-562 157.
admission@iibsonline.com
www.iibs.edu.in | www.iibsonline.com
9986415333
9620248214

ಗ್ಯಾರಂಟಿ ಸಮಾವೇಶ: ದೇವೇಗೌಡ, ಕುಮಾರಸ್ವಾಮಿ ವಿರುದ್ಧ ಮುಖ್ಯಮಂತ್ರಿ ವಾಗ್ದಾಳಿ

ಶೂನ್ಯ ಸಾಧನೆ ಭಯಕ್ಕೆ ಜೆಡಿಎಸ್ ಮೈತ್ರಿ

ಪ್ರಜಾವಾಣಿ ವಾರ್ತೆ

ಮಳವಳ್ಳಿ (ಮಂಡ್ಯ ಜಿಲ್ಲೆ): '2018ರ ವಿಧಾನಸಭೆ ಚುನಾವಣೆಯಲ್ಲಿ 39 ಸ್ಥಾನ ಪಡೆದಿದ್ದ ಜೆಡಿಎಸ್ 2023ರಲ್ಲಿ 19 ಸ್ಥಾನಕ್ಕಿಳಿದಿದೆ. ಮುಂಬರುವ ಚುನಾವಣೆಗಳಲ್ಲಿ ಶೂನ್ಯ ಸಾಧನೆಯಾಗುತ್ತದೆ ಎಂಬ ಭಯದಿಂದಾಗಿ ಎಚ್.ಡಿ.ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಪಟ್ಟಣದ ಶಾಂತಿ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ 'ಗ್ಯಾರಂಟಿ ಯೋಜನೆ ಫಲಾನುಭವಿಗಳ ಸಮಾವೇಶ'ದಲ್ಲಿ ಅವರು ಮಾತನಾಡಿದರು.

'ಮುಂದಿನ ಜನ್ಮವಿದ್ದರೆ ಮುಸ್ಲಿಂ ಕುಟುಂಬದಲ್ಲಿ ಹುಟ್ಟುತ್ತೇನೆ ಎಂದು ಹೇಳಿದ್ದ ಎಚ್.ಡಿ.ದೇವೇಗೌಡರು ಈಗ ಏಕೆ ಕೋಮುವಾದಿ ಬಿಜೆಪಿ ಜೊತೆ ಸೇರಿಕೊಂಡಿದ್ದಾರೆ? ಮಿಸ್ಟರ್ ದೇವೇಗೌಡರೇ, ಕುಮಾರಸ್ವಾಮಿಯವರನ್ನು ಬಿಜೆಪಿ ಜೊತೆ ನಾನೇ ಕಳುಹಿಸಿದ್ದೇನೆ ಎಂದು ಹೇಳುತ್ತೀರಲ್ಲಾ, ನಿಮ್ಮ ಕೈಮುಗಿದು ಕೇಳಿಕೊಳ್ಳುತ್ತೇನೆ ನಿಮ್ಮ ಪಕ್ಷದಲ್ಲಿರುವ ಜಾತ್ಯತೀತ ಪದವನ್ನು ತೆಗೆದುಹಾಕಿಬಿಡಿ. ಆ ಪದವನ್ನು ಬಳಸಿಕೊಳ್ಳಲು ನಿಮಗೆ ಯಾವುದೇ ನೈತಿಕ ಹಕ್ಕಿಲ್ಲ' ಎಂದರು.

'ಜೆಡಿಎಸ್ ಸ್ಥಿತಿ ಕಂಡು ಅಲ್ಲಿನ ಶಾಸಕರು, ಮುಖಂಡರು ಪಕ್ಷ ತೊರೆಯುತ್ತಿದ್ದಾರೆ. ಅದನ್ನು ತಡೆಯಲು ದೇವೇಗೌಡರು ಹಾಗೂ ಕುಮಾರಸ್ವಾಮಿ ಮೈತ್ರಿಯ ನಾಟಕವಾಡುತ್ತಿದ್ದಾರೆ. ಜೆಡಿಎಸ್ ಪಕ್ಷವನ್ನು ಮುಗಿಸಿಬಿಡುತ್ತಾರೆ, ಅದಕ್ಕೇ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದೇವೆ ಎಂದು ಸಮರ್ಥಿಸಿಕೊಳ್ಳುತ್ತಾರೆ. ಜನರು ಇದನ್ನು ನಂಬಬೇಕಾ? ನಿಮ್ಮದೂ ಒಂದು ರಾಜಕೀಯ ಪಕ್ಷ. 19 ಜನ ಶಾಸಕರಾಗಿದ್ದಾರೆ. ಒಂದು ಪಕ್ಷ ಇನ್ನೊಂದು ಪಕ್ಷ ಮುಗಿಸಲು ಸಾಧ್ಯವೇ?' ಎಂದು ಕೇಳಿದರು.

'ನಾವು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದಾಗ ಪ್ರಧಾನಿ ನರೇಂದ್ರ ಮೋದಿಯವರು, 'ಗ್ಯಾರಂಟಿ ಯೋಜನೆಗಳು ಜಾರಿಯಾದರೆ ಕರ್ನಾಟಕ ದಿವಾಳಿಯಾಗುತ್ತದೆ' ಎಂದು ಭಾಷಣ ಮಾಡಿದ್ದರು. ಗ್ಯಾರಂಟಿ ಯೋಜನೆಗಳು ಲೋಕಸಭಾ ಚುನಾವಣೆವರೆಗೆ ಮಾತ್ರ ಎಂದು ಈಗ ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ಮೊನ್ನೆ ಮಂಡಿಸಿದ ಬಜೆಟ್‌ನಲ್ಲಿ ₹ 57 ಸಾವಿರ ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಮೀಸಲಿಟ್ಟಿದ್ದೇವೆ. ಮಿಸ್ಟರ್ ಆರ್.ಅಶೋಕ, ಬೊಮ್ಮಾಯಿ ಓದಿಕೊಳ್ರಪ್ಪಾ' ಎಂದರು.

'2013ರಿಂದ 2018ರವರೆಗೆ ನಾವು ಮಾಡಿದ ಕೆಲಸಗಳನ್ನು ಹೇಳಿಕೊಳ್ಳಲಿಲ್ಲ, ಸಾಧನೆಗಳನ್ನು ಜನರಿಗೆ ತಲುಪಿಸುವಲ್ಲಿ ವಿಫಲರಾದೆವು. ಹೀಗಾಗಿ ನಾವು ಆಗ ಸೋಲು ಕಾಣಬೇಕಾಯಿತು. ಆದರೆ, ಈಗ ಹಿಂದೆ ಮಾಡಿದ ತಪ್ಪುಗಳನ್ನು ಮಾಡುವುದಿಲ್ಲ. ನಾವು ಮಾಡಿದ ಕೆಲಸಗಳನ್ನು, ಸಾಧನೆಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡುತ್ತೇವೆ. ಜನರಿಗೆ ಸತ್ಯ ಹೇಳಿ ಎಂದು ನಮ್ಮ ಕಾರ್ಯಕರ್ತರಿಗೆ ಸೂಚನೆ ಕೊಟ್ಟಿದ್ದೇನೆ' ಎಂದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, 'ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್‌ನಲ್ಲಿ ಕೃಷಿಗೆ ವಿಶೇಷ ಆದ್ಯತೆ ನೀಡಿದ್ದಾರೆ. ಈ ಬಗ್ಗೆ 'ಪ್ರಜಾವಾಣಿ' ಪತ್ರಿಕೆ ವಿವರವಾಗಿ ಬಜೆಟ್ ವರದಿ ಪ್ರಕಟಿಸಿದೆ' ಎಂದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫಲಾನುಭವಿಯೊಬ್ಬರಿಗೆ ಯುವನಿಧಿ ಯೋಜನೆ ಚೆಕ್ ವಿತರಿಸಿದರು. ಪಿ.ಎಂ.ನರೇಂದ್ರಸ್ವಾಮಿ, ಗಣಿಗ ರವಿಕುಮಾರ್, ಎನ್.ಚಲುವರಾಯಸ್ವಾಮಿ ಇದ್ದಾರೆ

'ಬಿಜೆಪಿ ಜೊತೆ ಜೆಡಿಎಸ್ ವಿಲೀನ'

'ಜೆಡಿಎಸ್ ಪಕ್ಷ ಬಿಜೆಪಿಯೊಂದಿಗೆ ವಿಲೀನಗೊಂಡಿದ್ದು ರಾಜ್ಯದಲ್ಲಿ ಈಗ ಇರುವುದು ಒಂದೇ ವಿರೋಧ ಪಕ್ಷ. ಜೆಡಿಎಸ್ ಪ್ರತ್ಯೇಕ ಪಕ್ಷವಾಗಿ ಉಳಿದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

'ಜೆಡಿಎಸ್ ಒಂದು ಪಕ್ಷದಂತೆ ಕೆಲಸ ಮಾಡುತ್ತಿಲ್ಲ, ಅಲ್ಲಿನ ಮುಖಂಡರು ಬಿಜೆಪಿಯೊಂದಿಗೆ ಸೇರಿಕೊಂಡಿದ್ದಾರೆ. ಹೀಗಾಗಿ ರಾಜ್ಯದಲ್ಲಿ ಎರಡು ವಿರೋಧ ಪಕ್ಷಗಳು ಇಲ್ಲ. ಬಿಜೆಪಿ ಜೊತೆ ಸೇರಿ ಕೆಲಸ ಮಾಡುತ್ತಿದ್ದಾರೆ' ಎಂದರು.

ಕನಿಷ್ಠ 20 ಕ್ಷೇತ್ರಗಳಲ್ಲಿ ಗೆಲುವು: ಸಿದ್ದರಾಮಯ್ಯ

'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಕನಿಷ್ಠ 20 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದೆ. ಆದರೆ, ಬಿಜೆಪಿ ಮುಖಂಡರು ಬರೀ ಬುರುಡೆ ಬಿಡುತ್ತಿದ್ದು 28ಕ್ಕೆ 28 ಸ್ಥಾನಗಳಲ್ಲೂ ಗೆಲ್ಲುತ್ತೇವೆ ಎನ್ನುತ್ತಿದ್ದಾರೆ, ಅವರು ಡೋಂಗಿಗಳು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೊಟ್ಟ ಮಾತಿನಂತೆ ಕೇವಲ 8 ತಿಂಗಳಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ ಹೆಮ್ಮೆ ನಮಗಿದೆ. ಉಪಕಾರ ಮಾಡಿದವರನ್ನು ಜನರು ಎಂದೂ ಮರೆಯುವುದಿಲ್ಲ, ಲೋಕಸಭಾ ಚುನಾವಣೆಯಲ್ಲಿ ಖಂಡಿತಾ ನಮ್ಮ ಕೈಹಿಡಿಯುತ್ತಾರೆ. ಬಡವರಿಗೆ ಅಕ್ಕಿಕೊಡಲು ನಿರಾಕರಿಸಿದ ಬಿಜೆಪಿಗೆ ಜನರು ವೋಟು ಕೊಡುವುದಿಲ್ಲ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಸಿಎಂ, ಡಿಸಿಎಂ ಕೂಡ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲಿ' ಎಂಬ ಸಚಿವ ಮಹದೇವಪ್ಪ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಸ್ಥಳೀಯ ಮಟ್ಟದಲ್ಲಿ ಯಾರಿಗೆ ಒಲವು ಇರುತ್ತದೆಯೋ ಅವರು ಅಭ್ಯರ್ಥಿ ಆಗುತ್ತಾರೆ. ಸ್ಥಳೀಯರು ಯಾರ ಹೆಸರು ಹೇಳುತ್ತಾರೋ ಅವರಿಗೆ ಟಿಕೆಟ್ ಕೊಡುತ್ತೇವೆ. ಮಹದೇವಪ್ಪ ಅವರ ಹೆಸರು ಹೇಳಿದರೆ ಅವರಿಗೆ, ಬೇರೆಯವರ ಹೆಸರು ಹೇಳಿದರೆ ಬೇರೆಯವರಿಗೆ ನೀಡುತ್ತೇವೆ' ಎಂದರು.

ಮೈಸೂರು–ಕೊಡಗು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಟ ಡಾಲಿ ಧನಂಜಯ ಸ್ಪರ್ಧಿಸುತ್ತಾರೆಂದು ಚರ್ಚೆ ಆಗುತ್ತಿದೆಯಲ್ಲಾ ಎಂಬ ಪ್ರಶ್ನೆಗೆ, 'ನಮ್ಮ ಪಕ್ಷದಲ್ಲಿ ಅದರ ಬಗ್ಗೆ ಚರ್ಚೆಯಾಗಿಲ್ಲ. ನನಗೆ ಗೊತ್ತೂ ಇಲ್ಲ; ಚರ್ಚೆಯೂ ಆಗಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಚಾಕು ಹಾಕಿಸಿಕೊಳ್ಳಲು ಜೊತೆ ಇರಬೇಕಿತ್ತಾ'

ಹಾಸನ: 'ಕಾಂಗ್ರೆಸ್ ನಂಬಿದ್ದಕ್ಕೆ ನಮ್ಮ ಕುತ್ತಿಗೆ ಕೊಯ್ದರಲ್ಲ. ಚಾಕು ಹಾಕಿಸಿಕೊಳ್ಳಲು ಅವರ ಜೊತೆ ಇರಬೇಕಿತ್ತಾ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕುಮಾರಸ್ವಾಮಿ

'ಜೆಡಿಎಸ್ ಪಕ್ಷ ಬಿಜೆಪಿ ಜೊತೆ ಮೈತ್ರಿಯಾಗಿಲ್ಲ, ವಿಲೀನವಾಗಿದೆ. ರಾಜ್ಯದಲ್ಲಿರುವುದು ಒಂದೇ ವಿರೋಧ ಪಕ್ಷ. ಅವರಿಗೆ ಸೋಲಿನ ಭಯ ಶುರುವಾಗಿದೆ' ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ತಾಲ್ಲೂಕಿನ ಮಾರನಾಯಕಹಳ್ಳಿ ಗ್ರಾಮದಲ್ಲಿ ಭಾನುವಾರ ಪ್ರತಿಕ್ರಿಯೆ ನೀಡಿದರು.

'ನಾವು ವಿಲೀನ ಆಗುತ್ತೇವೆ ಎಂದು ಹೇಳುತ್ತಿದ್ದೀರಿಲ್ಲ, ನೀವೇನು ಮಾಡುತ್ತಿದ್ದೀರಿ' ಎಂದು ಪ್ರಶ್ನಿಸಿದ ಅವರು, 'ಕಾಂಗ್ರೆಸ್‌ನಲ್ಲಿ ಇರುವವರನ್ನು ಟೆಂಟ್, ಗಳಗಳ ಸಮೇತ ಎಲ್ಲ ಕಿತ್ತು ಬಿಜೆಪಿಗೆ ಕಳುಹಿಸುತ್ತಿದ್ದೀರಲ್ಲ? ನಿಮ್ಮಲ್ಲಿದ್ದ ಮಾಜಿ ಮುಖ್ಯಮಂತ್ರಿ ಸೇರಿ ಎಲ್ಲರನ್ನೂ ಕಳುಹಿಸುತ್ತಿದ್ದೀರಿ' ಎಂದು ವಾಗ್ದಾಳಿ ನಡೆಸಿದರು.

'ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಇಬ್ಬರಿಗೂ ಹೇಳುತ್ತಿದ್ದೇನೆ. ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳೋಕೆ ದೇವೇಗೌಡರೇ ಹೇಳಿ ಕಳುಹಿಸಿದ್ದಾರೆ ಎಂದು ನೀವು ಹೇಳಿದ್ದೀರಿ. ದೇವೇಗೌಡರು ಏಕೆ ಹೇಳಿದರು? ಅವರ 60 ವರ್ಷ ರಾಜಕೀಯ ಜೀವನದಲ್ಲಿ ಕಾಂಗ್ರೆಸ್ ನಂಬಿದ್ದು, ಕಾಂಗ್ರೆಸ್ ಸಂಕಷ್ಟದಲ್ಲಿದ್ದಾಗ ಧ್ವನಿಗೂಡಿಸಿ ಕೆಲಸ ಮಾಡಿದ್ದರು. 2018ರಲ್ಲಿ ನಿಮ್ಮ ಜತೆ ಸಂಬಂಧ ಬೆಳೆಸಿದ್ದೇವಲ್ಲವೆ? ನೀವು ಕೊಟ್ಟ ಕೊಡುಗೆ ಏನು' ಎಂದು ಪ್ರಶ್ನಿಸಿದರು.

'ರಾಜೀನಾಮೆ ಕೊಟ್ಟು ಬಾ. ಮುಂದಿನ ಮೂರು ವರ್ಷ ಮುಖ್ಯಮಂತ್ರಿ ಆಗು ಎಂದು ಪ್ರಧಾನಿ ಮೋದಿ ಹೇಳಿದ್ದರು. ಆದರೆ, ನೀವು ಕುತ್ತಿಗೆ ಕೊಯ್ದಿರಿ. ಈ ಚುನಾವಣೆ ಆಗಲಿ, ಆಮೇಲೆ ಎಲ್ಲದಕ್ಕೂ ಉತ್ತರ ಕೊಡೋಣ' ಎಂದು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು. 'ಗ್ಯಾರಂಟಿಗಳ ಹೆಸರಿನಲ್ಲಿ ನಾಡಿನ ಜನತೆಯ ಹಣ ದುರ್ಬಳಕೆ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ಸಾಲ ಮಾಡಿದೆ ಎನ್ನುತ್ತಿದ್ದರು. ₹1.05 ಲಕ್ಷ ಕೋಟಿ ಸಾಲ ಮಾಡಿದ್ದೀರಿ. ಈ ಸಾಲವನ್ನು ನೀವು ತೀರಿಸಲ್ಲ, ಜನರೇ ತೀರಿಸಬೇಕು. ನೀವು ಬಹಳ ಪ್ರವೀಣರು ಎಂದು ನನಗೆ ಗೊತ್ತಿದೆ. ನಿಮ್ಮ ಬಜೆಟ್ ನೋಡಿದರೆ ಯಾವಾನಾದ್ರೂ ನಗುತ್ತಾನೆ. ಸಾಲದ ಹೊರೆ ಹೊರಿಸಿ, ಸ್ವೇಚ್ಛಾಚಾರವಾಗಿ ಆಡಳಿತ ನಡೆಸುತ್ತಿದ್ದೀರಿ' ಎಂದು ಟೀಕಿಸಿದರು.

ಸುದ್ದಿ 2 ನಿಮಿಷ

ಬಿಜೆಪಿ ಅಧ್ಯಕ್ಷರಾಗಿ 100 ದಿನ ಪೂರ್ಣಗೊಳಿಸಿದ ವಿಜಯೇಂದ್ರ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಬಿ.ವೈ. ವಿಜಯೇಂದ್ರ ಅವರು 100 ದಿನಗಳನ್ನು ಪೂರ್ಣಗೊಳಿಸಿದ್ದಾರೆ.

'ಈ ಅವಧಿಯಲ್ಲಿ ಅವರು ರಾಜ್ಯವನ್ನು ಸಂಘಟನಾತ್ಮಕವಾಗಿ ಬಲಪಡಿಸುವ ಉದ್ದೇಶದಿಂದ ರಾಜ್ಯ ವ್ಯಾಪಿ ಪ್ರವಾಸ ಮಾಡಿದ್ದು, ಸುಮಾರು 10 ಸಾವಿರ ಕಿ.ಮೀ.ಗೂ ಹೆಚ್ಚು ದೂರ ಸಂಚಾರ ಮಾಡಿದ್ದಾರೆ' ಎಂದು ವಿಜಯೇಂದ್ರ ಅವರ ಕಚೇರಿ ಮೂಲಗಳು ಹೇಳಿವೆ.

'ಅಧ್ಯಕ್ಷರಾಗಿ ಆಯ್ಕೆ ಆದ ಬಳಿಕ ಬಹುತೇಕ ಎಲ್ಲ ಜಿಲ್ಲೆಗಳಿಗೂ ಭೇಟಿ ನೀಡಿದ್ದೂ ಅಲ್ಲದೆ, ಅಲ್ಲಿನ ಆಯ್ದ ಬೂತ್ ಅಧ್ಯಕ್ಷರ ಮನೆಗಳಿಗೆ ಭೇಟಿ ನೀಡಿ, ಅವರನ್ನು ಗೌರವಿಸಿ ಅವರ ಮನೆಯಲ್ಲೇ ಊಟ ಅಥವಾ ಉಪಾಹಾರ ಮಾಡುವ ಪರಿಪಾಟ ಆರಂಭಿಸಿದರು. ಈ ಮೂಲಕ ಕಾರ್ಯಕರ್ತರಲ್ಲಿ ಚೈತನ್ಯ ತುಂಬುವ ಕೆಲಸವನ್ನೂ ಮಾಡಿದರು. ಪಕ್ಷ ಬಿಟ್ಟು ಹೋದ ನಾಯಕರನ್ನು ಕರೆತರುವ ಕಾರ್ಯಕ್ಕೂ ಚಾಲನೆ ನೀಡಿದ ಪರಿಣಾಮ ಜಗದೀಶ ಶೆಟ್ಟರ್ ಮರಳಿ ಬಿಜೆಪಿ ಸೇರಿದರು' ಎಂದು ವಿಜಯೇಂದ್ರ ಆಪ್ತರು ಹೇಳಿದ್ದಾರೆ.

ಶಿರಾಳಕೊಪ್ಪದಲ್ಲಿ ಸ್ಫೋಟ ಸಂಭವಿಸಿದ ಸ್ಥಳವನ್ನು ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಪರಿಶೀಲನೆ ನಡೆಸಿದರು

ಶಿರಾಳಕೊಪ್ಪ ಸಂತೆಯಲ್ಲಿ ಸ್ಫೋಟ: ಇಬ್ಬರಿಗೆ ಗಾಯ

ಶಿರಾಳಕೊಪ್ಪ (ಶಿವಮೊಗ್ಗ): ಪ್ರತಿ ವಾರ ನಡೆಯುವ ಇಲ್ಲಿನ ಸಂತೆಗೆ ಬಂದಿದ್ದ ದಂಪತಿ ಅಂಗಡಿಯೊಂದರಲ್ಲಿ ಇರಿಸಿದ್ದ ಚೀಲದಲ್ಲಿನ ವಸ್ತು ಸ್ಫೋಟಗೊಂಡು ಇಬ್ಬರಿಗೆ ಗಾಯಗಳಾಗಿರುವ ಘಟನೆ ಭಾನುವಾರ ಮಧ್ಯಾಹ್ನ ಸಂಭವಿಸಿದೆ.

ಸಂತೆಗೆ ಬಂದಿದ್ದ ದಂಪತಿ ಅಂಗಡಿಯೊಂದರಲ್ಲಿ ಎರಡು ಬೆಡ್‌ಶೀಟ್ ಖರೀದಿಸಿ ಚೀಲವನ್ನು ಅಲ್ಲೇ ಇಟ್ಟಿದ್ದರು. ನಂತರ ಮತ್ತಿಬ್ಬರನ್ನು ಕರೆತಂದು, ಅವರ ಚೀಲವನ್ನೂ ಇರಿಸಿ ನೋಡಿಕೊಳ್ಳುವಂತೆ ಹೇಳಿಹೋಗಿದ್ದರು.ಅಂಗಡಿ ಮಾಲೀಕ ಅಂಥೋನಿ ಅವರ ಕಾಲು ಆ ಚೀಲಕ್ಕೆ ಬಡಿದು ಸ್ಫೋಟ ಸಂಭವಿಸಿದೆ. ಸ್ಫೋಟದ ತೀವ್ರತೆಗೆ ಅಂಥೋನಿ ಹಾಗೂ ಪಕ್ಕದಲ್ಲಿದ್ದ ಇನ್ನೊಬ್ಬ ವ್ಯಕ್ತಿ ಗಾಯಗೊಂಡಿದ್ದಾರೆ. ಅಂಥೋನಿ ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಗಾಯಗೊಂಡ ಇನ್ನೊಬ್ಬ ವ್ಯಕ್ತಿ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ವಾಪಸಾಗಿದ್ದಾರೆ. ಅವರ ಗುರುತು ಪತ್ತೆಯಾಗಿಲ್ಲ.

'ಕಾಡು ಹಂದಿ ಸೇರಿದಂತೆ ಇತರ ಪ್ರಾಣಿಗಳಿಗೆ ಇರಿಸಲು ಸ್ಫೋಟಕ ಖರೀದಿಸಿ ಈ ಚೀಲದಲ್ಲಿ ಇಟ್ಟಿರುವ ಸಾಧ್ಯತೆ ಇದ್ದು, ಅದೇ ಚೀಲ ಸ್ಫೋಟಿಸಿದೆ. ಉಮೇಶ ಮತ್ತು ರೂಪಾ ಎಂಬುವವರಿಗೆ ಸೇರಿರುವ ಆಧಾರ್ ಕಾರ್ಡ್‌ಗಳು ಚೀಲದಲ್ಲಿ ಸಿಕ್ಕಿವೆ. ಅವರ ಪತ್ತೆಗೆ ಶೋಧ ನಡೆದಿದೆ. ತನಿಖೆ ಪ್ರಗತಿಯಲ್ಲಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ. ಮಿಥುನ್‌ಕುಮಾರ್ ತಿಳಿಸಿದ್ದಾರೆ.

'ರಾಜ್ಯ ರಾಜಕಾರಣದಲ್ಲೇ ಇರುವೆ'

ಪ್ರಜಾವಾಣಿ ವಾರ್ತೆ

ಕೊಣನೂರು (ಹಾಸನ ಜಿಲ್ಲೆ): 'ಮಂಡ್ಯ, ಮೈಸೂರು, ತುಮಕೂರು ಸೇರಿದಂತೆ ಹಲವು ಜಿಲ್ಲೆಯ ಕಾರ್ಯಕರ್ತರು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಒತ್ತಡ ಹೇರುತ್ತಿದ್ದಾರೆ. ಆದರೆ ಯಾವುದೂ ಅಂತಿಮವಾಗಿಲ್ಲ. ನಾಡಿನ ಸಮಸ್ಯೆಗಳು ಬಗೆಹರಿಯಬೇಕು ಎಂಬುದು ನನ್ನ ಅಭಿಲಾಷೆಯಾಗಿದ್ದು, ರಾಜ್ಯ ರಾಜಕಾರಣದಲ್ಲೇ ಉಳಿಯುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, 'ಹಾಸನ ಕ್ಷೇತ್ರದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಯಾಗಿ ಜೆಡಿಎಸ್ ಅಭ್ಯರ್ಥಿಯೇ ಇರುತ್ತಾರೆ. ಈ ಬಗೆಗಿನ ಗೊಂದಲಗಳನ್ನು ಎಚ್.ಡಿ. ದೇವೇಗೌಡ ಮತ್ತು ಬಿಜೆಪಿ ವರಿಷ್ಠರು ನಿವಾರಿಸುತ್ತಾರೆ' ಎಂದರು.

'ಬಿಜೆಪಿ–ಜೆಡಿಎಸ್ ಮೈತ್ರಿಯು ಸ್ವಾರ್ಥದಿಂದ ಆಗಿದೆ' ಎಂಬ ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಕಳೆದ ವಿಧಾನಸಭೆ ಚುನಾವಣೆಯ ಫಲಿತಾಂಶದ ಹಿನ್ನೆಲೆಯಲ್ಲಿ ಬಿಜೆಪಿಯ ಹಿರಿಯ ನಾಯಕರ ಅಭಿಪ್ರಾಯದಂತೆ ಮೈತ್ರಿಯಾಗಿದೆ. ಇದರಲ್ಲಿ ನಮ್ಮ ಸ್ವಾರ್ಥವೇನೂ ಇಲ್ಲ' ಎಂದು ಹೇಳಿದರು.

'ರಾಜ್ಯದಲ್ಲಿ ಹಾಸನ ಜಿಲ್ಲೆ ಜೆಡಿಎಸ್ ಭದ್ರಕೋಟೆ ಎಂಬುದು ಎಲ್ಲರಿಗೂ ಗೊತ್ತು. ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಹಾಸನದ ಜನತೆ ಜೆಡಿಎಸ್ ಕೈ ಬಿಟ್ಟಿಲ್ಲ. ಈ ಚುನಾವಣೆಯಲ್ಲೂ ಕೈ ಹಿಡಿಯುವ ವಿಶ್ವಾಸವಿದ್ದು. ರಾಮಸ್ವಾಮಿಯವರು ಹಿರಿಯರು, ಬುದ್ಧಿವಂತರಿದ್ದು ಪ್ರಸ್ತುತ ಪರಿಸ್ಥಿತಿಯನ್ನು ಗಮನಿಸಿ ಅವರ ಭಾವನೆಯನ್ನು ಬದಲಿಸಿಕೊಳ್ಳಲಿ' ಎಂದರು.

'5,800 ಬಸ್ ಖರೀದಿಗೆ ಯೋಜನೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ್ಯದಲ್ಲಿ ಒಟ್ಟು 5,800 ಬಸ್‌ಗಳನ್ನು ಖರೀದಿ ಮಾಡಲು ಯೋಜನೆ ರೂಪಿಸಲಾಗಿದೆ. ಈಗಾಗಲೇ 1,000ಕ್ಕೂ ಹೆಚ್ಚು ಬಸ್‌ಗಳ ಖರೀದಿ ಪ್ರಕ್ರಿಯೆ ಆರಂಭವಾಗಿದೆ. ಇದರೊಂದಿಗೆ 2,000ಕ್ಕೂ ಹೆಚ್ಚು ಚಾಲಕ ಹಾಗೂ ನಿರ್ವಾಹಕರ ನೇಮಕಾತಿ ಕೂಡ ಮಾಡಿಕೊಳ್ಳಲಾಗುವುದು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ನಗರದಲ್ಲಿ ಭಾನುವಾರ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ನೀಡಿದ 50 ಹೊಸ ಬಸ್‌ಗಳ ಸಂಚಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಮಾರ್ಚ್–ಏಪ್ರಿಲ್ ಒಳಗಾಗಿ 5,000 ಬಸ್‌ಗಳನ್ನು ಖರೀದಿ ಮಾಡಲಾಗುವುದು' ಎಂದರು.

'ಸಾರಿಗೆ ಸಂಸ್ಥೆಗಳನ್ನು ವಿಲೀನ ಮಾಡುವ ವಿಚಾರ ಸರ್ಕಾರದ ಮುಂದೆ ಇಲ್ಲ. ಎಲ್ಲವೂ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತವೆ. ಬಸ್ ಖರೀದಿ ಮಾಡಲು ಸಂಸ್ಥೆಗಳಿಗೇ ಸ್ವಾತಂತ್ರ್ಯ ನೀಡುತ್ತೇವೆ' ಎಂದರು.

'ಮುಂಬರುವ ದಿನಗಳಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಹೆಚ್ಚಿನ ಬಸ್ ಸೌಕರ್ಯ ಒದಗಿಸಲು ಸರ್ಕಾರ ಉದ್ದೇಶಿಸಿದೆ. ಉತ್ತರ ಕರ್ನಾಟಕಕ್ಕೆ, ಅದರಲ್ಲೂ ಹಳ್ಳಿಗಳಿಗೆ ಹಳೆ ಬಸ್‌ಗಳನ್ನೇ ನೀಡಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಆದರೆ, ನಾನು ಸಚಿವ ಇದ್ದಾಗ ಯಾವಾಗಲೂ ಈ ರೀತಿ ಆಗಿಲ್ಲ' ಎಂದರು.

'ಅಪಘಾತಗಳಲ್ಲಿ ಮೃತರಾದ ಬಸ್ ಚಾಲಕ, ನಿರ್ವಾಹಕರ ವಾರಸುದಾರರಿಗೆ ₹50 ಲಕ್ಷ ಪರಿಹಾರ ನೀಡಲಾಗುತ್ತಿದೆ. ಪರಿಹಾರ ಧನವನ್ನು ₹1 ಕೋಟಿಗೆ ಹೆಚ್ಚಿಸುವಂತೆ ಪ್ರಸ್ತಾವ ಸಲ್ಲಿಸಲಾಗಿದೆ. ಅಲ್ಲದೇ, ನೌಕರಿಯಲ್ಲಿದ್ದಾಗ ನಿಧನ ಹೊಂದಿದರೆ ₹5ಲಕ್ಷ ಪರಿಹಾರ ನೀಡಲಾಗುತ್ತಿದ್ದು, ಇದನ್ನು ಕೂಡ ₹10ಲಕ್ಷಕ್ಕೆ ಏರಿಸಲು ನಿರ್ಧರಿಸಲಾಗಿದೆ. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷ ರಾಜು ಕಾಗೆ ಮಾತನಾಡಿ, 'ಬಸ್‌ಗಳ ಹೆಚ್ಚಿನ ಸಮಸ್ಯೆ ಇರುವುದು ಹಳ್ಳಿಗಳಲ್ಲಿ. ಶಾಲಾ ಮಕ್ಕಳಿಗೆ ಸರಿಯಾಗಿ ಬಸ್ ಸಿಗುತ್ತಿಲ್ಲ. ಸಚಿವರು ಇದರತ್ತ ಗಮನ ಹರಿಸಬೇಕು' ಎಂದರು.

ಐದು ವರ್ಷಗಳಿಂದ ಅಪಘಾತ ರಹಿತ ವಾಹನ ಚಾಲನೆ ಮಾಡಿದ 38 ಬಸ್ ಚಾಲಕರಿಗೆ ಬೆಳ್ಳಿ ಪದಕ, ಪ್ರಶಸ್ತಿ ಪತ್ರ ನೀಡಲಾಯಿತು.

ಸಾಹಿತಿ ವಿಷ್ಣು ನಾಯ್ಕ ನಿಧನ

ಅಂಕೋಲಾ (ಉತ್ತರ ಕನ್ನಡ ಜಿಲ್ಲೆ): ಗ್ರಾಮೀಣ ಸೊಗಡಿನ ಬರವಣಿಗೆಯ ಶೈಲಿಯಿಂದ ನಾಡಿನ ಗಮನಸೆಳೆದ ಬರಹಗಾರ, ಪ್ರಕಾಶಕ ತಾಲ್ಲೂಕಿನ ಅಂಬಾರಕೊಡ್ಲದ ವಿಷ್ಣು ನಾಯ್ಕ (80) ಶನಿವಾರ ತಡರಾತ್ರಿ ಕಾರವಾರದ ಜಿಲ್ಲಾಸ್ಪತ್ರೆಯಲ್ಲಿ ನಿಧನರಾದರು.

ಕೆಲವು ದಿನಗಳಿಂದ ವಯೋಸಹಜ ಅನಾರೋಗ್ಯಕ್ಕೆ ತುತ್ತಾಗಿದ್ದ ಅವರನ್ನು ಚಿಕಿತ್ಸೆಗೆ ದಾಖಲಿಸಲಾಗಿತ್ತು. ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಭಾನುವಾರ ಅಂಬಾರಕೊಡ್ಲ ಗ್ರಾಮದಲ್ಲಿ ನಡೆಯಿತು.

50 ವರ್ಷಗಳ ಸಾಹಿತ್ಯ ಕೃಷಿಯಲ್ಲಿ 25 ಸಂಪಾದಿತ ಕೃತಿಗಳನ್ನು ಒಳಗೊಂಡು 80ಕ್ಕೂ ಹೆಚ್ಚು ಕೃತಿಗಳನ್ನು ಅವರು ರಚಿಸಿದ್ದಾರೆ. ಕವನ, ನಾಟಕ, ಅಂಕಣ, ವಿಮರ್ಶೆ, ಕಥಾಸಂಕಲನ ಮತ್ತು ಜೀವನ ಪರಿಚಯಗಳ ಕೃತಿಗಳನ್ನು ಬರೆದಿದ್ದಾರೆ. 2007ರಲ್ಲಿ ಭಟ್ಕಳದಲ್ಲಿ ನಡೆದ ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

'ರಾಘವೇಂದ್ರ ಪ್ರಕಾಶನ' ಸ್ಥಾಪಿಸಿ, ಮುನ್ನಡೆಸಿದ್ದ ಅವರು 183 ಗ್ರಂಥಗಳನ್ನು ಪ್ರಕಾಶನದ ಮೂಲಕ ಪ್ರಕಟಿಸಿದ್ದರು. ತಮ್ಮ ಮನೆಯ ಮಹಡಿಯಲ್ಲಿ ಸಾಹಿತ್ಯ ವಸ್ತು ಸಂಗ್ರಹಾಲಯ ಸ್ಥಾಪಿಸಿದ್ದ ಅವರು ಅಲ್ಲಿ ನಾಡಿನ ಹೆಸರಾಂತ ಸಾಹಿತಿಗಳೊಂದಿಗೆ ನಡೆಸಿದ ಪತ್ರ ವ್ಯವಹಾರ, ಉಭಯ ಕುಶಲೋಪರಿ ವಿನಿಮಯ, ಹೆಸರಾಂತ ಸಾಹಿತಿಗಳ ಕೈಬರಹ, ಚುಟುಕು ಕವಿ ದಿನಕರ ದೇಸಾಯಿ ಅವರ ಸಾಹಿತ್ಯ ಕೃತಿಗಳನ್ನು ಇರಿಸಿದ್ದರು. ದೇಶಿಯ ವಸ್ತುಗಳ ಸಂಗ್ರಹಾಲಯವನ್ನು ಮಾಡಿಕೊಂಡಿದ್ದರು.

ವಿಷ್ಣು ನಾಯ್ಕ

ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಆದರ್ಶ ಶಿಕ್ಷಕ ರಾಜ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಅತ್ಯುತ್ತಮ ಗ್ರಂಥ ಪ್ರಕಾಶಕ, ಬೇಂದ್ರೆ ಕಾವ್ಯ ಪುರಸ್ಕಾರ ಸೇರಿದಂತೆ ಹಲವು ಪ್ರಶಸ್ತಿಗಳನ್ನೂ ಮುಡಿಗೇರಿಸಿಕೊಂಡಿದ್ದರು.

ಕೆಎಸ್‌ಆರ್‌ಟಿಸಿಗೆ ಪ್ರಶಸ್ತಿ ಗರಿ

ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಟಿಸಿ ಆಡಳಿತ ಮಂಡಳಿಯ ಕಾರ್ಯದರ್ಶಿ ಹಾಗೂ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಲತಾ ಟಿ.ಎಸ್. ಅವರಿಗೆ (ಎಡದಿಂದ ನಾಲ್ಕನೆಯವರು) ಜಾಗತಿಕ ಉತ್ಪಾದನಾ ಕಾಂಗ್ರೆಸ್ ಮತ್ತು ಜಾಗತಿಕ ಮಾರುಕಟ್ಟೆ ಕಾಂಗ್ರೆಸ್ ಸಂಸ್ಥೆಯು 'ಜಾಗತಿಕ ಮಹಿಳಾ ನಾಯಕಿ' ಪ್ರಶಸ್ತಿ ನೀಡಿ ಗೌರವಿಸಿದೆ. ಕೆಎಸ್‌ಆರ್‌ಟಿಸಿಗೆ ಸಂದ ಇತರ ಪ್ರಶಸ್ತಿಗಳನ್ನು ವಿಭಾಗೀಯ ತಾಂತ್ರಿಕ ಶಿಲ್ಪಿ ಸೌಮ್ಯಾ ಸಿ., ಸಹಾಯಕ ಆಡಳಿತಾಧಿಕಾರಿ ಶಿಬಾ ಎಸ್., ವಿಭಾಗೀಯ ತಾಂತ್ರಿಕ ಎಂಜಿನಿಯರ್ ಎಚ್.ಎಸ್. ಸತೀಶ್ ಸ್ವೀಕರಿಸಿದರು. ಯುನೈಟೆಡ್ ಸ್ಟೇಟ್ಸ್‌ನ ನಿನಾ ಇ ಉಡರ್ಡ ಅಸೋಸಿಯೇಟ್ಸ್ ಅಧ್ಯಕ್ಷೆ ನಿನಾ, ದುಬೈ ಓರ್ಥೋನ್ ಗ್ರೂಪ್ ಸಂಸ್ಥಾಪಕರಾದ ಓವಿಲಿಯಾ ಫೆರ್ನಾಂಡಿಸ್ ಪ್ರಶಸ್ತಿ ಪ್ರದಾನ ಮಾಡಿದರು.

ಮೂವರ ಬಂಧನ

ಕಲಬುರಗಿ: 545 ಪಿಎಸ್‌ಐ ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿ ನಡೆದಿದ್ದ ಪರೀಕ್ಷಾ ಅಕ್ರಮ ಸಂಬಂಧ ಸಿಐಡಿ ತನಿಖಾ ಅಧಿಕಾರಿಗಳು ಒಂದೂವರೆ ವರ್ಷದ ಬಳಿಕ ಮತ್ತೆ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿ ಆರ್.ಡಿ. ಪಾಟೀಲ ಆಪ್ತ ಹಾಗೂ ಡೀಲ್ ಕುದುರಿಸುತ್ತಿದ್ದ ಶಶಿಧರ ಜಮಾದಾರ್, ಶಹಾಬಾದ್ ಸಮುದಾಯ ಆಸ್ಪತ್ರೆಯ ಎಫ್‌ಡಿಎ ಚಂದ್ರಕಾಂತ ಪ್ಯಾಟಿ ಹಾಗೂ ಅಫಜಲಪುರದ ಬಿಸಿಎಂ ಹಾಸ್ಟೆಲ್ ವಾರ್ಡನ್ ಬಸವರಾಜ ಜಮಾದಾರ ಬಂಧಿತ ಆರೋಪಿಗಳು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

'ಪಿಎಂ ಉಷಾ': ರಾಜ್ಯದ 2 ವಿ.ವಿಗೆ ತಲಾ ₹100 ಕೋಟಿ

ಒಂದನೇ ಪುಟದಿಂದ

ದೇಶದ 1,472 ವಿಶ್ವವಿದ್ಯಾಲಯಗಳ ಪೈಕಿ ಕೇವಲ 26 ವಿಶ್ವವಿದ್ಯಾಲಯಗಳು ಮಾತ್ರ ತಲಾ ₹100 ಕೋಟಿ ಅನುದಾನ ಪಡೆಯಲು ಆಯ್ಕೆ ಆಗಿವೆ.

ಈ ಯೋಜನೆಯ 'ವಿಶ್ವವಿದ್ಯಾಲಯಗಳ ಬಲವರ್ಧನೆಗೆ ಅನುದಾನ' (ಜಿಎಸ್‌ಯು) ವಿಭಾಗದ ಅಡಿ ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಕಲಬುರಗಿಯ ಗುಲ್ಬರ್ಗಾ ವಿಶ್ವವಿದ್ಯಾಲಯವು ಅನುದಾನ ಪಡೆಯಲು ಅರ್ಹತೆ ಪಡೆದಿವೆ.

ಕೇವಲ 90 ಪ್ರಸ್ತಾವ: ಹೊಸ ಮಾದರಿಯ ಪದವಿ ಕಾಲೇಜುಗಳು (ಎನ್‌ಎಂಡಿಸಿ) ವಿಭಾಗದಲ್ಲಿ ಅನುದಾನ ಪಡೆಯಲು 90 ಪ್ರಸ್ತಾವಗಳು ಮಾತ್ರ ಪಿಎಬಿಗೆ ಸಲ್ಲಿಕೆ ಆಗಿದ್ದವು. ಯಾವುದೇ ಉನ್ನತ ಶಿಕ್ಷಣ ಸಂಸ್ಥೆ ಇಲ್ಲದ ಜಿಲ್ಲೆಗಳಲ್ಲಿ ಮಾತ್ರ ಹೊಸ ಮಾದರಿಯ ಪದವಿ ಕಾಲೇಜುಗಳಿಗೆ ಈ ಯೋಜನೆಯಡಿ ಅನುದಾನ ನೀಡಲಾಗುವುದು ಎಂಬ ಷರತ್ತು ವಿಧಿಸಲಾಗಿತ್ತು. ಸಲ್ಲಿಕೆಯಾಗಿದ್ದ ಪ್ರಸ್ತಾವಗಳೆಲ್ಲ ಈ ಷರತ್ತಿನ ಕಾರಣಕ್ಕೆ ಅನರ್ಹಗೊಂಡಿವೆ. ಹೀಗಾಗಿ, ಈ ವಿಭಾಗದಲ್ಲಿ ಅನುದಾನ ಪಡೆಯಲು ನಿಗದಿಪಡಿಸಿರುವ ಮಾನದಂಡಗಳನ್ನು ಪರಿಷ್ಕರಿಸಲು ಪಿಎಬಿ ನಿರ್ಧರಿಸಿದೆ.

ಅನುದಾನ ಸಮರ್ಪಕ ಬಳಕೆ: 'ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಘೋಷಣೆಯಾಗಿರುವ ಅನುದಾನದಲ್ಲಿ ₹50 ಕೋಟಿ ಪ್ರಸ್ತಾವಿತ ಹೊಸ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗಾಗಿ ಶೈಕ್ಷಣಿಕ ಕಟ್ಟಡ, ಹಾಸ್ಟೆಲ್‌ಗಳ ನಿರ್ಮಾಣ, ₹30 ಕೋಟಿಯನ್ನು ಕ್ಯಾಂಪಸ್ ಉನ್ನತೀಕರಣ, ಕ್ರೀಡಾ ಸೌಲಭ್ಯಗಳ ಹೆಚ್ಚಳ, ಸ್ಮಾರ್ಟ್ ಕ್ಲಾಸ್, ಆರೋಗ್ಯ ಕೇಂದ್ರದ ಉನ್ನತೀಕರಣ, ಮ್ಯೂಸಿಯಂ ಸಂಪನ್ಮೂಲಗಳ ಡಿಜಿಟಲೀಕರಣ ಮತ್ತು ಪರಿಸರ ಸಂರಕ್ಷಣೆ ಮತ್ತು ಹಸಿರು ಕ್ಯಾಂಪಸ್ ಚಟುವಟಿಕೆಗೆ ಬಳಸಲಾಗುವುದು. ಉಳಿದ ₹20 ಕೋಟಿಯನ್ನು ಸುಧಾರಿತ ವೈಜ್ಞಾನಿಕ ಉಪಕರಣಗಳ ಖರೀದಿ ಮತ್ತು ವಿವಿಧ ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ' ಎಂದು ಕುಲಸಚಿವ (ಆಡಳಿತ) ಶೇಕ್ ಲತೀಫ್ ತಿಳಿಸಿದರು.

ಸುಧಾ, ಮಯೂರ ಓದಿರಿ

ಆಚಾರ್ಯ 108 ವಿದ್ಯಾಸಾಗರ ಮಹಾರಾಜ ಜಿನೈಕ್ಯ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಜೈನ ಧರ್ಮದ ಮಹಾನ್ ಸಾಧಕ, ಆಚಾರ್ಯ 108 ವಿದ್ಯಾಸಾಗರ ಮಹಾರಾಜ ಅವರು ಛತ್ತೀಸಗಢ ರಾಜ್ಯದ ಡೊಂಗರಘಡದಲ್ಲಿ ಸಲ್ಲೇಖನ ವ್ರತದ ಮೂಲಕ ಜಿನೈಕ್ಯರಾದರು. ಅವರು ಮೂಲತಃ ಚಿಕ್ಕೋಡಿ ತಾಲ್ಲೂಕಿನ ಸದಲಗಾ ಪಟ್ಟಣದವರು.

ಆಚಾರ್ಯ 108 ವಿದ್ಯಾಸಾಗರ ಮಹಾರಾಜ

ಮೂರು ದಿನಗಳ ಹಿಂದೆ ಯಮ ಸಲ್ಲೇಖನ ವ್ರತ ಕೈಗೊಂಡ ವಿದ್ಯಾಸಾಗರ ಮಹಾರಾಜರು, ಭಾನುವಾರ ನಸುಕಿನ 2.30ಕ್ಕೆ ದೇಹ ತ್ಯಾಗ ಮಾಡಿದರು. ಅವರು ಜಿನೈಕ್ಯರಾದ ವಿಷಯ ಜಿಲ್ಲೆಯಲ್ಲಿ ಕ್ಷಿಪ್ರವಾಗಿ ಹರಡಿತು. ಸದಲಗಾ ಪಟ್ಟಣದ ಎಲ್ಲ ವ್ಯಾಪಾರಸ್ಥರೂ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಶ್ರದ್ಧಾಂಜಲಿ ಸಲ್ಲಿಸಿದರು. ಜೈನ ಸಮುದಾಯದ ಜನರು ಮೌನ ಮೆರವಣಿಗೆ ಮಾಡಿ ನುಡಿನಮನ ಸಲ್ಲಿಸಿದರು.

ಶ್ರದ್ಧಾನಂದ ಸ್ವಾಮೀಜಿ, ಮುನಿ ಹೇಮಸಾಗರ ಮಹಾರಾಜ, ದೇವಧರ ಮಹಾರಾಜ, ಶಾಸಕ ಗಣೇಶ ಹುಕ್ಕೇರಿ, ದಕ್ಷಿಣ ಭಾರತ ಜೈನ ಸಭಾ ಅಧ್ಯಕ್ಷ ರಾವಸಾಹೇಬ ಪಾಟೀಲ, ಅರುಣ ದೇಸಾಯಿ, ಪ್ರಕಾಶ ಪಾಟೀಲ, ಜಯಕುಮಾರ ಖೋತ ನೇತೃತ್ವದಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು.

22ನೇ ವಯಸ್ಸಿನಲ್ಲಿ ಮುನಿ ದೀಕ್ಷೆ: 1946ರ ಅಕ್ಟೋಬರ್ 10ರಂದು ಸದಲಗಾ ಪಟ್ಟಣದಲ್ಲಿ ಅವರು ಜನಿಸಿದರು. ತಂದೆ ಮಲ್ಲಪ್ಪ ಅಸ್ಟಗೆ, ತಾಯಿ ಶ್ರೀಮಂತಿ ಅಸ್ಟಗೆ. ಮುನಿ ಅವರ ಪೂರ್ವಾಶ್ರಮದ ಹೆಸರು ವಿದ್ಯಾಧರ ಅಸ್ಟಗೆ. ಪ್ರಾಥಮಿಕ ಶಿಕ್ಷಣವನ್ನು ಸದಲಗಾದಲ್ಲಿ, ಪ್ರೌಢ ಶಿಕ್ಷಣವನ್ನು ಶಮನೇವಾಡಿ– ಬೇಡಕಿಹಾಳದಲ್ಲಿ ಪಡೆದರು. ದೇಶಭೂಷಣ ಮಹಾರಾಜರೊಂದಿಗೆ ಶ್ರವಣ ಬೆಳಗೊಳ ಯಾತ್ರೆ ಕೈಗೊಂಡ ಅವರು, ತಮ್ಮ 22ನೇ ವಯಸ್ಸಿನಲ್ಲಿ 1968ರಲ್ಲಿ ಆಚಾರ್ಯ ಜ್ಞಾನಸಾಗರ ಮಹಾರಾಜರಿಂದ ಮುನಿ ದೀಕ್ಷೆ ಪಡೆದರು. 1975ರಲ್ಲಿ ಜ್ಞಾನಸಾಗರ ಮಹಾರಾಜರು 'ಆಚಾರ್ಯ' ಪದವಿ ನೀಡಿದರು. ನಂತರ ಅವರು ವಿವಿಧ ರಾಜ್ಯಗಳನ್ನು ಸುತ್ತಿದರು. 130 ಬಾಲ ಬ್ರಹ್ಮಚಾರಿಗಳಿಗೆ ಮುನಿದೀಕ್ಷೆ, 172 ಸ್ತ್ರೀಯರಿಗೆ ಆರಿಕಾ ದೀಕ್ಷೆ, 56 ಜನರಿಗೆ ಐಲಕ ದೀಕ್ಷೆ, 66 ಜನರಿಗೆ ಕ್ಷುಲ್ಲಕ ದೀಕ್ಷೆ, 3 ಸ್ತ್ರೀಯರಿಗೆ ಕ್ಷುಲ್ಲಿಕಾ ದೀಕ್ಷೆ, ಸಾವಿರಾರು ಯುವಕರಿಗೆ ಆಜೀವನ ಬ್ರಹ್ಮಚರ್ಯ ವ್ರತ ದೀಕ್ಷೆ ನೀಡಿದ್ದಾರೆ.

9ನೇ ತರಗತಿಯವರೆಗೆ ಮಾತ್ರ ಓದಿದ್ದ ವಿದ್ಯಾಸಾಗರ ಮಹಾರಾಜರು ಹಿಂದಿ ಭಾಷೆಯಲ್ಲಿ 'ಮೂಕ ಮಾಟಿ' ಗ್ರಂಥ ರಚಿಸಿದ್ದರು. ಕನ್ನಡ, ಮರಾಠಿ, ಇಂಗ್ಲಿಷ್, ಹಿಂದಿ, ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯ ಸಾಧಿಸಿದ್ದರು.

ಕುಟುಂಬದವರಿಗೂ ದೀಕ್ಷೆ: ವಿದ್ಯಾಸಾಗರ ಮುನಿ ಮಹಾರಾಜರ ಮೂವರು ಸಹೋದರರು ದಿಗಂಬರ ದೀಕ್ಷೆಯನ್ನು ತೆಗೆದುಕೊಂಡಿದ್ದು, ಇಬ್ಬರು ಸಹೋದರಿಯರು ಸಾಧ್ವಿಯಾಗಿದ್ದಾರೆ. ಆಚಾರ್ಯ ವಿದ್ಯಾಸಾಗರ ಮಹಾರಾಜರ ಜನ್ಮಸ್ಥಳದಲ್ಲಿ ಶಾಂತಿನಾಥನ ವಿಗ್ರಹ ಸ್ಥಾಪಿಸಿದ್ದು, ಪ್ರತಿ ವರ್ಷ ಲಕ್ಷಾಂತರ ಭಕ್ತರು ಇಲ್ಲಿಗೆ ಆಗಮಿಸಿ ದರ್ಶನ ಪಡೆದುಕೊಳ್ಳುತ್ತಾರೆ.

ಆದಿ ಜಾಂಬವ ಸಂಘದ ಸಮಾರಂಭದಲ್ಲಿ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ

'ಒಳಮೀಸಲಿಗೆ ಸಂವಿಧಾನದಲ್ಲೇ ಅವಕಾಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಳಮೀಸಲಾತಿ ಜಾರಿ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿದ್ದು, ತೀರ್ಪು ಸಮುದಾಯದ ಪರವಾಗಿ ಬಾರದಿದ್ದರೂ ಒಳಮೀಸಲಾತಿ ಜಾರಿಗೆ ಸಂವಿಧಾನದಲ್ಲೇ ಅವಕಾಶ ಇದೆ' ಎಂದು ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಅಭಿಪ್ರಾಯಪಟ್ಟರು.

ನಗರದಲ್ಲಿ ಭಾನುವಾರ ಅಖಿಲ ಕರ್ನಾಟಕ ಆದಿ ಜಾಂಬವ ಸಂಘದ 45ನೇ ವಾರ್ಷಿಕೋತ್ಸವ ಸಮಾರಂಭ ಹಾಗೂ ಪಿ.ಎಂ.ಚಿಕ್ಕವೆಂಕಟಸ್ವಾಮಿ ಅವರು ಬರೆದ ಆದಿ ಜಾಂಬವ–ಮತಂಗ–ಮಾತಂಗೀ ಅತ್ರಿ ಅನಸೂಯ–ವಸಿಷ್ಠ ಅರುಂಧತಿಯರ ಇತಿಹಾಸದ ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸಂವಿಧಾನದಲ್ಲಿ ಅವಕಾಶವಿದ್ದರೂ ರಾಜಕೀಯ ಮುಖಂಡರು ನಮ್ಮನ್ನು ಮೂರ್ಖರನ್ನಾಗಿ ಮಾಡುತ್ತಿದ್ದಾರೆ. ಒಳಮೀಸಲಾತಿ ಜಾರಿಗೆ ಯಾವುದೇ ತಿದ್ದುಪಡಿ ಅಗತ್ಯ ಇಲ್ಲ. ರಾಜಕೀಯ ಪಕ್ಷಗಳಿಗೆ ಎದೆಗಾರಿಕೆ ಬೇಕು' ಎಂದು ಪ್ರತಿಪಾದಿಸಿದರು.

ಬೆಂಗಳೂರಿನಲ್ಲಿ ಭಾನುವಾರ ನಡೆದ ಅಖಿಲ ಕರ್ನಾಟಕ ಆದಿ ಜಾಂಬವ ಸಂಘದ 45ನೇ ವಾರ್ಷಿಕೋತ್ಸವದಲ್ಲಿ (ಎಡದಿಂದ ನಾಲ್ಕನೆಯವರು) ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಅವರು ಆದಿ ಜಾಂಬವ–ಮತಂಗ–ಮಾತಂಗೀ ಅತ್ರಿ ಅನಸೂಯ–ವಸಿಷ್ಠ ಅರುಂಧತಿಯರ ಇತಿಹಾಸದ ಕೃತಿಯನ್ನು ಬಿಡುಗಡೆ ಮಾಡಿದರು. ಬಿ.ಎನ್‌.ಚಂದ್ರಪ್ಪ, ಎಲ್‌.ಹನುಮಂತಯ್ಯ, ಲೇಖಕ ಪಿ.ಎಂ.ಚಿಕ್ಕವೆಂಕಟಸ್ವಾಮಿ, ಎಚ್‌.ಆಂಜನೇಯ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

'ಒಳಮೀಸಲಾತಿ ಜಾರಿ ವಿಚಾರದ ಪ್ರಸ್ತಾಪವು ಕೇಂದ್ರ ಸರ್ಕಾರದ ಎದುರಿಗಿಲ್ಲ ಎಂದು ಹಿಂದೊಮ್ಮೆ ನಾನೇ ಹೇಳಿದ್ದೆ. ಸಮಾಜವು ಸಂಕಷ್ಟದಲ್ಲಿದ್ದರೂ ಒಳಮೀಸಲಾತಿ ಸೌಲಭ್ಯ ದೊರೆಯುತ್ತಿಲ್ಲ ಎಂಬ ನೋವಿನ ಕಾರಣಕ್ಕೆ ಆ ರೀತಿ ಹೇಳಿಕೆ ನೀಡಿದ್ದೆ' ಎಂದು ಸ್ಪಷ್ಟನೆ ನೀಡಿದರು.

'ಪಂಜಾಬ್ ಹಾಗೂ ಹರಿಯಾಣ ಹೊರತುಪಡಿಸಿ ಬೇರೆ ಎಲ್ಲ ರಾಜ್ಯಗಳಲ್ಲಿ ಮಾದಿಗ ಸಮುದಾಯದವರ ಸ್ಥಿತಿಗತಿ ಉತ್ತಮವಾಗಿಲ್ಲ. ಪೂರ್ವಜರ ವೃತ್ತಿಯನ್ನೇ ಅವಲಂಬಿಸಬೇಕಾಗಿದೆ. ಕೃಷಿಗೆ ಜಮೀನು ಇಲ್ಲ' ಎಂದು ಹೇಳಿದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಎಚ್.ಆಂಜನೇಯ ಮಾತನಾಡಿ, 'ಒಳಮೀಸಲಾತಿ ವಿಚಾರವಾಗಿ ನ್ಯಾಯಾಲಯದಿಂದ ಕೆಲವೇ ದಿನಗಳಲ್ಲಿ ತೀರ್ಪು ಬರಲಿದೆ. ಸಮುದಾಯದ ನಿರೀಕ್ಷೆಗೆ ವಿರುದ್ಧವಾದ ತೀರ್ಪು ಬಂದರೆ, ಮತ್ತೆ ಸಂಘಟಿತರಾಗಿ ಹೋರಾಟ ಮಾಡಬೇಕಿದೆ. ಪರವಾಗಿ ತೀರ್ಪು ಬಂದರೆ, ಜಾರಿಗೆ ಕೇಂದ್ರದ ಮೇಲೆ ಒತ್ತಡ ಹೇರಬೇಕಿದೆ. ಈ ನಡುವೆ ಯಾವುದೇ ಅಡ್ಡಿ–ಆತಂಕಗಳು ಎದುರಾದರೂ ಸಂಘಟಿತವಾಗಿ ಹೋರಾಟ ಮಾಡಬೇಕಿದೆ' ಎಂದು ಕರೆ ನೀಡಿದರು.

'ಮಾದಿಗ ಸಮುದಾಯದಲ್ಲಿ ಒಗ್ಗಟ್ಟು ಇಲ್ಲ. ಇದನ್ನೇ ಲಾಭ ಮಾಡಿಕೊಂಡ ರಾಜಕಾರಣಿಗಳು, ಸಮುದಾಯವನ್ನು ಕೇವಲವಾಗಿ ಕಾಣುತ್ತಿದ್ದಾರೆ. ರಾಜಕೀಯ ಶಕ್ತಿ ಲಭಿಸಿದರೆ ಸಮಾಜಕ್ಕೆ ಅನುಕೂಲವಾಗಲಿದೆ' ಎಂದು ಪ್ರತಿಪಾದಿಸಿದರು.

ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಮಾತನಾಡಿ, 'ಲಿಂಗಾಯತ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ. ಆದರೆ, ನೈಜವಾಗಿ ಅನ್ಯಾಯಕ್ಕೆ ಒಳಗಾದ ಮಾದಿಗ ಸಮುದಾಯದ ಪರವಾಗಿ ಯಾರೂ ಪ್ರಶ್ನೆ ಮಾಡುತ್ತಿಲ್ಲ' ಎಂದು ಹೇಳಿದರು.

'ಅನೇಕ ಜಾತಿಗಳಿಗೆ ಇತಿಹಾಸ ಇರುವುದಿಲ್ಲ. ಮಾದಿಗ ಸಮುದಾಯಕ್ಕೆ ಇತಿಹಾಸ, ಚರಿತ್ರೆಯಿದೆ. ಆದರೆ, ಸಮಾಜದ ಜನರು ಮಾಡುತ್ತಿರುವ ಕೆಲಸಕ್ಕೆ ಗೌರವ ಸಿಗುತ್ತಿಲ್ಲ. ದಕ್ಷಿಣ ಹಾಗೂ ಉತ್ತರ ಭಾರತದಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯುವ ಸಮುದಾಯದಲ್ಲಿ ನಾವೆಲ್ಲರೂ ಒಂದೇ ಎಂಬ ಭಾವನೆ ಇನ್ನೂ ಮೂಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸದಸ್ಯ ಡಿ.ತಿಮ್ಮಯ್ಯ, ಸರ್ವೋದಯ ವಿದ್ಯಾಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ವಿ. ನಾರಾಯಣಸ್ವಾಮಿ, ಎನ್.ಸುಶೀಲಾ ಹಾಜರಿದ್ದರು.

‘ಹೆದ್ದಾರಿ ವಿಸ್ತರಣೆಗೆ ₹400 ಕೋಟಿ’

ಪ್ರಜಾವಾಣಿ ವಾರ್ತೆ

ನಿತಿನ್ ಗಡ್ಕರಿ

ನವದೆಹಲಿ: ಮೂಡಿಗೆರೆಯಿಂದ ಮುಗುಟಹಳ್ಳಿ ವರೆಗಿನ ರಾಷ್ಟ್ರೀಯ ಹೆದ್ದಾರಿ–173 ವಿಸ್ತರಣೆಗೆ ₹400.69 ಕೋಟಿ ಮಂಜೂರು ಮಾಡಲಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

26 ಕಿ.ಮೀ.ಯ ಈ ಹೆದ್ದಾರಿಯನ್ನು ಎರಡು ಪಥದ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗುತ್ತದೆ. ಈ ಹೆದ್ದಾರಿಯು ಚಿಕ್ಕಮಗಳೂರು, ಕಡೂರು ಮತ್ತು ಹೊಳಲ್ಕೆರೆ ಸೇರಿದಂತೆ ಹಲವಾರು ಹೆದ್ದಾರಿಗಳನ್ನು ಸಂಪರ್ಕಿಸುವ ಪ್ರಮುಖ ರಸ್ತೆಯಾಗಿದೆ ಎಂದು ಸಚಿವರು ಹೇಳಿದ್ದಾರೆ.

ಮಧ್ಯಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ಜಿತು ಪತ್ವಾರಿ

‘ಕಮಲ್ ನಾಥ್ ಪಕ್ಷ ತ್ಯಜಿಸಲ್ಲ’

ಭೋಪಾಲ್ (ಪಿಟಿಐ): ಪಕ್ಷ ತ್ಯಜಿಸುವುದಿಲ್ಲ ಎಂದು ಕಾಂಗ್ರೆಸ್ ಹಿರಿಯ ನಾಯಕ ಕಮಲ್ ನಾಥ್ ಅವರೇ ತಿಳಿಸಿದ್ದಾರೆ ಎಂದು ಮಧ್ಯಪ್ರದೇಶ ಕಾಂಗ್ರೆಸ್ ಮುಖ್ಯಸ್ಥ ಜಿತು ಪತ್ವಾರಿ ಭಾನುವಾರ ಹೇಳಿದರು. ಈ ಮೂಲಕ ಕಮಲ್ ನಾಥ್ ಬಿಜೆಪಿ ಸೇರ್ಪಡೆಯಾಗಲಿದ್ದಾರೆ ಎಂಬ ವದಂತಿಯನ್ನು ಅಲ್ಲಗಳೆದರು.

'ಮಾಧ್ಯಮವನ್ನು ಬಿಜೆಪಿ ದುರುಪಯೋಗ ಮಾಡಿಕೊಳ್ಳುತ್ತಿದೆ ಮತ್ತು ವ್ಯಕ್ತಿಯ ನಿಷ್ಠೆಯನ್ನು ಪ್ರಶ್ನಿಸುತ್ತಿದೆ. ನಾನು ಕಮಲ್ ನಾಥ್ ಅವರೊಂದಿಗೆ ಮಾತನಾಡಿದೆ. ಈ ವೇಳೆ ಅವರು, ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವರದಿಗಳು ಪಿತೂರಿಯ ಭಾಗ. ತಾವು ಕಾಂಗ್ರೆಸ್ಸಿಗ ಮತ್ತು ಕಾಂಗ್ರೆಸ್ ಪಕ್ಷದ ನಾಯಕನಾಗಿಯೇ ಮುಂದುವರಿಯುವುದಾಗಿ ಹೇಳಿದರು. ಗಾಂಧಿ ಕುಟುಂಬದೊಂದಿಗಿನ ತಮ್ಮ ಸಂಬಂಧ ಅತ್ಯಂತ ಗಾಢವಾದುದು. ಪಕ್ಷದ ಸಿದ್ಧಾಂತದೊಂದಿಗೆ ಜೀವಿಸಿರುವುದಾಗಿಯೂ ತಿಳಿಸಿ, ಜೀವನ ಪರ್ಯಂತ ಇದೇ ರೀತಿ ಬದುಕುವುದಾಗಿ ಹೇಳಿದ್ದಾರೆ’ ಎಂದರು.

ಸ್ವತಃ ಕಮಲ್ ನಾಥ್ ಅವರೇ ಏಕೆ ಈ ಬಗ್ಗೆ ಸ್ಪಷ್ಟನೆ ನೀಡುತ್ತಿಲ್ಲ ಎಂಬ ಸುದ್ದಿಗಾರರ ಪ್ರಶ್ನೆಗೆ, ‘ಸರಿಯಾದ ಸಮಯದಲ್ಲಿ ಅವರು ಮಾತನಾಡಲಿದ್ದಾರೆ. ಅವರ ಪರವಾಗಿ ನಾನು ಇಷ್ಟು ಹೇಳಿದ್ದೇನೆ’ ಎಂದು ತಿಳಿಸಿದರು.

ದೆಹಲಿಯತ್ತ ತೆರಳಿದ ಕಮಲ್ ನಾಥ್ ಬಣದ ಕೆಲವು ಶಾಸಕರು: ಕಾಂಗ್ರೆಸ್‌ನ ಹಿರಿಯ ನಾಯಕ ಕಮಲ್‌ನಾಥ್ ಮತ್ತು ಅವರ ಮಗ ಸಂಸದ ನಕುಲ್ ನಾಥ್ ಅವರು ಬಿಜೆಪಿ ಸೇರುವ ಬಗ್ಗೆ ಚರ್ಚೆ ನಡೆಯುತ್ತಿರುವ ಮಧ್ಯೆಯೇ ಕಮಲ್‌ನಾಥ್ ಬಣದ ಆರು ಶಾಸಕರು ದೆಹಲಿಗೆ ತೆರಳಿದ್ದಾರೆ.

ದೆಹಲಿಗೆ ತೆರಳಿರುವ ಶಾಸಕರು ಸಂಪರ್ಕಕ್ಕೆ ಸಿಗುತ್ತಿಲ್ಲ. ಕಾಂಗ್ರೆಸ್ ಆಂತರಿಕ ಮೂಲಗಳ ಪ್ರಕಾರ, ನಾಥ್‌ಗೆ ನಿಷ್ಠರಾಗಿರುವ ಮಾಜಿ ಸಚಿವ ಲಖನ್ ಘನ್‌ಗೋರಿಯಾ ಕೂಡ ದೆಹಲಿಗೆ ತೆರಳಿದ್ದಾರೆ.

‘ನಾಥ್ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಕೈಬಿಟ್ಟಿರುವುದಕ್ಕೆ ನಮಗೆ ನೋವಾಗಿದೆ. ಅವರು ಯಾವುದೇ ನಿರ್ಧಾರ ಕೈಗೊಂಡರೂ ನಾವು ಬದ್ಧರಾಗಿರುತ್ತೇವೆ’ ಎಂದು ಮಾಜಿ ಸಚಿವ ದೀಪಕ್ ಸಕ್ಸೇನ ತಿಳಿಸಿದ್ದಾರೆ.

ನಾಥ್ ಅವರ ಆಪ್ತ ಮಾಜಿ ಸಚಿವ ವಿಕ್ರಮ್ ವರ್ಮ ಅವರು ‘ಎಕ್ಸ್’ನಲ್ಲಿ ‘ಜೈ ಶ್ರೀರಾಮ್’ ಎಂದು ಬರೆದುಕೊಂಡಿದ್ದಾರೆ.

ಪಕ್ಷಾಂತರ ನಿಷೇಧ ಕಾಯ್ದೆಗೆ ಗುರಿಯಾಗುವುದರಿಂದ ತಪ್ಪಿಸಿಕೊಳ್ಳಲು ಕಮಲ್‌ನಾಥ್ ಬಣವು 23 ಶಾಸಕರ ಬೆಂಬಲವನ್ನು ಪಡೆಯಲು ಪ್ರಯತ್ನಿಸುತ್ತಿದೆ ಎಂದು ಕಾಂಗ್ರೆಸ್‌ನ ಕೆಲವರು ಆರೋಪಿಸಿದ್ದಾರೆ.

ಸಿದ್ದರಾಮಯ್ಯ ಅರ್ಜಿ ವಿಚಾರಣೆ ಇಂದು

ಸಿದ್ದರಾಮಯ್ಯ

ನವದೆಹಲಿ (ಪಿಟಿಐ): ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದ್ದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಸೋಮವಾರ ನಡೆಸಲಿದೆ.

ಪ್ರತಿಭಟನಾ ಮೆರವಣಿಗೆಗೆ ಸಂಬಂಧಿಸಿದಂತೆ ತಮ್ಮ ಮತ್ತು ಇತರರ ವಿರುದ್ಧ 2022ರಲ್ಲಿ ದಾಖಲಾಗಿದ್ದ ಎಫ್‌ಐಆರ್ ರದ್ದುಗೊಳಿಸುವಂತೆ ಮಾಡಲಾಗಿದ್ದ ಮನವಿಯನ್ನು ಹೈಕೋರ್ಟ್ ಇತ್ತೀಚೆಗೆ ವಜಾಗೊಳಿಸಿತ್ತು. ಈ ತೀರ್ಪಿನ ವಿರುದ್ಧ ಸಿದ್ದರಾಮಯ್ಯ ಅವರು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ.

ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್, ಪ್ರಶಾಂತ್ ಕುಮಾರ್ ಮಿಶ್ರಾ ಅವರನ್ನು ಒಳಗೊಂಡ ಪೀಠವು ಈ ಕುರಿತು ವಿಚಾರಣೆ ನಡೆಸುವ ಸಾಧ್ಯತೆ ಇದೆ.

ಸಿದ್ದರಾಮಯ್ಯ, ಸಚಿವರಾದ ಎಂ.ಬಿ.ಪಾಟೀಲ್, ರಾಮಲಿಂಗಾ ರೆಡ್ಡಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯೂ ಆದ ಕರ್ನಾಟಕ ಉಸ್ತುವಾರಿ ರಣದೀಪ್ ಸುರ್ಜೆವಾಲಾ ಅವರಿಗೆ ತಲಾ ₹10,000 ದಂಡ ವಿಧಿಸಿದ್ದ ಹೈಕೋರ್ಟ್, ಎಲ್ಲರೂ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಬೇಕು ಎಂದು ಫೆಬ್ರುವರಿ 6ರಂದು ತೀರ್ಪು ನೀಡಿತ್ತು.

ಸಿದ್ದರಾಮಯ್ಯ ಅವರ ವಕೀಲ ರಾಜೇಶ್ ಗುಲಾಬ್ ಇನಾಮದಾರ್ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಅರ್ಜಿ ಸಲ್ಲಿಸಿದ್ದಾರೆ.

ಈ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ನಡೆಸಲಾಗಿದ್ದ ಪ್ರತಿಭಟನಾ ಮೆರವಣಿಗೆ ವೇಳೆ ಕಾಂಗ್ರೆಸ್‌ನ ನಾಯಕರ ವಿರುದ್ಧ ಪ್ರಕರಣ ದಾಖಲಾಗಿತ್ತು. ಪೊಲೀಸರ ಪ್ರಕಾರ, ಈ ಪ್ರತಿಭಟನೆಯಿಂದ ಸಂಚಾರ ದಟ್ಟಣೆಯಾಗಿ, ಪ್ರಯಾಣಿಕರಿಗೆ ಅನನುಕೂಲವಾಗಿತ್ತು.

‘ಪ್ರತಿಭಟನಾ ಮೆರವಣಿಗೆ ವೇಳೆ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಯಾರಿಗೂ ಇದರಿಂದ ತೊಂದರೆ ಆಗಿಲ್ಲ. ಈ ಕ್ರಿಮಿನಲ್ ಪ್ರಕರಣದ ನ್ಯಾಯಿಕ ಪ್ರಕ್ರಿಯೆ ಮುಂದುವರಿಸುವುದರಿಂದ ಕಾನೂನು ದುರುಪಯೋಗ ಆಗುತ್ತದೆ’ ಎಂದು ಸಿದ್ದರಾಮಯ್ಯ ಅವರು ಅರ್ಜಿಯಲ್ಲಿ ತಿಳಿಸಿದ್ದಾರೆ.

ಆಂಧ್ರಪ್ರದೇಶದಲ್ಲಿ ಮೈತ್ರಿಗೆ ಚಂದ್ರಬಾಬು ನಾಯ್ಡು, ಜಗನ್ ಮೋಹನ್ ರೆಡ್ಡಿ ಉತ್ಸಾಹ

ಬಿಜೆಪಿ ಜತೆ ಸೇರಲು ಟಿಡಿಪಿ ಆಸಕ್ತಿ?

ಅಮರಾವತಿ (ಪಿಟಿಐ): ಲೋಕಸಭಾ ಚುನಾವಣೆಯ ಜೊತೆಯಲ್ಲಿಯೇ ಆಂಧ್ರಪ್ರದೇಶದಲ್ಲಿ ವಿಧಾನಸಭಾ ಚುನಾವಣೆಯೂ ನಡೆಯಲಿದ್ದು, ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್ ಪಕ್ಷ (ವೈಎಸ್‌ಆರ್‌ಸಿಪಿ) ಮತ್ತು ಅದರ ವಿರೋಧಿ ಟಿಡಿಪಿ, ಬಿಜೆಪಿ ಜೊತೆ ಚುನಾವಣಾ ಮೈತ್ರಿ ಸಾಧಿಸುವ ಹವಣಿಕೆಯಲ್ಲಿವೆ. ಆದರೆ, ಇದುವರೆಗೆ ಯಾವುದೇ ತೀರ್ಮಾನ ಪ್ರಕಟವಾಗಿಲ್ಲ.

ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಫೆಬ್ರುವರಿ 8ರಂದು ನವದೆಹಲಿಯಲ್ಲಿ ತಡರಾತ್ರಿ ಭೇಟಿಮಾಡಿ ಮಾತುಕತೆ ನಡೆಸಿದ್ದಾರೆ. ಅವರಿಬ್ಬರೂ ರಾಜಕೀಯ ಹೊಂದಾಣಿಕೆ ಬಗ್ಗೆ ಚರ್ಚಿಸಿದ್ದಾರೆ ಎನ್ನಲಾಗಿದೆ. ‘ಎರಡೂ ಪಕ್ಷಗಳು ಮೈತ್ರಿಯ ಬಗ್ಗೆ ಇನ್ನು ಕೆಲವೇ ದಿನಗಳಲ್ಲಿ ಘೋಷಿಸಬಹುದು’ ಎಂದು ಮೂಲವೊಂದು ಹೇಳಿದೆ.

ಟಿಡಿಪಿ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಫೆಬ್ರುವರಿ 10ರಂದು ಪ್ರಕಟಿಸಬೇಕಿತ್ತು. ಆದರೆ ಮೈತ್ರಿ ಮಾತುಕತೆಯ ಕಾರಣದಿಂದಾಗಿ ಅದು ವಿಳಂಬವಾಗಿದೆ. ಈಗ ಟಿಡಿಪಿ ಮತ್ತು ಬಿಜೆಪಿ ನಡುವೆ ತೆರೆಮರೆಯ ಮಾತುಕತೆಗಳು ನಡೆಯುತ್ತಿವೆ.

‘ನಾಯ್ಡು ಅವರು ಬಿಜೆಪಿ ಜೊತೆ ಸಾಗಲಿದ್ದಾರೆ ಎಂಬುದು ಸ್ಪಷ್ಟ’ ಎಂದು ರಾಜಕೀಯ ವಿಶ್ಲೇಷಕ ತೆಲಕಪಲ್ಲಿ ರವಿ ಹೇಳಿದರು. ‘ಬಿಜೆಪಿ ಜೊತೆ ನಮಗೆ ಹೇಳಿಕೊಳ್ಳುವಂತಹ ತಕರಾರು, ಭಿನ್ನತೆ ಇಲ್ಲ’ ಎಂದು ಟಿಡಿಪಿ ವಕ್ತಾರೆ ಜ್ಯೋತ್ಸ್ನಾ ತಿರುನಗರಿ ಹೇಳಿದರು. ಪವನ್ ಕಲ್ಯಾಣ್ ನೇತೃತ್ವದ ಜನಸೇನಾ ಜೊತೆ ಟಿಡಿಪಿ ಈಗಾಗಲೇ ಮೈತ್ರಿ ಮಾಡಿಕೊಂಡಿದೆ.

ನಾಯ್ಡು ಅವರ ಭೇಟಿ ಕೊನೆಗೊಂಡ ಕೆಲವೇ ಗಂಟೆಗಳ ನಂತರದಲ್ಲಿ, ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ ರೆಡ್ಡಿ ಅವರು ಪ್ರಧಾನಿ ನರೇಂದ್ರ ಮೋದಿ ಭೇಟಿಗೆ ದೆಹಲಿಗೆ ಧಾವಿಸಿದರು. ಇದು ರಾಜಕೀಯ ಹೊಂದಾಣಿಕೆ ಕುರಿತು ಇನ್ನೊಂದಷ್ಟು ಊಹೆಗಳಿಗೆ ಕಾರಣವಾಯಿತು.

ಬಿಜೆಪಿಗೆ ಆಂಧ್ರಪ್ರದೇಶದಲ್ಲಿ ರಾಜಕೀಯ ನೆಲೆ ಇಲ್ಲ ಎಂಬುದು ಟಿಡಿಪಿಗೆ ಗೊತ್ತಿದೆ. ಆದರೆ ವೈಎಸ್‌ಆರ್‌ಸಿಪಿ ನೇತೃತ್ವದ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ಟಿಡಿಪಿಯು ಬಿಜೆಪಿಯ ಮೊರೆ ಹೋಗುತ್ತಿದೆ. ರಾಜಕೀಯವಾಗಿ ಜಾಣನಾಗಿರುವ ಬಿಜೆಪಿಯು ಟಿಡಿಪಿ ಜೊತೆಗೂ ವೈಎಸ್‌ಆರ್‌ಸಿಪಿ ಜೊತೆಗೂ ಸ್ನೇಹ ಕಾಯ್ದುಕೊಳ್ಳುತ್ತಿದೆ. ಚುನಾವಣೆ ಹೊತ್ತಿನಲ್ಲಿ ಬಿಜೆಪಿಯು ಟಿಡಿಪಿ ಜೊತೆ ಹೊಂದಾಣಿಕೆ ಮಾಡಿಕೊಂಡರೂ ಅದು ಆಂಧ್ರಪ್ರದೇಶ ಮುಖ್ಯಮಂತ್ರಿಯ ವೈರ ಕಟ್ಟಿಕೊಳ್ಳುವುದಿಲ್ಲ ಎಂದು ನಾಗಾರ್ಜುನ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕ ವಿ. ಆಂಜಿರೆಡ್ಡಿ ಹೇಳಿದರು.

ಕೇಂದ್ರ ಸರ್ಕಾರದ ಬಲವನ್ನು ಬಳಸಿಕೊಂಡು ಜಗನ್ ಅವರನ್ನು ರಾಜಕೀಯವಾಗಿ ಹಣಿಯಲು, ಚುನಾವಣೆ ಹೊತ್ತಿನಲ್ಲಿ ಹಣದ ಹರಿವು, ತೋಳ್ಬಲ ಮತ್ತು ಅಧಿಕಾರಿಗಳ ಬಲವನ್ನು ನಿಯಂತ್ರಿಸಲು ಟಿಡಿಪಿ ಹೆಚ್ಚಿನ ಆಸಕ್ತಿ ತೋರುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು.

‘ಕಾಂಗ್ರೆಸ್ ಯಾತ್ರೆಯಿಂದ ಮತಗಳಿಕೆಯಾಗಲ್ಲ’: ಶಿಲ್ಲಾಂಗ್ (ಪಿಟಿಐ): ಈಶಾನ್ಯ ರಾಜ್ಯಗಳಲ್ಲಿ ನಡೆದಿರುವ ಭಾರತ್ ಜೋಡೋ ನ್ಯಾಯಯಾತ್ರೆಯು ಸುದ್ದಿಯ ಕೇಂದ್ರಬಿಂದುವಾಗಿದೆಯೇ ಹೊರತು ಮತಗಳನ್ನು ಸೆಳೆಯಲಾಗದು ಎಂದು ಮೇಘಾಲಯ ಮುಖ್ಯಮಂತ್ರಿ ಕೋನ್ರಡ್ ಸಂಗ್ಮಾ ಟೀಕಿಸಿದ್ದಾರೆ.

ಪಿಟಿಐ ಸಂದರ್ಶನದಲ್ಲಿ ಮಾತನಾಡಿದ ಅವರು, ‘ಯಾತ್ರೆ ನಡೆಸಲು ಕಾಂಗ್ರೆಸ್ ವ್ಯಯಿಸಿದ ಶಕ್ತಿ ಮತ್ತು ಸಂಪನ್ಮೂಲಗಳು ಚುನಾವಣೆಯಲ್ಲಿ ಮತ ಮತ್ತು ಸ್ಥಾನಗಳಾಗಿ ಬದಲಾಗುವುದಿಲ್ಲ. ಅವರಿಗೆ ಸರಿಯಾದ ಪ್ರತಿಫಲ ಸಿಗುವುದಿಲ್ಲ’ ಎಂದರು.

ನಾಯ್ಡು ಕಟೌಟ್‌ಗೆ ರಕ್ತಾಭಿಷೇಕ

ವಿಜಯವಾಡ (ಪಿಟಿಐ): ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರ ಕಟೌಟ್‌ಗೆ ರಕ್ತದಿಂದ ಅಭಿಷೇಕ ಮಾಡಿದ ಪಕ್ಷದ ಮುಖಂಡ ಬಿ. ವೆಂಕಟೇಶ್ವರ ರಾವ್, ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ತಾವು ಪಕ್ಷದ ಟಿಕೆಟ್ ಆಕಾಂಕ್ಷಿ ಎಂದು ಹೇಳಿದರು.

ತಮ್ಮ ಒಂದು ಯೂನಿಟ್ ರಕ್ತವನ್ನು ಸಾರ್ವಜನಿಕವಾಗಿ ಸಂಗ್ರಹಿಸಿದ ರಾವ್ ಅವರು, ಅದನ್ನು ನಾಯ್ಡು ಅವರ ಕಟೌಟ್ ಮೇಲೆ ಅಭಿಷೇಕ ಮಾಡಿದರು. ನಂತರ ಅದೇ ರಕ್ತದಿಂದ ತಮ್ಮ ಮನೆಯ ಗೋಡೆಯ ಮೇಲೆ ‘ಸಿಬಿಎನ್ (ಚಂದ್ರಬಾಬು ನಾಯ್ಡು) ಜಿಂದಾಬಾದ್, ನನ್ನ ಜೀವ’ ಎಂದು ಬರೆದರು.

‘ನಾಯ್ಡು ಅವರ ಬಗ್ಗೆ ನನ್ನಲ್ಲಿರುವ ಅತೀವ ಭಕ್ತಿಯ ಪ್ರದರ್ಶನ ಇದು... ನಾಯ್ಡು ನನ್ನ ದೇವರು’ ಎಂದು ರಾವ್ ಅವರು ಸುದ್ದಿಗಾರರ ಬಳಿ ಹೇಳಿದರು. ವಿಜಯವಾಡ ಪಶ್ಚಿಮ ವಿಧಾನಸಭಾ ಕ್ಷೇತ್ರ ಅಥವಾ ಅಂಕಪಲ್ಲಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಪಕ್ಷದ ಟಿಕೆಟ್ ಬಯಸುತ್ತಿರುವುದಾಗಿ ಹೇಳಿದರು.

ಆದರೆ ಪಕ್ಷದ ವರಿಷ್ಠರು ಕೈಗೊಳ್ಳುವ ಯಾವುದೇ ತೀರ್ಮಾನಕ್ಕೆ ತಾವು ಬದ್ಧರಾಗಿ ಇರುವುದಾಗಿ ಸ್ಪಷ್ಟಪಡಿಸಿದರು. ಟಿಡಿಪಿಯು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಿಗೆ ಇದೇ 20ರ ಸುಮಾರಿಗೆ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವ ನಿರೀಕ್ಷೆ ಇದೆ.

ಬಿಜೆಪಿ ಜತೆಗಿದ್ದಿದ್ದರೆ ಸೊರೇನ್ ಜೈಲು ಸೇರುತ್ತಿರಲಿಲ್ಲ: ಕೇಜ್ರಿವಾಲ್



ಅರವಿಂದ ಕೇಜ್ರಿವಾಲ್

ನವದೆಹಲಿ (ಪಿಟಿಐ): ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಬಿಜೆಪಿ ಜತೆ ಕೈಜೋಡಿಸಿದ್ದರೆ, ಅವರು ಇಂದು ಜೈಲಿನಲ್ಲಿ ಇರುತ್ತಿರಲಿಲ್ಲ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾನುವಾರ ತಿಳಿಸಿದ್ದಾರೆ.

ಸೊರೇನ್ ಅವರ ಪತ್ನಿ ಕಲ್ಪನಾ ಮುರ್ಮು ಸೊರೇನ್ ಅವರೊಂದಿಗೆ ಕೇಜ್ರಿವಾಲ್ ದೂರವಾಣಿ ಸಂಭಾಷಣೆ ನಡೆಸಿದರು. ಬಳಿಕ ‘ಎಕ್ಸ್’ನಲ್ಲಿ ಅವರು ಈ ಕುರಿತು ಪೋಸ್ಟ್ ಮಾಡಿದ್ದಾರೆ.

‘ಹೇಮಂತ್ ಸೊರೇನ್ ಅವರ ಪರ ನಾವು ನಿಂತಿದ್ದೇವೆ. ಬಿಜೆಪಿಯ ದೌರ್ಜನ್ಯವನ್ನು ಅವರು ಎದುರಿಸಿದ ಬಗೆಯನ್ನು ಇಡೀ ದೇಶವೇ ನೋಡಿದೆ. ಅಲ್ಲದೆ ಅವರ ಶಕ್ತಿ ಮತ್ತು ಧೈರ್ಯವನ್ನೂ ಶ್ಲಾಘಿಸಿದೆ. ಒಂದು ವೇಳೆ ಅವರು ಬಿಜೆಪಿ ಜತೆಗೆ ಹೋಗಿದ್ದರೆ, ಇಂದು ಜೈಲು ಪಾಲಾಗುತ್ತಿರಲಿಲ್ಲ. ಆದರೆ ಅವರು ಸತ್ಯದ ಮಾರ್ಗ ಬಿಡಲಿಲ್ಲ. ಅವರಿಗೆ ನಮಸ್ಕಾರ’ ಎಂದು ದೆಹಲಿ ಸಿ.ಎಂ ಹೇಳಿದ್ದಾರೆ.

‘ಜಾತಿಗಣತಿ: ಚಂಪೈ ಸೊರೇನ್ ಸಮ್ಮತಿ’

ರಾಂಚಿ/ನವದೆಹಲಿ (ಪಿಟಿಐ): ನೆರೆಯ ಬಿಹಾರದ ರೀತಿ ರಾಜ್ಯದಲ್ಲೂ ಜಾತಿಗಣತಿ ನಡೆಸಲು ಜಾರ್ಖಂಡ್ ಮುಖ್ಯಮಂತ್ರಿ ಸೂಚಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ವಿನಯ್ ಕುಮಾರ್ ಚೌಬೆ, ‘ಜಾರ್ಖಂಡ್‌ನಲ್ಲಿ ಜಾತಿಗಣತಿ ನಡೆಸುವ ಕುರಿತ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಸಿಬ್ಬಂದಿ ಇಲಾಖೆ ಸಿದ್ಧಪಡಿಸಲಿದೆ. ಆ ಬಳಿಕ ಸಂಪುಟದ ಅನುಮೋದನೆ ಪಡೆಯಲಾಗುವುದು. ಬಿಹಾರದ ರೀತಿಯಲ್ಲೇ ರಾಜ್ಯದಲ್ಲೂ ಜಾತಿಗಣತಿ ನಡೆಸಲಾಗುವುದು. ಈ ಕಾರ್ಯಕ್ಕಾಗಿ ಗ್ರಾಮೀಣ ಮತ್ತು ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳನ್ನು ಪರಿಗಣಿಸಲಾಗಿತ್ತು. ಅಂತಿಮವಾಗಿ ಗಣತಿ ನಡೆಸಲು ಸಿಬ್ಬಂದಿ ಇಲಾಖೆಗೆ ವಹಿಸಲಾಗಿದೆ’ ಎಂದರು.

ಎಲ್ಲವೂ ಅಂದುಕೊಂಡಂತೆ ಆದಲ್ಲಿ, ಲೋಕಸಭಾ ಚುನಾವಣೆ ಮುಗಿದ ಬಳಿಕ ಇದು ಕಾರ್ಯರೂಪಕ್ಕೆ ಬರಲಿದೆ ಎಂದು ಹೇಳಿದ್ದಾರೆ.

‘ಜಾರ್ಖಂಡ್ ಸರ್ಕಾರ ಸುಭದ್ರ’: ‘ರಾಜ್ಯದಲ್ಲಿ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ನೇತೃತ್ವದ ಸಮ್ಮಿಶ್ರ ಸರ್ಕಾರವು ‘ಸುಭದ್ರ’ವಾಗಿದ್ದು, ಸರ್ಕಾರಕ್ಕೆ ಯಾವುದೇ ಭೀತಿ ಇಲ್ಲ’ ಎಂದು ಮುಖ್ಯಮಂತ್ರಿ ಚಂಪೈ ಸೊರೇನ್ ಭಾನುವಾರ ಹೇಳಿದ್ದಾರೆ.

ಕಾಂಗ್ರೆಸ್‌ನ ನಾಲ್ವರು ಶಾಸಕರಿಗೆ ಸಚಿವ ಸ್ಥಾನ ನೀಡಿದ್ದಕ್ಕೆ ಪಕ್ಷದ ಕೆಲವು ಶಾಸಕರು ಅಸಮಾಧಾನಗೊಂಡಿದ್ದಾರೆ ಎಂಬ ವರದಿಗಳ ಬೆನ್ನಲ್ಲೇ, ಮುಖ್ಯಮಂತ್ರಿ ಅವರ ಈ ಹೇಳಿಕೆ ಹೊರಬಿದ್ದಿದೆ.

ಸಂದೇಶ್‌ಖಾಲಿ: ಸಚಿವರ ತಂಡ ಭೇಟಿ

ಕೋಲ್ಕತ್ತ (ಪಿಟಿಐ): ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಭೂಕಬಳಿಕೆ ಆರೋಪಗಳಿಗೆ ಸಂಬಂಧಿಸಿದಂತೆ ತೀವ್ರ ಪ್ರತಿಭಟನೆಗಳು ನಡೆದಿದ್ದ ಸಂದೇಶ್‌ಖಾಲಿಗೆ ಪಶ್ಚಿಮ ಬಂಗಾಳದ ಮೂವರು ಸಚಿವರು ಭಾನುವಾರ ಭೇಟಿ ನೀಡಿ, ಜನರೊಂದಿಗೆ ಮಾತುಕತೆ ನಡೆಸಿ, ಕುಂದುಕೊರತೆ ಆಲಿಸಿದರು.

ಆಡಳಿತಾರೂಢ ತೃಣಮೂಲ ಕಾಂಗ್ರೆಸ್‌ಗೆ ಸೇರಿದ ಕೆಲವರಿಂದ ತಮ್ಮ ಭೂ ಕಬಳಿಕೆ ಆಗಿದೆ ಎಂದು ಗ್ರಾಮಸ್ಥರಿಂದ ದೂರುಗಳು ಬಂದಿದ್ದವು. ಈ ಕಾರಣದಿಂದ ಕಂದಾಯ ಇಲಾಖೆಯು ಶಿಬಿರ ತೆರೆದು, ಜನರಿಂದ ಅಹವಾಲು ಸ್ವೀಕರಿಸಿತು.

ಮಮತಾ ಬ್ಯಾನರ್ಜಿ ಸಂಪುಟದ ಸಚಿವರಾದ ಪಾರ್ಥ ಭೌಮಿಕ್, ಸುಜಿತ್ ಬೋಸ್ ಮತ್ತು ಬಿರ್ಬಾಹಾ ಹಾಂಸ್ದಾ ಅವರ ನಿಯೋಗವು ಇಲ್ಲಿನ ಕಾಳಿನಗರದಲ್ಲಿ ಜನರೊಂದಿಗೆ ಮಾತುಕತೆ ನಡೆಸಿತು. ಈ ವೇಳೆ ಸಂದೇಶ್‌ಖಾಲಿಯ ಟಿಎಂಸಿ ಶಾಸಕ ಸುಕುಮಾರ್ ಮಹತಾ ಅವರೂ ಇದ್ದರು.

‘ಇಲ್ಲಿನ ಜನರು ಮತ್ತು ಪಕ್ಷದ ಸ್ಥಳೀಯ ನಾಯಕರೊಂದಿಗೆ ಮಾತುಕತೆ ನಡೆಸಲು ನಾವು ಇಲ್ಲಿಗೆ ಬಂದಿದ್ದೇವೆ’ ಎಂದು ಸಚಿವ ಬೋಸ್ ತಿಳಿಸಿದರು.

ಸಂದೇಶ್‌ಖಾಲಿಗೆ ಭೇಟಿ ನೀಡಲು ಬಂದಿದ್ದ ಕೇಂದ್ರ ಸಚಿವರನ್ನು ಒಳಗೊಂಡಿದ್ದ ಬಿಜೆಪಿ ನಿಯೋಗಕ್ಕೆ ಸ್ಥಳೀಯ ಆಡಳಿತ ತಡೆಯೊಡ್ಡಿತ್ತು.

ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಭೂ ಕಬಳಿಕೆ ಆರೋಪಗಳು ವ್ಯಕ್ತವಾದ ಬಳಿಕ ಸಂದೇಶ್‌ಖಾಲಿಯ ಗ್ರಾಮಗಳಲ್ಲಿ ಪ್ರತಿಭಟನೆ ತೀವ್ರ ಸ್ವರೂಪ ಪಡೆದಿತ್ತು. ಇದಾದ ಬಳಿಕ ಇಲ್ಲಿನ 19 ಸ್ಥಳಗಳಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ.

ಅರ್ಜಿಯ ವಿಚಾರಣೆ ಇಂದು

ನವದೆಹಲಿ: ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣ ಕುರಿತು ಕೋರ್ಟ್ ಮೇಲುಸ್ತುವಾರಿಯಲ್ಲಿ ಸಿಬಿಐ ಅಥವಾ ವಿಶೇಷ ತನಿಖಾ ತಂಡದಿಂದ ರಾಜ್ಯದ ಹೊರಗೆ, ದೆಹಲಿಯಲ್ಲಿ ವಿಚಾರಣೆ ನಡೆಸಬೇಕು ಎಂದು ನಿರ್ದೇಶಿಸಲು ಕೋರಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಲಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಅಗಸ್ಟಿನ್ ಜಾರ್ಜ್ ಮಸಿಹ್ ಅವರಿರುವ ನ್ಯಾಯಪೀಠವು ಅರ್ಜಿಯ ವಿಚಾರಣೆ ನಡೆಸಲಿದೆ. ವಕೀಲ್ ಅಲಾಕ್ ಅಲೋಕ್ ಶ್ರೀವಾತ್ಸವ ಈ ಕುರಿತು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಮಣಿಪುರ ಪ್ರಕರಣಗಳ ತನಿಖೆ ಮೇಲುಸ್ತುವಾರಿಗೆ ರಚಿಸುರುವಂತೆ, ಹೈಕೋರ್ಟ್‌ನ ಮೂವರು ನಿವೃತ್ತ ನ್ಯಾಯಮೂರ್ತಿಗಳ ಸಮಿತಿ ರಚಿಸಬೇಕು ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಹೂ ಹಬ್ಬ... ನವದೆಹಲಿಯ ಚಾಣಕ್ಯಪುರಿಯ ಶಾಂತಿಪಥದಲ್ಲಿ ಆಯೋಜಿಸಿರುವ ‘ದೆಹಲಿ ಟುಲಿಪ್ ಉತ್ಸವ’ದಲ್ಲಿ ಭಾನುವಾರ ಫೋಟೊ ತೆಗೆಸಿಕೊಳ್ಳುವುದರಲ್ಲಿ ಪ್ರವಾಸಿಗರು ನಿರತರಾಗಿದ್ದರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಅನಾರೋಗ್ಯದಿಂದ ನೀಟ್ ಆಕಾಂಕ್ಷಿ ಸಾವು

ಕೋಟಾ (ಪಿಟಿಐ): ರಾಜಸ್ಥಾನದ ಕೋಟಾದಲ್ಲಿ ನೀಟ್‌ಗೆ ತಯಾರಿ ನಡೆಸುತ್ತಿದ್ದ ಉತ್ತರಪ್ರದೇಶದ ಆಲೀಗಢ ಜಿಲ್ಲೆಯ ನಿವಾಸಿ ಶಿವಂ ರಾಘವ (21) ಎಂಬುವವರು ಅನಾರೋಗ್ಯದಿಂದ ಮೃತಪಟ್ಟಿದ್ದಾರೆ.

ಅಧಿಕ ರಕ್ತದೊತ್ತಡ ಮತ್ತು ರಕ್ತದಲ್ಲಿ ಸಕ್ಕರೆಯ ಮಟ್ಟ ಹೆಚ್ಚಾಗಿದ್ದ ಕಾರಣ ಶಿವಂ ಅವರನ್ನು ಎರಡು ದಿವಸಗಳ ಹಿಂದೆ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದರು.

ಶಿವಂ ಅವರು ಕಳೆದ ಮೂರು ವರ್ಷಗಳಿಂದ ಕೋಟಾದಲ್ಲಿ ವಿದ್ಯಾರ್ಥಿನಿಲಯದಲ್ಲಿದ್ದುಕೊಂಡು, ನೀಟ್‌ಗೆ ತಯಾರಿ ನಡೆಸುತ್ತಿದ್ದರು ಎಂದರು.

ಕೋಟಾದಲ್ಲಿ ಕಳೆದ ನಾಲ್ಕು ದಿವಸಗಳಲ್ಲಿ ಅನಾರೋಗ್ಯದಿಂದ ಮೃತಪಟ್ಟಿರುವ ಎರಡನೇ ವಿದ್ಯಾರ್ಥಿ ಇವರಾಗಿದ್ದಾರೆ. ಜಾರ್ಖಂಡ್‌ನ ಜಮ್‌ಶೆಡ್‌ಪುರ ನಿವಾಸಿ ಪರ್‌ನೀತ್ ರಾಜ್ ರಾಯ್ ಎಂಬವರು ಅನಾರೋಗ್ಯದಿಂದ ಗುರುವಾರ ಮೃತಪಟ್ಟಿದ್ದರು.

ವಿಡಿಯೊ ವೈರಲ್: 40 ಸಂಚಾರ ಪೊಲೀಸರ ವರ್ಗಾವಣೆ

ಠಾಣೆ (ಪಿಟಿಐ): ಮುಂಬೈ ನಗರದಲ್ಲಿ ಸಂಚಾರ ಪೊಲೀಸರು ವಾಹನ ಸವಾರರಿಂದ ಲಂಚ ಸ್ವೀಕರಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬೆನ್ನಲ್ಲೇ 40 ಸಂಚಾರ ಪೊಲೀಸರನ್ನು ವರ್ಗಾವಣೆ ಮಾಡಲಾಗಿದೆ’ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

‘ಮುಂಬ್ರಾ ವಿಭಾಗದ ಹಿರಿಯ ಇನ್‌ಸ್ಪೆಕ್ಟರ್ ಸುರೇಶ್ ಖೇಡೆಕರ್ ಮತ್ತು ಇಬ್ಬರು ಎಎಸ್‌ಐಗಳು ಸೇರಿದಂತೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಒಟ್ಟು 40 ಪೊಲೀಸರನ್ನು ಕಂಟ್ರೋಲ್ ರೂಮ್‌ಗೆ ವರ್ಗಾವಣೆ ಮಾಡಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಪರೀತ ಸಂಚಾರ ದಟ್ಟಣೆಯಿರುವ ಮುಂಬ್ರಾ ರಸ್ತೆಯಲ್ಲಿ ಸಂಚಾರಕ್ಕೆ ಅವಕಾಶ ನೀಡಲು ಘನ ವಾಹನ ಚಾಲಕರಿಂದ ಸಂಚಾರ ಪೊಲೀಸರು ಲಂಚ ಸ್ವೀಕರಿಸುತ್ತಿದ್ದ ವೀಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ಅಭ್ಯರ್ಥಿ ಆಯ್ಕೆ: ಎಚ್ಚರ ವಹಿಸುವೆವು’

ಠಾಣೆ (ಪಿಟಿಐ): ಮುಂದಿನ ಲೋಕಸಭೆ ಚುನಾವಣೆಯಲ್ಲಿ ಮಹಾರಾಷ್ಟ್ರದ ಬಾರಾಮತಿ ಜಿಲ್ಲೆಯ ಸಂಸದೆ ಸುಪ್ರಿಯಾ ಸುಳೆ ವಿರುದ್ಧ ಉಪಮುಖ್ಯಮಂತ್ರಿ ಅಜಿತ್ ಪವಾರ್ ಪತ್ನಿ ಸ್ಪರ್ಧಿಸಲಿದ್ದಾರೆ ಎಂಬ ಊಹಾಪೋಹದ ಬಗ್ಗೆ ಪ್ರತಿಕ್ರಿಯಿಸಿದ ಅಜಿತ್ ಪವಾರ್, ‘ಪಕ್ಷವು ಒಗ್ಗಟ್ಟಾಗಿ ಚುನಾವಣೆಯನ್ನು ಎದುರಿಸಲಿದೆ’ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೆಲವೊಂದು ವಿಚಾರಗಳನ್ನು ಗಂಭೀರವಾಗಿ ಪರಿಗಣಿಸಿ, ಜಾಗರೂಕತೆಯಿಂದ ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ’ ಎಂದರು. ಬಾರಮತಿಯಲ್ಲಿ ಪವಾರ್ ಕುಟುಂಬವು ರಾಜಕೀಯವಾಗಿ ಪ್ರಾಬಲ್ಯವನ್ನು ಹೊಂದಿದೆ. ಮುಂದಿನ ಲೋಕಸಭೆ ಚುನಾವಣೆಯಲ್ಲಿ ಅಜಿತ್ ಪವಾರ್ ಮಗಳು ಸಂಸದೆ ಸುಪ್ರಿಯಾ ಸುಳೆ ವಿರುದ್ಧ ಅವರ ಅತ್ತಿಗೆ ಸುನೇತ್ರ ಪವಾರ್ ಸ್ಪರ್ಧಿಸಲಿದ್ದಾರೆ ಎಂಬ ಊಹಾಪೋಹಗಳು ಕೇಳಿಬರುತ್ತಿವೆ.

ಕೆಂಪುಕೋಟೆ: ಪ್ರವಾಸಿಗರ ಭೇಟಿ ನಿರ್ಬಂಧ ವಾಪಸ್

ನವದೆಹಲಿ (ಪಿಟಿಐ): ರೈತರ ಪ್ರತಿಭಟನೆಯ ಕಾರಣದಿಂದ ಐತಿಹಾಸಿಕ ಕೆಂಪುಕೋಟೆಯ ಪ್ರವೇಶಕ್ಕೆ ಹೇರಿದ್ದ ನಿರ್ಬಂಧವನ್ನು ವಾಪಸ್ ಪಡೆದು, ಪ್ರವಾಸಿಗರಿಗೆ ಮುಕ್ತಗೊಳಿಸಲಾಗಿದೆ ಎಂದು ಅಧಿಕೃತ ಮೂಲಗಳು ಭಾನುವಾರ ತಿಳಿಸಿವೆ.

ಕಳೆದ ಸೋಮವಾರ ರಾತ್ರಿ ಏಕಾಏಕಿ ಸ್ಮಾರಕದ ಬಾಗಿಲುಗಳನ್ನು ಮುಚ್ಚಲಾಗಿತ್ತು. ಎರಡು ದಿನಗಳ ಹಿಂದೆಯೇ ಇದನ್ನು ಪ್ರವಾಸಿಗರಿಗೆ ಮುಕ್ತಗೊಳಿಸಲಾಗಿದೆ. ಈ ಬಗ್ಗೆ ಇನ್ನೂ ಅಧಿಕೃತ ಆದೇಶ ಹೊರಬಿದ್ದಿಲ್ಲ’ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಮೂಲಗಳು ತಿಳಿಸಿವೆ.

‘ಸಂತ್ರಸ್ತರ ಕುಟುಂಬಕ್ಕೆ ಬೇಗ ಪರಿಹಾರ ನೀಡಿ’

ಪ್ರಜಾವಾಣಿ ವಾರ್ತೆ/ ಪಿಟಿಐ

ವಯನಾಡ್: ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಶಾಶ್ವತ ಪರಿಹಾರ ಹುಡುಕುವಂತೆ ಒತ್ತಾಯಿಸಿ ನಡೆದ ಪ್ರತಿಭಟನೆ ಹಿಂಸಾರೂಪಕ್ಕೆ ತಿರುಗಿದ ಘಟನೆಯ ಕುರಿತು ಜಿಲ್ಲೆಯ ಅಧಿಕಾರಿಗಳಿಂದ ರಾಹುಲ್ ಗಾಂಧಿ ವಿವರಣೆಯನ್ನು ಪಡೆದರು. ತಾವು ಪ್ರತಿನಿಧಿಸುವ ಲೋಕಸಭಾ ಕ್ಷೇತ್ರ ವಯನಾಡ್‌ಗೆ ಭಾನುವಾರ ಅವರು ಭೇಟಿ ನೀಡಿ ಈ ಮಾಹಿತಿ ಪಡೆದರು.

ಕೆಲ ದಿನಗಳಿಂದ ಆನೆ ದಾಳಿಯಿಂದ ಮೃತಪಟ್ಟ ಮೂವರ ಕುಟುಂಬಸ್ಥರಿಗೆ ವಿಳಂಬ ಮಾಡದೆ, ಪರಿಹಾರ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಯಾವುದೇ ಕುಟುಂಬವು ಒಬ್ಬ ಸದಸ್ಯನನ್ನು ಕಳೆದುಕೊಂಡಾಗ ವಿಶೇಷವಾಗಿ ಬಡ ಕುಟುಂಬಕ್ಕೆ ಪರಿಹಾರ ನೀಡುವಲ್ಲಿ ವಿಳಂಬ ಮಾಡುವುದು ಸರಿಯಲ್ಲ. ಅಂಥ ಕುಟುಂಬಕ್ಕೆ ಹಣದ ಅವಶ್ಯಕತೆ ಇರುವುದರಿಂದಾಗಿ ಪರಿಹಾರವನ್ನು ತಕ್ಷಣವೇ ನೀಡಬೇಕು ಎಂದರು.

ಮಾನವ–ವನ್ಯಜೀವಿಗಳ ಸಂಘರ್ಷವನ್ನು ತಡೆಯಲು ಶಾಶ್ವತ ಪರಿಹಾರ ಹುಡುಕಬೇಕು ಎಂದು ಒತ್ತಾಯಿಸಿ ಸ್ಥಳೀಯರು ಶನಿವಾರ ನಡೆಸಿದ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿತ್ತು. ಈ ಹಿನ್ನೆಲೆಯಲ್ಲಿ ತಮ್ಮ ‘ಭಾರತ್ ಜೋಡೊ ನ್ಯಾಯ ಯಾತ್ರೆ’ಯನ್ನು ವಾರಾಣಸಿಯಲ್ಲಿ ಮೊಟಕುಗೊಳಿಸಿದ ಅವರು, ವಯನಾಡ್‌ಗೆ ಬಂದರು.

ಕಲ್ಪೆಟ್ಟದಲ್ಲಿ ಜಿಲ್ಲಾ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ರಾಜಕೀಯಕ್ಕಾಗಿ ಮಾನವ–ವನ್ಯಜೀವಿ ಸಂಘರ್ಷದ ವಿಚಾರದಿಂದ ವಿಷಯಾಂತರ ಮಾಡಲು ಬಯಸುವುದಿಲ್ಲ ಎಂದರು.

‘ಕೈ’ಗೆ ಸೀಟು: ಎಎಪಿ ಮೃದು?

ಒಂದನೇ ಪುಟದಿಂದ

ಪಂಜಾಬ್‌ನಲ್ಲಿ ಕಾಂಗ್ರೆಸ್ ಮತ್ತು ಎಎಪಿ ಪ್ರತ್ಯೇಕವಾಗಿ, ಚುನಾವಣೆ ಮೈತ್ರಿ ಇಲ್ಲದೆ ಸ್ಪರ್ಧಿಸಬೇಕು ಎಂಬ ತೀರ್ಮಾನವನ್ನು ಎರಡೂ ಪಕ್ಷಗಳು ಒಟ್ಟಾಗಿ ತೆಗೆದುಕೊಂಡಿವೆ. ಇಲ್ಲಿ ಪಕ್ಷಗಳ ನಡುವೆ ಭಿನ್ನಮತವೇನೂ ಇಲ್ಲ ಎಂದು ಕೇಜ್ರಿವಾಲ್ ಹೇಳಿದ್ದಾರೆ. ಹರಿಯಾಣದಲ್ಲಿ ಎಎಪಿ ಒಂದಿಷ್ಟು ಸ್ಥಾನಗಳನ್ನು ಕೇಳಿದೆ ಎಂದು ಕೇಜ್ರಿವಾಲ್ ತಿಳಿಸಿದ್ದಾರೆ.

ಜೆಡಿ (ಯು) ಮತ್ತು ಆರ್‌ಎಲ್‌ಡಿ ‘ಇಂಡಿಯಾ’ ಮೈತ್ರಿಕೂಟವನ್ನು ತೊರೆದಿರುವ ಬಗ್ಗೆ ಕೇಳಿದ ಪ್ರಶ್ನೆ ಖರ್ಗೆ ಅವರು, ‘ತೊರೆಯಬೇಕು ಎಂದು ತೀರ್ಮಾನ ಮಾಡಿರುವವರು ತೊರೆಯುತ್ತಾರೆ. ಕೇಜ್ರಿವಾಲ್ ಅವರು ನನ್ನ ಪಕ್ಕದಲ್ಲಿ ಕುಳಿತಿದ್ದಾರೆ. ಅವರು ಹತ್ತಿರದಲ್ಲಿದ್ದಾರೆ, ಹತ್ತಿರವಾಗಿಯೇ ಇರಲಿದ್ದಾರೆ’ ಎಂದು ಉತ್ತರಿಸಿದರು. ಕಮಲ್ ನಾಥ್ ಅವರು ಪಕ್ಷ ತೊರೆಯುತ್ತಾರೆ ಎಂಬ ವರದಿಗಳ ಬಗ್ಗೆ ಪ್ರಶ್ನಿಸಿದಾಗ ಉತ್ತರಿಸಲು ಖರ್ಗೆ ನಿರಾಕರಿಸಿದರು.

ಜೆಎಂಎಂ ನಾಯಕ ಹಾಗೂ ಜಾರ್ಖಂಡ್ ಮುಖ್ಯಮಂತ್ರಿ ಚಂಪೈ ಸೊರೇನ್ ಅವರ ಜೊತೆ ಖರ್ಗೆ ಅವರು ಸಭೆ ನಡೆಸಿದರು. ‘ನಾವು ಒಟ್ಟಾಗಿ ಕೆಲಸ ಮಾಡಬೇಕಿದೆ. ಮೋದಿ ನೇತೃತ್ವದ ಸರ್ಕಾರದ ಸಂವಿಧಾನ ವಿರೋಧಿ, ಪ್ರಜಾತಂತ್ರ ವಿರೋಧಿ ಕ್ರಮವನ್ನು ವಿರೋಧಿಸುವ ಧೈರ್ಯ ಇರುವ ಕೆಲವೇ ಮಂದಿ ಉಳಿದಿದ್ದಾರೆ’ ಎಂದು ಖರ್ಗೆ ಸಭೆಯ ನಂತರ ಹೇಳಿದರು.

ಅಭಿವೃದ್ಧಿಗಾಗಿ ಬಿಜೆಪಿಗೆ ಸ್ಪಷ್ಟ ಬಹುಮತ ಕೊಡಿ: ಮೋದಿ

ಒಂದನೇ ಪುಟದಿಂದ

‘ಸೈದ್ಧಾಂತಿಕ ಮತ್ತು ನೀತಿಗಳ ಆಧಾರದಲ್ಲಿ ಬಿಜೆಪಿ ಎದುರಿಸಲು ಕಾಂಗ್ರೆಸ್‌ಗೆ ಧೈರ್ಯ ಇಲ್ಲವಾಗಿದೆ. ಕಾಂಗ್ರೆಸ್ ಪಕ್ಷ ಈಗ ನೈತಿಕತೆಯನ್ನು ಕಳೆದುಕೊಂಡಿದೆ. ಮೋದಿಯನ್ನು ಟೀಕಿಸುವುದು, ಆಧಾರರಹಿತ ಆರೋಪ ಮಾಡುವುದೇ ಆ ಪಕ್ಷದ ಮುಖಂಡರ ಒಂದಂಶದ ಕಾರ್ಯಕ್ರಮವಾಗಿದೆ’ ಎಂದು ತರಾಟೆಗೆ ತೆಗೆದುಕೊಂಡರು.

‘ಎನ್‌ಡಿಎ 400ಕ್ಕೂ ಹೆಚ್ಚು ಸ್ಥಾನ ಗೆಲ್ಲಲಿದೆ ಎಂದು ಈಗ ವಿರೋಧಪಕ್ಷದ ನಾಯಕರೇ ಹೇಳುತ್ತಿದ್ದಾರೆ. ಆದರೆ, 400ರ ಗಡಿ ದಾಟುವುದಕ್ಕೆ ಪೂರಕವಾಗಿ ಬಿಜೆಪಿಯು 370 ಸ್ಥಾನ ಗೆಲ್ಲುವ ಮೈಲಿಗಲ್ಲು ದಾಟಬೇಕಾಗಿದೆ’ ಎಂದರು.

‘ವಿಕಸಿತ ಭಾರತವನ್ನು ನಿರ್ಮಿಸಲು ನಾವು ಬೃಹತ್ ಹೆಜ್ಜೆ ಇಡಬೇಕಾಗಿದೆ. ಮುಂದಿನ ಐದು ವರ್ಷ ನಿರ್ಣಾಯಕವಾದುದು. ಬಿಜೆಪಿಯನ್ನು ಅಧಿಕಾರಕ್ಕೆ ಮರಳಿ ತರಲು ಕಾರ್ಯಕರ್ತರು ಮುಂದಿನ 100 ದಿನ ಹೆಚ್ಚು ವಿಶ್ವಾಸ ಮತ್ತು ಉತ್ಸಾಹದಿಂದ ಕೆಲಸ ಮಾಡಬೇಕಾಗಿದೆ’ ಎಂದು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.

‘ಈಗ ನಾನು ಮೂರನೇ ಬಾರಿಗೆ ಅಧಿಕಾರ ಕೇಳುತ್ತಿರುವುದು ಅಧಿಕಾರವನ್ನು ಅನುಭವಿಸಲು ಅಲ್ಲ. ದೇಶಕ್ಕೆ ದುಡಿಯಲು. ನನ್ನ ಮನೆ ಬಗ್ಗೆಯೇ ಯೋಚಿಸಿದ್ದರೆ, ಕೋಟ್ಯಂತರ ಜನರಿಗೆ ಮನೆಗಳನ್ನು ನಿರ್ಮಿಸಲು ಆಗುತ್ತಿರಲಿಲ್ಲ ಎಂದರು.

‘ವಿಶ್ವದ ವಿವಿಧ ರಾಷ್ಟ್ರಗಳು ಭಾರತದ ಜೊತೆಗೆ ಗಾಢ ಬಾಂಧವ್ಯ ಹೊಂದಲು ಈಗ ಬಯಸುತ್ತಿವೆ. ಸಾರ್ವತ್ರಿಕ ಚುನಾವಣೆ ಇನ್ನೂ ನಡೆಯಬೇಕಿದೆ. ಆದರೆ ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಭೇಟಿ ನೀಡುವಂತೆ ಈಗಾಗಲೇ ಅನೇಕ ರಾಷ್ಟ್ರಗಳು ನನ್ನನ್ನು ಆಹ್ವಾನಿಸಿವೆ. ಬಿಜೆಪಿ ಅಧಿಕಾರಕ್ಕೆ ಮರಳುವ ಕುರಿತು ಅವುಗಳಿಗೆ ಖಾತ್ರಿಯಿದೆ’ ಎಂದರು.

‘ಜಗತ್ತಿನ ಪ್ರತಿ ರಾಷ್ಟ್ರಕ್ಕೂ ಗೊತ್ತಿದೆ. ಆಯೇಗಾ ತೋ..’ ಎಂದು ಹೇಳುತ್ತಿದ್ದಂತೆ ಕಾರ್ಯಕರ್ತರು ‘ಆಯೇಗಾ ತೋ.. ಮೋದಿ ಹೀ ಆಯೇಗಾ’ ಎಂದು ಪ್ರಧಾನಿ ಮಾತಿಗೆ ದನಿಗೂಡಿಸಿದರು.

10 ವರ್ಷದ ಆಡಳಿತದಲ್ಲಿ 25 ಕೋಟಿಗೂ ಹೆಚ್ಚು ಜನರನ್ನು ಬಡತನದಿಂದ ಮುಕ್ತಗೊಳಿಸುವುದು ಕಡಿಮೆ ಸಾಧನೆಯಲ್ಲ. ಪ್ರಧಾನಿ, ಸಿ.ಎಂ ಆಗಿ ಸಾಕಷ್ಟು ಕೆಲಸ ಮಾಡಿದ್ದೀರಿ. ವಿರಾಮ ಪಡೆಯಿರಿ ಎಂದು ಹಿರಿಯ ನಾಯಕರೊಬ್ಬರು ನನಗೆ ಸಲಹೆ ಮಾಡಿದ್ದರು. ಆದರೆ, ನಾನು ರಾಜಕೀಯಕ್ಕಾಗಿ ಅಲ್ಲ, ರಾಷ್ಟ್ರಕ್ಕಾಗಿ ಕೆಲಸ ಮಾಡುತ್ತಿದ್ದೇನೆ’ ಎಂದು ಹೇಳಿದರು.

‘1000 ವರ್ಷದಲ್ಲಿ ರಾಮರಾಜ್ಯ; ಮಂದಿರವೇ ಮುನ್ನುಡಿ’

ನವದೆಹಲಿ (ಪಿಟಿಐ): ‘ಅಯೋಧ್ಯೆಯ ರಾಮಮಂದಿರವು 1000 ವರ್ಷಗಳ ರಾಮರಾಜ್ಯದ ಆರಂಭವಾಗಿದೆ’ ಎಂಬ ನಿರ್ಣಯವನ್ನು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಣಿ ಅಂಗೀಕರಿಸಿದೆ.

‘ರಾಮಮಂದಿರವು ರಾಷ್ಟ್ರೀಯ ಪ್ರಜ್ಞೆಯ ದೇಗುಲ. ವಿಕಸಿತ ಭಾರತದ ನಿರ್ಮಾಣ ಕುರಿತಂತೆ ಈಗ ಅಂಗೀಕರಿಸಿರುವ ನಿರ್ಣಯಗಳ ಅನುಷ್ಠಾನದಲ್ಲಿ ನಿರ್ಣಾಯಕ ಪಾತ್ರವನ್ನು ಈ ಮಂದಿರ ವಹಿಸಲಿದೆ’ ಎಂದು ಭಾನುವಾರ ಕೈಗೊಂಡ ನಿರ್ಣಯದಲ್ಲಿ ಬಿಜೆಪಿಯು ಪ್ರತಿಪಾದಿಸಿದೆ.

‘ದೇಶದ ನಾಗರಿಕತೆ, ಸಂಸ್ಕೃತಿಯಲ್ಲಿ ಶ್ರೀರಾಮ, ಸೀತೆ, ರಾಮಾಯಣದ ಅಸ್ತಿತ್ವವಿದೆ. ಸಂವಿಧಾನ ಮೂಲಪ್ರತಿಯ ಮೂಲಭೂತ ಹಕ್ಕುಗಳ ವಿಭಾಗದಲ್ಲೂ ಶ್ರೀರಾಮ, ಸೀತೆ, ಲಕ್ಷ್ಮಣನ ಚಿತ್ರವಿದೆ. ಇದು, ಮೂಲಭೂತ ಹಕ್ಕುಗಳಿಗೆ ಶ್ರೀರಾಮನೇ ಪ್ರೇರೇಪಣೆ ಎಂಬುದಕ್ಕೆ ಸಾಕ್ಷಿ’ ಎಂದಿದೆ.

ರಾಮರಾಜ್ಯದ ಕಲ್ಪನೆ ಮಹಾತ್ಮ ಗಾಂಧಿ ಅವರ ಹೃದಯದಲ್ಲಿಯೂ ಇತ್ತು. ಎಂದೂ ಹೇಳಿದೆ.

‘ಸಂಸದೀಯ ಮಂಡಳಿಗೆ ಅಧ್ಯಕ್ಷರ ಅಧಿಕಾರವಧಿ ನಿರ್ಧರಿಸುವ ಅಧಿಕಾರ’: ಪಕ್ಷದ ಅಧ್ಯಕ್ಷರ ಅಧಿಕಾರಕ್ಕೆ ಸಂಬಂಧಿಸಿ ತುರ್ತು ಸಂದರ್ಭದಲ್ಲಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಪಕ್ಷದ ಸಂಸದೀಯ ಮಂಡಳಿಗೆ ನೀಡುವುದಕ್ಕೆ ಪೂರಕವಾಗಿ ಬಿಜೆಪಿ ತನ್ನ ಸಂವಿಧಾನಕ್ಕೆ ತಿದ್ದುಪಡಿ ತಂದಿದೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ಈ ಪ್ರಸ್ತಾವ ಮಂಡಿಸಿದರು. ಸಾಮಾನ್ಯವಾಗಿ ಪಕ್ಷದ ಅಧ್ಯಕ್ಷರನ್ನು ಆಂತರಿಕ ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ. ತಿದ್ದುಪಡಿ ಉದ್ದೇಶ ಕುರಿತು ಪಕ್ಷ ಹೆಚ್ಚಿನ ಮಾಹಿತಿ ಬಹಿರಂಗಪಡಿಸಿಲ್ಲ. ಪ್ರಸ್ತುತ, ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಅಧಿಕಾರವಧಿಯನ್ನು ಈಗಾಗಲೇ ವಿಸ್ತರಿಸಲಾಗಿದೆ. ಇವರ ಅವಧಿಯು ಜೂನ್ 30ಕ್ಕೆ ಅಂತ್ಯವಾಗಲಿದೆ.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ.)

ಕಾರ್ಪೋರೇಟ್ ಕಛೇರಿ, ಮೆಸ್ಕಾಂ ಭವನ, ಕಾವೂರು ಅಡ್ಡ ರಸ್ತೆ, ಬಿಜೈ, ಮಂಗಳೂರು – 575 004.

ದೂರವಾಣಿ: 0824–2885795, CIN: U40109 KA 2002 SGC 030425

ಕ್ರ. ಸಂಖ್ಯೆ: I/77664/2024 ದಿನಾಂಕ: 15-02-2024

ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

ಮ.ವಿ.ಸ.ಕಂ.ಯು ಈ ಕೆಳಗಿನ ಸಾಮಾಗ್ರಿಯ ಖರೀದಿಗಾಗಿ ಟೆಂಡರನ್ನು ಆಹ್ವಾನಿಸುತ್ತದೆ.

ಟೆಂಡರು ಸಂಖ್ಯೆ	ಖರೀದಿಸಲು ಉದ್ದೇಶಿಸಿರುವ ಸಾಮಗ್ರಿಯ ವಿವರ	ಪ್ರಮಾಣ
MESCOM/2023-24/IND0066	ತಾಂತ್ರಿಕ ಗೊತ್ತುಪಾಡುಗಳನ್ವಯ 10ಎಂವಿಎ, 33/11ಕೆವಿ ಶಕ್ತಿ ಪರಿವರ್ತಕಗಳ ಜೊತೆ ಒ.ಎಲ್.ಟಿ.ಸಿ., ಆರ್.ಟಿ.ಸಿ.ಸಿ. & ಪರಿಕರಗಳು	8 ಸಂಖ್ಯೆ

ಆಸಕ್ತ ಅರ್ಹ ಬಿಡ್ಡುದಾರರು ದಿನಾಂಕ 19–02–2024 ಅಥವಾ ನಂತರ ವೆಬ್ ಸೈಟ್ www.kppp.karnataka.gov.in ಗೆ ಲಾಗಾನ್ ಮಾಡಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ) (ಖರೀದಿ)

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಛೇರಿ(ಯೋಜನೆ)

3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009

ಸಂ: ಬೆಂ.ಜ.ಮಂ/ಮುಅ(ಯೋ)/ಅಮುಅ(ಯೋ)–1/1800/2023–24 ದಿನಾಂಕ:15.02.2024

ಟೆಂಡರ್‌ಗಾಗಿ ಆಹ್ವಾನ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ **ಬೆಂಗಳೂರು ಜಲಮಂಡಳಿಯು ನೀರು ಸರಬರಾಜು ಯೋಜನೆಯನ್ನು 2ನೇ ಹಂತದಲ್ಲಿ, ಬೃ.ಬೆಂ.ಮ. ಪಾಲಿಕೆ ವ್ಯಾಪ್ತಿಯಡಿಯಲ್ಲಿ ಬರುವ 110 ಹಳ್ಳಿಗಳಿಗೆ ಹೊಸದಾಗಿ ಸೇರ್ಪಡೆಗೊಂಡಿರುವ / ಬಿಟ್ಟುಹೋಗಿರುವ ಪ್ರದೇಶಗಳಿಗೆ ನೀರು ಸರಬರಾಜು ಸೌಲಭ್ಯ ಒದಗಿಸುವ ಕಾಮಗಾರಿಗಾಗಿ ಯೋಜನಾ ವ್ಯವಸ್ಥಾಪನಾ ಸಲಹಾ ಸೇವೆಯನ್ನು ಒದಗಿಸಲು** ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಿದೆ.

ಟೆಂಡರಿಗಿಟ್ಟ ಮೊತ್ತ : **ರೂ. 223 ಲಕ್ಷಗಳು**

ಇಎಂಡಿ : **ರೂ. 3.36 ಲಕ್ಷಗಳು**

ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **11.03.2024 ರ ಸಂಜೆ 04.00 ಗಂಟೆಯವರೆಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **12.03.2024 ರ ಸಂಜೆ 5.00 ಗಂಟೆಗೆ.** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–

ಮುಖ್ಯ ಅಭಿಯಂತರರು(ಯೋಜನೆ)

ವಾಸಾಸಂಇ/ವಾಪ್ರ/ಜಿಎ/3661/2023–24

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಯಾದಗಿರಿ ಜಿಲ್ಲೆ, ಯಾದಗಿರಿ

ಜಿಲ್ಲಾಡಳಿತ ಭವನ, ಚಿತ್ತಾಪೂರ ರಸ್ತೆ, ಯಾದಗಿರಿ –585 202

ದೂ.ಸಂ: 08473–253705, ಫ್ಯಾಕ್ಸ್ ಸಂ: 253701

ಮಿಂಚಂಚೆ: deo.yadgir@gmail.com

ಜಾಲತಾಣ:http://www.yadgir.nic.in

ಸಂ: ಕಂ: ಚುನಾವಣೆ: 2023–24 ದಿನಾಂಕ:16.02.2024

–:: ಟೆಂಡರ್ ಪ್ರಕಟಣೆ ::–

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಯಾದಗಿರಿ ವತಿಯಿಂದ ಮುಂಬರು ಸಾರ್ವತ್ರಿಕ ಲೋಕಸಭಾ ಚುನಾವಣೆ–2024 ಸಂಬಂಧಿಸಿದಂತೆ ಅಲ್ಪಾವಧಿಯ ಇ–ಟೆಂಡರ್ ದಿನಾಂಕ 16.02.2024 ರಂದು ಪ್ರಕಟಿಸಲಾದ, Light commercial vehicle on monthly basis with Driver & Diesel ಸರಬರಾಜು (ಟೆಂಡರ್ ಮೊತ್ತ: ರೂ.60 ಲಕ್ಷ) ಮಾಡಲು ಅರ್ಹ ಸಂಸ್ಥೆಗಳನ್ನು ಆಯ್ಕೆ ಮಾಡಲು ಕರ್ನಾಟಕ ಪಾರದರ್ಶಕ ನಿಯಮ 1999 & 2000 ಅನ್ವಯ ಐಟಂವಾರು ದರಗಳ ಟೆಂಡರ್ ಕರೆಯಲಾಗಿರುತ್ತದೆ. ಅರ್ಹ ಸಂಸ್ಥೆಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಸದರಿ ಟೆಂಡರ್ ದಾಸ್ತಾವೇಜು ನಿಯಮಾವಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚುನಾವಣೆ ಶಾಖೆ, ಯಾದಗಿರಿ ಇಲ್ಲಿಗೆ ಕಛೇರಿ ವೇಳೆಯಲ್ಲಿ ಬೇಟಿ ನೀಡಿ ಮಾಹಿತಿ ಪಡೆಯಬಹುದು.

ಟೆಂಡರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 23.02.2024.

ಸಹಿ/– ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/348/ಕೆ.ಎಸ್‌ಎಂ.ಸಿ.&ಎ/2023–24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್: editpage@prajavani.co.in



ಸುಭಾಷಿತ

ಅಧಿಕಾರದ ಆಕಾಂಕ್ಷೆ ಯಾರಿಗೆ ಇರುವುದಿಲ್ಲವೋ ಆತನೇ ಆ ಸ್ಥಾನಕ್ಕೆ ಅರ್ಹನಾದ ವ್ಯಕ್ತಿ.

–ಪ್ಲೇಟೊ

ಕಾಂಗ್ರೆಸ್ ಖಾತೆಗಳ ಸ್ಥಗಿತ ಜನತಂತ್ರದ ಉಸಿರುಗಟ್ಟಿಸುವ ಕೆಲಸ

ಲೋಕಸಭಾ ಚುನಾವಣೆಯು ಸಮೀಪಿಸುತ್ತಿರುವ ಹೊತ್ತಿನಲ್ಲಿ ಕಾಂಗ್ರೆಸ್ ಪಕ್ಷವು ಹಣಕಾಸಿನ ಗಂಭೀರ ಸವಾಲೊಂದನ್ನು ಎದುರಿಸಬೇಕಾದ ಭೀತಿಗೆ ಸಿಲುಕಿದೆ. ಈ ಸವಾಲು ಪಕ್ಷದ ಚುನಾವಣಾ ಅಭಿಯಾನಗಳ ಮೇಲೆ ಮಾತ್ರವೇ ಅಲ್ಲದೆ ಪಕ್ಷದ ದಿನನಿತ್ಯದ ಕೆಲಸಗಳ ಮೇಲೆಯೂ ಪರಿಣಾಮ ಉಂಟು ಮಾಡುವಂಥದ್ದು. ಆದಾಯ ತೆರಿಗೆ ಇಲಾಖೆಯು ತನ್ನ ಮುಖ್ಯ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದೆ ಎಂದು ಕಾಂಗ್ರೆಸ್ ಹೇಳಿದೆ. ಇದರ ಪರಿಣಾಮವಾಗಿ ತನ್ನ ಸಿಬ್ಬಂದಿಗೆ ವೇತನ ನೀಡುವುದಕ್ಕೂ ಸಾಧ್ಯವಾಗದಂತೆ ಆಗಿದೆ ಎಂದು ಪಕ್ಷ ಹೇಳಿದೆ. 2018–19ನೇ ಸಾಲಿನ ಆದಾಯ ತೆರಿಗೆ ವಿವರಗಳನ್ನು ತಡವಾಗಿ ಸಲ್ಲಿಸಿದ್ದಕ್ಕಾಗಿ ಈ ಉಗ್ರ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ವರದಿಯಾಗಿದೆ. ಪಕ್ಷವು ಕ್ರೌಡ್‌ಫಂಡಿಂಗ್ ಯೋಜನೆಯ ಮೂಲಕ ಸಂಗ್ರಹಿಸಿದ ಹಣ ಇದ್ದ ಖಾತೆಯನ್ನು ಕೂಡ ಸ್ಥಗಿತಗೊಳಿಸಲಾಗಿದೆ. ಇಲಾಖೆಯ ಕ್ರಮವನ್ನು ಪ್ರಶ್ನಿಸಿ ಪಕ್ಷವು ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಯ (ಐಟಿಎಟಿ) ಮೊರೆ ಹೋಗಿದೆ. ನ್ಯಾಯಮಂಡಳಿಯು ಪಕ್ಷಕ್ಕೆ ಸದ್ಯಕ್ಕೆ ಈ ಖಾತೆಗಳಲ್ಲಿ ವಹಿವಾಟು ನಡೆಸುವುದಕ್ಕೆ ಅವಕಾಶ ಕಲ್ಪಿಸಿದೆ. ಆದರೆ, ಮುಂದಿನ ವಾರ ಪ್ರಕರಣದ ವಿಚಾರಣೆ ನಡೆಯುವವರೆಗೆ ಖಾತೆಗಳಲ್ಲಿ ಒಟ್ಟು ₹115 ಕೋಟಿಯನ್ನು ಹಾಗೆಯೇ ಇರಿಸಬೇಕು ಎಂಬ ಷರತ್ತನ್ನು ವಿಧಿಸಿದೆ. ₹115 ಕೋಟಿಗಿಂತ ಹೆಚ್ಚುವರಿಯಾಗಿ ಇರುವ ಮೊತ್ತವನ್ನು ಮಾತ್ರ ವೆಚ್ಚ ಮಾಡಲು ಪಕ್ಷಕ್ಕೆ ಅವಕಾಶ ಇದೆ. ಆದರೆ ತನ್ನ ಚಾಲ್ತಿ ಖಾತೆಗಳಲ್ಲಿ ಅಷ್ಟೊಂದು ಮೊತ್ತ ಇಲ್ಲ ಎಂದು ಪಕ್ಷ ಹೇಳಿಕೊಂಡಿದೆ.

ವಿರೋಧ ಪಕ್ಷವು ಕುಸಿಯುವಂತೆ ಮಾಡಿ ಚುನಾವಣೆ ನಡೆಸುವುದು, ಪ್ರಜಾತಂತ್ರ ವ್ಯವಸ್ಥೆಯನ್ನು ನಿರಾಕರಿಸಿದಂತೆ

ಆದಾಯ ತೆರಿಗೆ ಇಲಾಖೆಯು ತನ್ನ ಕ್ರಮಕ್ಕೆ ನೀಡಿರುವ ಕಾರಣಗಳು ಕಪಟತನದಿಂದ ಕೂಡಿಲ್ಲ ಎಂದು ಅನ್ನಿಸುತ್ತಿಲ್ಲ. ಅಲ್ಲದೆ, ಖಾತೆಗಳನ್ನು ಸ್ಥಗಿತಗೊಳಿಸಿರುವುದು, ಆದಾಯ ತೆರಿಗೆಗೆ ಸಂಬಂಧಿಸಿದ ಕಾನೂನುಗಳ ಅಡಿಯಲ್ಲಿ ಜರುಗಿಸುವ ಸಹಜ ಕ್ರಮದಂತೆ ಕಾಣುತ್ತಿಲ್ಲ. 2018–19ನೇ ವರ್ಷವು ಚುನಾವಣಾ ವರ್ಷವೂ ಆಗಿತ್ತು. ಆ ವರ್ಷಕ್ಕೆ ಸಂಬಂಧಿಸಿದಂತೆ ಪಕ್ಷವು ಕೆಲವು ದಿನಗಳ ವಿಳಂಬದ ನಂತರ ಆದಾಯ ತೆರಿಗೆ ವಿವರ ಸಲ್ಲಿಸಿದೆ. ₹14.4 ಲಕ್ಷ ಪಡೆದಿದ್ದಕ್ಕೆ ಸಂಬಂಧಿಸಿದಂತೆ ಕೆಲವು ಲೋಪದೋಷಗಳು ಇದ್ದುವು ಎನ್ನಲಾಗಿದೆ. ಆದರೆ ಆ ಮೊತ್ತವನ್ನು ಪಕ್ಷದ ಶಾಸಕರು ಮತ್ತು ಸಂಸದರು ನಗದು ರೂಪದಲ್ಲಿ ದೇಣಿಗೆಯಾಗಿ ನೀಡಿದ್ದರು ಎಂದು ಪಕ್ಷವು ತಿಳಿಸಿದೆ. ವಿವರ ಸಲ್ಲಿಸುವಲ್ಲಿ ವಿಳಂಬವಾಗಿದ್ದಕ್ಕೆ ₹210 ಕೋಟಿ ದಂಡ ಪಾವತಿಸಬೇಕು ಎಂದು ಹೇಳಿರುವುದು ಆಗಿರುವ ತಪ್ಪಿಗೆ ವಿಪರೀತದ ಶಿಕ್ಷೆ ಎಂಬಂತೆ ಕಾಣುತ್ತಿದೆ. ಇದಕ್ಕೆ ಯಾವ ವಿವರಣೆಯೊಳಗೂ ಸಮರ್ಥನೆ ಇಲ್ಲ. 2019ರ ಏಪ್ರಿಲ್‌ನಲ್ಲಿ ಭೋಪಾಲ್‌ನಲ್ಲಿ ನಡೆದ ಆದಾಯ ತೆರಿಗೆ ಇಲಾಖೆಯ ದಾಳಿಗೆ ಸಂಬಂಧಿಸಿದಂತೆ ಪಕ್ಷದ ಕೆಲವು ನಾಯಕರಿಗೆ ನೋಟಿಸ್ ಜಾರಿಯಾಗಿದೆ ಎಂದು ಪಕ್ಷದ ಮಧ್ಯಪ್ರದೇಶ ಘಟಕವು ಕಳೆದ ವಾರ ಹೇಳಿದೆ. ಪಕ್ಷದ ಆ ನಾಯಕರನ್ನು ಇಲಾಖೆಯ ಸ್ಥಳೀಯ ಕಚೇರಿಗೆ ಬರಹೇಳುವ ಬದಲು ದೆಹಲಿಗೆ ಬರುವಂತೆ ಸೂಚಿಸಿರುವುದನ್ನು ಪಕ್ಷವು ಪ್ರಶ್ನಿಸಿದೆ. ಈ ಕ್ರಮವು ಪಕ್ಷವನ್ನು ಬೆದರಿಸುವ ಒಂದು ತಂತ್ರ ಎಂದು ದೂರಿದೆ.

ಚುನಾವಣೆ ಹತ್ತಿರವಾಗಿರುವಾಗ ಪಕ್ಷದ ಕೈಕಟ್ಟಿಹಾಕುವ ತಂತ್ರವಾಗಿ ಮಾತ್ರ ಈ ಕ್ರಮವನ್ನು ಕಾಣಬಹುದು. ಕಾಂಗ್ರೆಸ್ ಈ ದೇಶದ ಪ್ರಮುಖ ವಿರೋಧ ಪಕ್ಷ. ಚುನಾವಣೆ ಹೊಸಿಲಲ್ಲಿ ಇರುವಾಗ ಅದರ ಕೈಕಟ್ಟಿಹಾಕುವುದು ಪ್ರಜಾತಂತ್ರ ವ್ಯವಸ್ಥೆಯ ಅಪಹಾಸ್ಯಕ್ಕೆ ಸಮನಾದ ಕ್ರಮವಾಗುತ್ತದೆ. ಎನ್‌ಡಿಎ ಸರ್ಕಾರ ಜಾರಿಗೆ ತಂದಿದ್ದ ಚುನಾವಣಾ ಬಾಂಡ್ ಯೋಜನೆಯು ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಮಾರನೆಯ ದಿನ ಆದಾಯ ತೆರಿಗೆ ಇಲಾಖೆ ಈ ಕ್ರಮ ಕೈಗೊಂಡಿದೆ ಎಂಬುದನ್ನು ಇಲ್ಲಿ ಗಮನಿಸಬೇಕು. ವಿರೋಧ ಪಕ್ಷವನ್ನು ಹಾಗೂ ಅದರ ನಾಯಕರನ್ನು ಕಿರುಕುಳಕ್ಕೆ ಗುರಿಪಡಿಸುವ, ಅವರನ್ನು ಬೆದರಿಸುವ ಕೇಂದ್ರೀಯ ತನಿಖಾ ಸಂಸ್ಥೆಗಳು, ಇಲಾಖೆಗಳ ಪ್ರಯತ್ನಗಳ ಭಾಗ ಎಂಬಂತೆ ಆದಾಯ ತೆರಿಗೆ ಇಲಾಖೆಯ ಕ್ರಮ ಕಾಣಿಸುತ್ತದೆ. ಈಗ ಜರುಗಿಸಿರುವ ಕ್ರಮವು ಚುನಾವಣೆಗೆ ಸಂಬಂಧಿಸಿದ ಕೆಲಸಗಳನ್ನು ಪಕ್ಷವು ಕೈಗೆತ್ತಿಕೊಳ್ಳುವುದರ ಮೇಲೆ ವಿಧಿಸಿರುವ ಪರೋಕ್ಷ ನಿರ್ಬಂಧದಂತೆ ಇದೆ. ವಿರೋಧ ಪಕ್ಷವು ಕುಸಿಯುವಂತೆ ಮಾಡಿ, ಅದರ ಅಂಗ ಊನಗೊಳಿಸಿ ನಂತರ ಚುನಾವಣೆ ನಡೆಸುವುದರಿಂದ ಪ್ರಜಾತಂತ್ರ ವ್ಯವಸ್ಥೆಯನ್ನೇ ನಿರಾಕರಿಸಿದಂತಾಗುತ್ತದೆ. ಆ ರೀತಿ ನಡೆಯುವ ಚುನಾವಣೆಯು ಪ್ರಹಸನದಂತೆ ಕಾಣುತ್ತದೆ.

ದಿನದ ಟ್ವೀಟ್

ಎಲ್ಲೆಡೆ ನಿಷೇಧಿಸಿ

ಗುಲಾಬಿ ಬಣ್ಣದ ಕಾಟನ್ ಕ್ಯಾಂಡಿಗೆ ನಿಷೇಧ! ಅದರ ತಯಾರಿಕೆಗೆ ಬಳಸುವ ಬಣ್ಣವು ಕ್ಯಾನ್ಸರ್‌ಗೆ ಕಾರಣವಾಗಬಹುದು. ತಮಿಳುನಾಡು ಮತ್ತು ಪುದುಚೇರಿ ಮಾತ್ರ ಇಂತಹ ಕ್ರಮ ಕೈಗೊಂಡಿರುವುದೇಕೆ? ತೆಲಂಗಾಣ ಸೇರಿದಂತೆ ಇಡೀ ದೇಶವು ಕ್ಯಾನ್ಸರ್‌ಕಾರಕ ರೋಡಮೈನ್– ಬಿ ರಾಸಾಯನಿಕವುಳ್ಳ ಗುಲಾಬಿ ಬಣ್ಣದ ಕಾಟನ್ ಕ್ಯಾಂಡಿಯನ್ನು ನಿಷೇಧಿಸಬೇಕು.

ಸುಧಾಕರ್ ಉದುಮುಲ, ಪತ್ರಕರ್ತ, ಲೇಖಕ

ಕಿಡಿನುಡಿ

ಭಾರತವು ಎಲ್ಲ ಕ್ಷೇತ್ರಗಳಲ್ಲೂ ಗಣನೀಯವಾದ ಪ್ರಗತಿಯನ್ನು ಸಾಧಿಸಿದೆ– ಆದರೆ ಕೆಲವು ನಾಯಕರು ಮತ್ತು ರಾಜಕೀಯ ಪಕ್ಷಗಳಿಗೆ ನಮ್ಮ ರಾಷ್ಟ್ರವನ್ನು ಮತ್ತೆ ಕತ್ತಲೆಯ ಯುಗಕ್ಕೆ ಕೊಂಡೊಯ್ಯುವ ಬಯಕೆ!

ಚಂದ್ರಕುಮಾರ್ ಬೋಸ್, ಸಾಮಾಜಿಕ ಕಾರ್ಯಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 19-2-1999

● **ಶ್ರೀನಾಥ್ ಪ್ರಚಂಡ ಬೌಲಿಂಗ್**

ಕಲ್ಕತ್ತ, ಫೆ. 18– ಕಳೆದ ವಾರ ಅನಿಲ್ ಕುಂಬ್ಳೆ ಅವರ, ವಿಶ್ವವನ್ನೇ ನಿಬ್ಬೆರಗುಗೊಳಿಸಿದ ಸಾಧನೆಯನ್ನು ಸರಿಗಟ್ಟಲು ಇಂದು ಜಾವಗಲ್ ಶ್ರೀನಾಥ್ ಕೇವಲ ಎರಡು ವಿಕೆಟ್‌ನಿಂದ ಹಿಂದೆ ಬಿದ್ದರು.

ಏಷ್ಯಾ ಕ್ರಿಕೆಟ್ ಟೆಸ್ಟ್ ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಇಂದು ಭಾರತದ ಶ್ರೀನಾಥ್ 86 ರನ್‌ಗಳಿಗೆ ಎಂಟು ವಿಕೆಟ್ ಪಡೆಯುವುದರೊಂದಿಗೆ ಪಾಕಿಸ್ತಾನದ ಎರಡನೇ ಸರದಿಯ ಮೊತ್ತವನ್ನು 316 ರನ್‌ಗಳಿಗೆ ನಿಯಂತ್ರಿಸಿದರು.

● **ಬ್ಯಾಂಕಿಗೆ ಕನ್ನ: 32 ಲಕ್ಷ ಕಳವು**

ಬೆಳಗಾವಿ, ಫೆ. 18– ಚಿಕ್ಕೋಡಿ ತಾಲ್ಲೂಕಿನ ಕೋಥಳಿ ಗ್ರಾಮದ ಹೊರವಲಯದಲ್ಲಿನ ಚಿಕ್ಕೋಡಿ ಪಟ್ಟಣ ಸಹಕಾರಿ ಬ್ಯಾಂಕಿನ ಶಾಖೆಯಲ್ಲಿ ಬುಧವಾರ ಮಧ್ಯರಾತ್ರಿ ಸಂಭವಿಸಿದ ಭಾರಿ ಕಳವು ಪ್ರಕರಣದಲ್ಲಿ ಸುಮಾರು 32 ಲಕ್ಷ ರೂ. ಮೌಲ್ಯದ ನಗನಾಣ್ಯ ಕಳವಾಗಿದೆ.

ಎಂಟರಿಂದ ಹತ್ತು ಜನರನ್ನು ಒಳಗೊಂಡಿದ್ದ ಕಳ್ಳರ ತಂಡ ಬ್ಯಾಂಕಿಗೆ ಕನ್ನ ಹಾಕಿ ಭದ್ರತಾ ಕೊಠಡಿಯನ್ನು ಒಡೆದು ಹಾಕಿ 2.5 ಲಕ್ಷ ರೂ. ನಗದು ಮತ್ತು ಸುಮಾರು 29 ಲಕ್ಷ ರೂ. ಬೆಲೆಯ ಚಿನ್ನ ಹಾಗೂ ಬೆಳ್ಳಿಯ ಆಭರಣಗಳನ್ನು ಕಳವು ಮಾಡಿಕೊಂಡು ಹೋಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಮಂಗಳವಾರ, 19-2-1974

● **ಚೈತನ್ಯದ ಚಿಲುಮೆ ವಿ.ಸೀ.ಗೆ ಹಿರಿಯರ ಗೌರವ, ಅಭಿನಂದನೆ**

ಬೆಂಗಳೂರು, ಫೆ. 18– ಸದಾ ಹಸನ್ಮುಖಿ, ಸುಖದುಃಖಗಳಲ್ಲಿ ಸಮಸ್ಥಿತಿ, ಐದು ದಶಕಗಳ ಸಾಹಿತ್ಯ ಸೇವೆಯ ಬದುಕಿನಲ್ಲಿ, ಬರಹದಲ್ಲಿ ಆ ಚೇತನವನ್ನು ಚಿಮ್ಮಿ ಹರಿಸಿದ ಧೈರ್ಯಶಾಲಿ.

ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಇಂದು ಪ್ರೊ. ವಿ. ಸೀತಾರಾಮಯ್ಯ ಅವರನ್ನು ಹಿರಿಯರು, ಸಮಕಾಲೀನರು ಅಭಿನಂದಿಸಿದರು. ಅಭಿನಂದನೆಗೆ ಹೇತುವಾದ, ಅರಲು ಬರಲು ಕೃತಿಗೆ ದೊರಕಿದ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಅವರಿಗೆ ಇರುವ ಅಖಂಡ ಅರ್ಹತೆಯ ನೆನಕೆ, ಆ ಅರ್ಹತೆ ಇನ್ನಷ್ಟು ಸಿದ್ಧಿಸಿ, ನಾಡನುಡಿಗೆ ಒಳಿತಾಗಲಿ ಎಂದು ಹರಕೆ.

ವಿ.ಸೀ. ಅವರನ್ನು 50 ವರ್ಷಗಳಿಂದ ಬಲ್ಲ ‘ಅಣ್ಣ’ ಮಾಸ್ತಿ ಅವರಿಗೆ ‘ವಿ.ಸೀ. ಅವರ ಸ್ನೇಹವೇ ಒಂದು ಭಾಗ್ಯ’. ‘ಸಜ್ಜನರು, ಸತ್ಯವಂತರು– ಹತ್ತು ವರ್ಷಗಳಿಂದ ಆರೋಗ್ಯ ಸರಿಯಾಗಿಲ್ಲದಿದ್ದರೂ ಕೆಲಸಕ್ಕೆ ವಿಶ್ರಾಂತಿ ಇಲ್ಲದ ಸಂಕಲ್ಪಧೀರರು’– ಮುಂದುವರಿಸಿದ ಡಾ. ಮಾಸ್ತಿ ಅವರು ‘ವಿ.ಸೀ. ಅವರನ್ನು ಹಿರಿಯನಾಗಿ ಗೌರವಿಸುತ್ತೇನೆ. ಅವರ ಜ್ಞಾನಕ್ಕಾಗಿ ಪೂಜಿಸುತ್ತೇನೆ’ ಎಂದು ಕೈಮುಗಿದರು.

● **ರಾಷ್ಟ್ರಪತಿ ಭಾಷಣ ತಡೆಯಲು ಸಂಘಟಿತ ಯತ್ನ ವಿಫಲ: ಸಭಾತ್ಯಾಗ**

ನವದೆಹಲಿ, ಫೆ. 18– ಉಭಯ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿದ ರಾಷ್ಟ್ರಪತಿ ಭಾಷಣವನ್ನು ತಡೆಯಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಮತ್ತಿತರ ಪ್ರತಿಪಕ್ಷಗಳಿಂದ ಸಂಸತ್ತಿನ ಇತಿಹಾಸದಲ್ಲಿಯೇ ಮೊದಲನೆಯದಾದ ಸಂಘಟಿತ ಯತ್ನ ಇಂದು ನಡೆಯಿತು. ಬಜೆಟ್ ಅಧಿವೇಶನ ಪ್ರಕ್ಷುಬ್ಧ ವಾತಾವರಣದಲ್ಲಿ ಆರಂಭವಾಯಿತು.

ರಾಷ್ಟ್ರಪತಿ ವೇದಿಕೆಯತ್ತ ಧಾವಿಸಿದ ಉದ್ರಿಕ್ತ ಮಾರ್ಕ್ಸ್‌ವಾದಿ ಸದಸ್ಯರನ್ನು ಕಾಂಗ್ರೆಸ್ ಸದಸ್ಯರು ತಡೆದ ಕಾರಣ ಜಗಳ ನಡೆಯಿತು. ಆನಂತರ ಕೂಗುತ್ತಾ ಪ್ರತಿಭಟನಕಾರರು ಸಭಾತ್ಯಾಗ ಮಾಡಿದರು. ಮೊದಲಿಗೆ ನಡೆದ ಘರ್ಷಣೆಯಲ್ಲಿ ಒಬ್ಬ ಸದಸ್ಯ ಕೆಳಕ್ಕೆ ಬಿದ್ದರು.

ಮೋದಿವಾದ– ಮೋದಿವಿರೋಧಿ ನೆಲೆಯಲ್ಲಿ ಹರಳುಗಟ್ಟುತ್ತಿರುವ ಚುನಾವಣಾ ಸಂಕಥನ

ಆಟ ಬದಲಿಸುವ ನೋಟ ಯಾವುದು?

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಈ ಬಾರಿಯೂ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಪ್ರಧಾನಿ ನರೇಂದ್ರ ಮೋದಿ ಮತ್ತಷ್ಟು ಸರ್ವಾಧಿಕಾರಿ ಆಗಿ, ಭವಿಷ್ಯದಲ್ಲಿ ಚುನಾವಣೆಗಳೇ ನಡೆಯುವುದಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ. ಮುಂದುವರಿದು, ಮಾಧ್ಯಮ, ನ್ಯಾಯಾಂಗ, ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆಯಂತಹ ಎಲ್ಲಾ ಸಂಸ್ಥೆಗಳ ಮೇಲೆ ಹತೋಟಿ ಸಾಧಿಸಿರುವ ಮೋದಿ ಅವರನ್ನು ಇನ್ನಷ್ಟು ಶಕ್ತಿಶಾಲಿ ಮಾಡಬೇಡಿ ಎಂಬ ಎಚ್ಚರಿಕೆಯ ಸಂದೇಶವೂ ಅವರಿಂದ ಹೊರಬಿದ್ದಿದೆ.

ಹಾಗೆ ನೋಡಿದರೆ ಖರ್ಗೆಯವರ ಮಾತಿನಲ್ಲಿ ಹೊಸದೇನೂ ಇಲ್ಲ. ಆದರೆ ಸುದೀರ್ಘ ಇತಿಹಾಸ ಹೊಂದಿದ ರಾಜಕೀಯ ಪಕ್ಷವೊಂದರ ಅಧ್ಯಕ್ಷರಾಗಿ ಅವರು ತಮ್ಮ ಕಾರ್ಯಕರ್ತರಿಗೆ ಮನದಟ್ಟು ಮಾಡಲು ಯತ್ನಿಸುತ್ತಿರುವ ಭವಿಷ್ಯತ್ತಿನ ಅಪಾಯ ಬಹಳ ಮುಖ್ಯವಾದುದು. ಇಲ್ಲಿ ಪಕ್ಷ ರಾಜಕಾರಣ, ಚುನಾವಣಾ ಕಾರ್ಯತಂತ್ರ ಮೀರಿದ ವಿಶಾಲ ಕಾಳಜಿಯೊಂದು ಖರ್ಗೆಯವರ ಮಾತಿನಲ್ಲಿ ಧ್ವನಿಸುತ್ತಿದೆ.

ಇನ್ನೊಂದು ಬದಿಯಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರೂ ಲೋಕಸಭಾ ಚುನಾವಣೆಗೆ ಪಕ್ಷವನ್ನು ಅಣಿಗೊಳಿಸುವ ಸಲುವಾಗಿ ತಮ್ಮ ಕಾರ್ಯಕರ್ತರಿಗೆ ಕೆಲವು ಕಿವಿಮಾತುಗಳನ್ನು ಹೇಳಿದ್ದಾರೆ. ಪಕ್ಷದ ಕಾರ್ಯಕರ್ತರ ರಾಷ್ಟ್ರೀಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುವಾಗ, ‘ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪ್ರತಿ ಬೂತಿನಲ್ಲಿ 2019ಕ್ಕಿಂತ ಹೆಚ್ಚುವರಿಯಾಗಿ 370 ಮತಗಳನ್ನು ತರಲು ಕಾರ್ಯಕರ್ತರು ಕಾರ್ಯೋನ್ಮುಖರಾಗಬೇಕು...’ ಎಂದು ಉತ್ತೇಜಿಸಿದ್ದಾರೆ. ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಪ್ರತಿಶತ 37 ಮತ ಪಡೆದು 303 ಕ್ಷೇತ್ರಗಳನ್ನು ಗೆದ್ದಿದ್ದ ಪಕ್ಷದ ಮತ ಗಳಿಕೆ ಪ್ರಮಾಣವನ್ನು ಶೇ 45ಕ್ಕೆ ಹೆಚ್ಚಿಸುವ ಗುರಿಯನ್ನು ಆ ಪಕ್ಷ ನಿಗದಿಪಡಿಸಿಕೊಂಡಿದೆ. ‘ವಿಕಸಿತ ಭಾರತ, ಮೋದಿ ಗ್ಯಾರಂಟಿ, ಮತ್ತೊಮ್ಮೆ ಮೋದಿ ಸರ್ಕಾರ’ ಎಂದು ಘೋಷಣೆ ಹೊರಡಿಸುವ ನಿರ್ಣಯವನ್ನೂ ತೆಗೆದುಕೊಳ್ಳಲಾಗಿದೆ.

ಇಲ್ಲಿ ಮಲ್ಲಿಕಾರ್ಜುನ ಖರ್ಗೆ ಮತ್ತು ನರೇಂದ್ರ ಮೋದಿ ಅವರ ಮಾತುಗಳಲ್ಲಿನ ತದ್ವಿರುದ್ಧ ಆದ್ಯತೆ, ಕಾಳಜಿ ಮತ್ತು ಗುರಿಯನ್ನು ಗುರುತಿಸಬಹುದು.

ಮೋದಿ ಅವರನ್ನು ವಿರೋಧಿಸುವ ರಾಜಕಾರಣಿಗಳು, ಪಕ್ಷಗಳು, ಪ್ರಗತಿಶೀಲ ಆಲೋಚಕರು, ಸಂಘಟನೆಗಳ ಮಾತು ಮತ್ತು ಬರವಣಿಗೆಗಳಲ್ಲಿ ಸಾಮಾನ್ಯವಾಗಿ ಪುನರಾವರ್ತನೆಯಾಗುವ ಪದವೆಂದರೆ ಫ್ಯಾಸಿಸಂ. ಬಲಪಂಥೀಯ ನಡವಳಿಕೆಗಳ ಮೊತ್ತದಂತೆ, ಬಾಹ್ಯ ರೂಪದಂತೆ ನರೇಂದ್ರ ಮೋದಿ ಗೋಚರಿಸುತ್ತಿದ್ದಾರೆ. ಇಲ್ಲಿ ಬಿಜೆಪಿ ಗೌಣವಾಗಿ, ಆ ಪಕ್ಷವೇ ರೂಪಿಸಿದ ನಾಯಕನೊಬ್ಬ ಹಂತ ಹಂತವಾಗಿ ನಿಯಂತ್ರಕ ಸ್ಥಾನ ಆಕ್ರಮಿಸಿಕೊಳ್ಳುತ್ತಾ ಸಾಗಿರುವುದು ಆರಂಭಿಕ ಫ್ಯಾಸಿಸಂ ಸ್ವರೂಪವನ್ನೇ ತೋರ್ಪಡಿಸುತ್ತಿದೆ.

ರಾಜ್ಯ ಮತ್ತು ರಾಷ್ಟ್ರ ರಾಜಕೀಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಮುಂಬರುವ ಲೋಕಸಭಾ ಚುನಾವಣೆಯ ಸಂಕಥನವು ಮೋದಿವಾದ ಮತ್ತು ಮೋದಿವಿರೋಧದ ನೆಲೆಯಲ್ಲಿ ಹರಳುಗಟ್ಟುವ ಎಲ್ಲಾ ಮುನ್ಸೂಚನೆಗಳು ದಟ್ಟವಾಗಿವೆ.

ನಾಯಕನೇ ಕೇಂದ್ರವಾಗಿ ಪಕ್ಷದ ಅಂಗರಚನೆಯ ಪರಿಧಿಯಾಚೆಗೆ ಸರಿಯುವುದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಫ್ಯಾಸಿಸಂ ತೆರೆದುಕೊಳ್ಳುವ ಮೊದಲ ಹಂತ. ಈಗ ಆ ಹಂತವನ್ನು ಪ್ರವೇಶಿಸಿಯಾಗಿದೆ ಎಂದು ಭಾವಿಸಲು ಬಹಳಷ್ಟು ಕಾರಣಗಳಿವೆ. ಮುಂದಿನ ಮೆಟ್ಟಿಲಲ್ಲಿ ಪಕ್ಷದ ಸಿದ್ಧಾಂತ ಕೂಡ ಮೂಲೆಗುಂಪಾಗಿ ಸಂಪೂರ್ಣ ಒಂದು ನಾಯಕತ್ವ ಮತ್ತು ಅದರ ಸುತ್ತಲಿನ ಹೌದಪ್ಪಗಳೇ ಮೇಲುಗೈ ಪಡೆಯುವ ಸನ್ನಿವೇಶವನ್ನು ಊಹಿಸಬಹುದು. ಈ ವಿನ್ಯಾಸವನ್ನು ಮೋದಿ, ಬಿಜೆಪಿ ಮತ್ತು ಆರ್‌ಎಸ್‌ಎಸ್ ಕೂಟದ ಆವರಣದಲ್ಲಿಯೇ ಪರಿಶೀಲಿಸುವುದಾದರೆ, ಮೋದಿಯವರ ವರ್ಚಸ್ಸಿನಿಂದ ನಿರ್ಮಾಣವಾಗಿರುವ ಅನಿವಾರ್ಯ, ಅವಲಂಬನೆ ನಿಧಾನವಾಗಿ ಆರ್‌ಎಸ್‌ಎಸ್ ಪಡಸಾಲೆಯಲ್ಲಿಯೂ ಆತಂಕ ಮೂಡಿಸಿದೆ.

ಅನೇಕ ವರ್ಷಗಳ ಕಾಲ ರಹಸ್ಯ ಕಾರ್ಯಸೂಚಿಯಾಗಿ ಅಳವಡಿಸಿಕೊಂಡಿದ್ದ ಸೈದ್ಧಾಂತಿಕ ಪ್ರತಿಪಾದನೆಗಳು ಹಿಂದಿನ ಮೂರು ದಶಕಗಳಲ್ಲಿ ರಹಸ್ಯದ ಪರದೆಯನ್ನು ಕಳಚಿಕೊಂಡಿದ್ದನ್ನು ಗಮನಿಸಿದ್ದೇವೆ. ಬಿಜೆಪಿಯು ಸಂಘ ಪರಿವಾರದ ರಾಜಕೀಯ ಮುಖ ಎಂಬುದರಲ್ಲಿ ಅನುಮಾನವೇನೂ ಉಳಿದಿಲ್ಲ. ಅಷ್ಟೇ ಅಲ್ಲ, ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದಲ್ಲಿ ಸಂಘ ಪರಿವಾರದ ಬಹಳಷ್ಟು ಸಿದ್ಧಾಂತಿಗಳು ಪರೋಕ್ಷ ಆಡಳಿತ ನಡೆಸಿದ್ದನ್ನೂ ನಾಡು ಕಂಡಿದೆ. ಈ ಹಿನ್ನೆಲೆಯಲ್ಲಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮತ್ತೆ ಅವೇ ಭಾವನಾತ್ಮಕ, ಧಾರ್ಮಿಕ ವಿಚಾರಗಳನ್ನು ಮುನ್ನೆಲೆಗೆ ಒಡ್ಡುವ ಕಾರ್ಯಸೂಚಿ ಈಗಿನಿಂದಲೇ ಬಿಚ್ಚಿಕೊಳ್ಳತೊಡಗಿದೆ.

ಚುನಾವಣಾ ತಂತ್ರದ ಭಾಗವಾಗಿ, ಲಾಭಕೋರ ರಾಜಕಾರಣದ ಆಟವಾಗಿ ಅಖಾಡ ಪ್ರವೇಶಿಸುವ ಇಂತಹ ವಿಚಾರಗಳ ಆಯಸ್ಸು ಅಲ್ಪಾವಧಿ ಆಗಿರುವುದಿಲ್ಲ. ಅವು ಸಮಾಜದ ದೈನಂದಿನ ಕಾರ್ಯವೈಖರಿಯಲ್ಲಿ ಉಂಟು ಮಾಡುವ ತಲ್ಲಣಗಳು ದೀರ್ಘಕಾಲೀನ ಪ್ರಭಾವ ಬೀರಲು ಬಹಳಷ್ಟು ಶಕ್ತಿ, ಸ್ಫೂರ್ತಿಯನ್ನು ಮೈಗೂಡಿಸಿಕೊಂಡಿರುತ್ತವೆ.

ಈ ಬೆಳವಣಿಗೆಗಳ ಅಂತಿಮ ಹಂತವನ್ನು ತರ್ಕಬದ್ಧವಾಗಿ, ಆಧಾರಸಮ್ಮತವಾಗಿ ಅರ್ಥೈಸುವುದಾದರೆ, ಅದು ಅರಾಜಕತೆಯತ್ತ ಮುಖ ಮಾಡಬಹುದು. ಆಗ ಪಕ್ಷ, ನಾಯಕ, ಸಿದ್ಧಾಂತ, ತಂತ್ರಗಾರಿಕೆ ಎಲ್ಲವೂ ಸೃಷ್ಟಿಕರ್ತರ ನಿಯಂತ್ರಣವನ್ನೂ ಮೀರುವ ವಿದ್ಯಮಾನವು ಮೇಲ್ನೋಟಕ್ಕೆ ಉತ್ಪ್ರೇಕ್ಷಿತ ಊಹೆ ಅನ್ನಿಸಬಹುದು. ಆದರೆ ಆ ಸಾಧ್ಯತೆಯ ಮರೆವಿಗೆ ತೆರಬೇಕಾದ ಬೆಲೆ ಸಣ್ಣದಲ್ಲ ಎಂಬ ಅರಿವು ಇರದಿದ್ದರೆ ಹೇಗೆ?

ಇದು ಮೋದಿವಾದ ನಮ್ಮನ್ನು ಕರೆದೊಯ್ಯಲಿರುವ ಹಾದಿ ಕುರಿತ ಮಾತಾಯಿತು. ಇನ್ನು, ಮೋದಿ ವಿರೋಧಿ ನೆಲೆಯನ್ನು ಅವಲೋಕಿಸುವುದಾದರೆ, ಆಶಾದಾಯಕ ನಿರೀಕ್ಷೆಯ ಕಿರಣವೇನೂ ಗೋಚರಿಸುವುದಿಲ್ಲ. ಸಂಘ ಪರಿವಾರ ಮೂಲದಿಂದ ಉತ್ಪತ್ತಿ ಆಗುವ ವಿಷಯಗಳನ್ನು ಆಧರಿಸಿ ಬಿಜೆಪಿ ಮುಂದುಮಾಡುವ ಚುನಾವಣಾ ಕಾರ್ಯತಂತ್ರಗಳಿಗೆ ಪ್ರತಿಕ್ರಿಯಾತ್ಮಕ ಧೋರಣೆಗೆ ಹೊರತಾದ ಪ್ರಬಲ ಕಾರ್ಯಸೂಚಿಯು ಮೋದಿ ವಿರೋಧಿಗಳಿಗೆ ದಕ್ಕಿದಂತೆ ಕಾಣದು. ಪ್ರತಿರೋಧದ ಬಹಳಷ್ಟು ಪ್ರಯತ್ನಗಳು ತಿರುಮಂತ್ರದಂತೆ ಮೋದಿವಾದದ ಪ್ರಚಾರವಾಗಿ ಮಾರ್ಪಡುತ್ತಿರುವುದು ವಿಪರ್ಯಾಸಕರ.

ಮೋದಿವಾದದ ಭಾಗವಾಗಿ ನಿರೂಪಿಸಲ್ಪಡುವ ಜಾತಿ-ಮತ-ಧರ್ಮ ಕೇಂದ್ರಿತ ವಿದ್ಯಮಾನಗಳು ಚುನಾವಣೆಯ ವಿಷಯವಾಗಿ ಪರ ಅಥವಾ ವಿರೋಧದ ನೆಲೆಯಲ್ಲಿ ಚರ್ಚೆಗೆ ಒಳಪಟ್ಟಷ್ಟೂ ವಿರೋಧ ಪಕ್ಷಗಳಿಗೆ ನಷ್ಟ ಎಂಬ ಸಾಬೀತಾದ ಸತ್ಯವನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಮೋದಿವಾದದ ತಿರುಳಾಗಿರುವ ಭಾವನಾತ್ಮಕ ಸಂಗತಿಗಳ ಪ್ರಸ್ತಾಪಗಳಿಗೆ, ಪ್ರತಿಕ್ರಿಯೆಗಳಿಗೆ ವಿರಾಮ ನೀಡಿ ಆರ್ಥಿಕ ಮತ್ತು ಆಡಳಿತಾತ್ಮಕ ಸಂಗತಿಗಳನ್ನು ಹೆಚ್ಚಾಗಿ ಸಾರ್ವಜನಿಕ ಚರ್ಚೆಯ ವೇದಿಕೆಗೆ ಬರುವಂತಾಗಿಸಿದರೆ ಮೋದಿ ವಿರೋಧಕ್ಕೆ ಚಾಲನೆ, ಮನ್ನಣೆ ಸಿಗುವ ಸಂಭವ ಹೆಚ್ಚು. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಹಳೆತಲೆಗಳ ದನಿ, ಶೈಲಿ, ತಂತ್ರ ತಗ್ಗಿಸಿ ಹೊಸ ಪೀಳಿಗೆಗೆ ವೇದಿಕೆ-ಅವಕಾಶ ಕಲ್ಪಿಸುವ ಆಯ್ಕೆಯಿದೆ. ಇತ್ತೀಚೆಗೆ ಸಂತೋಷ್ ಲಾಡ್, ಶರತ್ ಬಚ್ಚೇಗೌಡ, ಪ್ರಿಯಾಂಕ್ ಖರ್ಗೆ ಅಂತಹವರು ಹೊಸ ದನಿ ಹೊರಡಿಸುತ್ತಿದ್ದಾರೆ. ಕೃಷ್ಣ ಬೈರೇಗೌಡ, ಸತೀಶ್ ಜಾರಕಿಹೊಳಿ, ದಿನೇಶ್ ಗುಂಡೂರಾವ್, ರಾಮಲಿಂಗಾರೆಡ್ಡಿ ಥರದವರು ಆಡಳಿತಕ್ಕೆ ಚುರುಕು ತರುತ್ತಿದ್ದಾರೆ. ಇವರನ್ನೆಲ್ಲಾ ಬಳಸಿಕೊಂಡು ಸಕಾರಾತ್ಮಕ ಸಂಗತಿಗಳನ್ನು ರಾಜ್ಯ ಮಟ್ಟದಲ್ಲಿ ಚುನಾವಣಾ ವಿಷಯ ಆಗಿಸಲು ಸಾಧ್ಯವಿದೆ.

ಮೋದಿವಾದಿಗಳ ‘ಬೆಂಕಿಗೆ ಪ್ರತಿಯಾಗಿ ಸಹಬಾಳ್ವೆಯ ಹಣತೆ ಬೆಳಗುವ’ ದೇವನೂರ ಮಹಾದೇವ ಅವರ ಕರೆಯನ್ನು ಸಾಂಕೇತಿಕ ನೆಲೆಯಾಚೆಗಿನ ವಾಸ್ತವಕ್ಕೆ ಕೊಂಡೊಯ್ಯುವ ಹೊಣೆ ಮತ್ತು ಸವಾಲನ್ನು ಯಾರಾದರೂ ಸ್ವೀಕರಿಸಬೇಕಲ್ಲವೇ? ಎಡಪಕ್ಷಗಳ ದುರವಸ್ಥೆ ಕಾಲದಲ್ಲಿ ಬಹುನಿರೀಕ್ಷೆಗೆ ಯಾವ ರೀತಿಯಲ್ಲಿಯೂ ಅರ್ಹವಲ್ಲದ ಕಾಂಗ್ರೆಸ್ ಪಕ್ಷದಲ್ಲಿ ಪರ್ಯಾಯ ರಾಜಕಾರಣ ಹುಡುಕುವ, ನೆಚ್ಚುವ ಅನಿವಾರ್ಯವನ್ನು ಸೃಷ್ಟಿಸಿಕೊಂಡಿರುವುದು ಮತ್ತೊಂದು ದುರಂತಸತ್ಯ. ಗೆದ್ದ ಎತ್ತಿನ ಬಾಲ ಹಿಡಿಯುವವರು, ಗೆಲ್ಲುವ ಎತ್ತಿನ ಹಗ್ಗ ಹಿಡಿಯುವವರು ಬೇಕಾದಷ್ಟು ಜನ ಸಿಗುತ್ತಾರೆ; ಆದರೆ ಈಗ ಬೇಕಿರುವುದು ಗೆಲ್ಲಿಸಬೇಕಾದ ಕರುವಿಗೆ ಹತ್ತಿಕಾಳು ಇಡಬೇಕಾದವರು!

ಚುರುಮುರಿ

ನನ್ನ ಬಜೆಟ್...

● ಆನಂದ

ಸಂಸಾರದ ಪ್ರಿಯ ಸದಸ್ಯರೆ,

ನಮ್ಮ ಸಂಸಾರದ ಆರ್ಥಿಕ ಪರಿಸ್ಥಿತಿ ಎಂದಿನಂತೆ ತೀವ್ರವಾದ ಸಂಕಟವನ್ನು ಎದುರಿಸುತ್ತಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಪರಿಸ್ಥಿತಿ ಸುಧಾರಿಸಿಯೇ ಇಲ್ಲ. ಆದಾಯ ಅಷ್ಟೇ ಇದೆ, ಆದರೆ ಖರ್ಚು ಏರುತ್ತಲೇ ಇದೆ. ಹೀಗಾಗಿ, ಈ ವರ್ಷ ಸಹ ಖರ್ಚುವೆಚ್ಚ ಸರಿದೂಗಿಸುವುದು ಹೇಗೆ ಎಂಬ ಚಿಂತೆ ಕಾಡುತ್ತಲೇ ಇದೆ.

ಹೊಸ ವೇತನ ಆಯೋಗದ ಶಿಫಾರಸುಗಳು ಜಾರಿಗೆ ಬಂದು ಆದಾಯ ಸುಮಾರಾಗಿ ಸಾಕಷ್ಟು ಏರಿ ಈ ವರ್ಷ ಖೋತಾರಹಿತ ಬಜೆಟ್ ಮಂಡಿಸಿ, ಸಂಸಾರದ ಎಲ್ಲ ವಿಭಾಗಗಳಿಗೂ ಹೆಚ್ಚೆಚ್ಚು ಅನುದಾನ ಮಂಜೂರು ಮಾಡಿ, ನಿಮ್ಮೆಲ್ಲರನ್ನೂ ಸುಪ್ರೀತಗೊಳಿಸಲು ಸಾಧ್ಯ ಎಂದು ಭಾವಿಸಿದ್ದೆ. ಆದರೆ ಅದು ಹಾಗಾಗುವಂತೆ ಕಾಣುತ್ತಿಲ್ಲ. ವಾರ್ಷಿಕ ಇನ್‌ಕ್ರಿಮೆಂಟ್‌ನಿಂದ ಬರುವ ಹಣವಷ್ಟೇ ಈ ವರ್ಷದ ಹೆಚ್ಚುವರಿ ಆದಾಯ. ಹಣದುಬ್ಬರ ವಿಪರೀತವಾಗುತ್ತಿರುವುದರಿಂದ ಆರ್ಥಿಕ ಶಿಸ್ತನ್ನು ಎಲ್ಲರೂ ಪಾಲಿಸಬೇಕಾಗಿದ್ದು, ನಿಮ್ಮೆಲ್ಲರ ಸಹಕಾರ ತೀರಾ ಅತ್ಯಗತ್ಯವಾಗಿದೆ.

ಈ ವರ್ಷ ನಾನು ವಾಪಸ್ ಮಾಡಬೇಕಿದ್ದ ಎಲ್ಲ ಸಾಲಗಳ ಮರುಪಾವತಿಯನ್ನು ಮುಂದಕ್ಕೆ ಹಾಕಿದ್ದೇನೆ. ಇದಕ್ಕಾಗಿ ಸಾಲಿಗರ ಸಹಕಾರ ಕೋರುತ್ತಿದ್ದೇನೆ. ಅನವಶ್ಯಕ ಖರ್ಚುಗಳನ್ನು ತಪ್ಪಿಸಲು ಕೆಲವು ಕ್ರಮಗಳು ಅತ್ಯವಶ್ಯ. ಅತಿಥಿಗಳನ್ನು ಊಟಕ್ಕೆ ಎಬ್ಬಿಸದೆ ಕಾಫಿ ಅಥವಾ ಜ್ಯೂಸ್‌ನಿಂದ ಸತ್ಕರಿಸಿದರೆ ಗ್ಯಾಸ್ ಸಹ ಉಳಿತಾಯ ಮಾಡಬಹುದು. ಮದುವೆ ಮುಂಜಿ ಪೂಜೆಗಳನ್ನು ತಪ್ಪಿಸದೆ ಅಲ್ಲೇ ಊಟ ಮುಗಿಸಿ, ಬರುವಾಗ ತೆಂಗಿನಕಾಯಿ ತಾಂಬೂಲ ಕಡ್ಡಾಯವಾಗಿ ತರಬೇಕಿದೆ. ವಿದ್ಯುತ್ ಬಿಲ್ ರಿಯಾಯಿತಿಯ ಸಂಪೂರ್ಣ ಉಪಯೋಗ ಮಾಡಿಕೊಳ್ಳಬೇಕಿದೆ. ಸರಳ ಜೀವನವನ್ನು ಎಲ್ಲರೂ ಪಾಲಿಸಿದರೆ ಶೃಂಗಾರ ಸಾಮಗ್ರಿಗಳ ವೆಚ್ಚವನ್ನು ಉಳಿಸಲು ಸಾಧ್ಯ. ಪಾಕೆಟ್‌ಮನಿ ಹೆಚ್ಚಿಸಲು ಈ ವರ್ಷ ಸಾಧ್ಯವಿಲ್ಲ. ಇಂತಹ ಉಪಾಯಗಳಿಂದ ಎಲ್ಲರಿಗೂ ಕ್ಷೇಮ.

ಗಮನಿಸಿ: ಇದು ಜಸ್ಟ್ ಅಬವ್ ದಿ ಪಾವರ್ಟಿ ಲೈನ್‌ನಲ್ಲಿರುವ ಸಂಸಾರದ ಬಜೆಟ್ ಆಗಿದ್ದರೆ ಅದು ಕಾಕತಾಳೀಯವೂ ಆಕಸ್ಮಿಕವಾಗಿಯೂ ಆಗಿರದೆ ತೀರಾ ಸಹಜ ಎಂದೇ ಭಾವಿಸತಕ್ಕದ್ದು.

ಚರ್ಚೆ

ಉದ್ಯೋಗವಿದೆ... ಶ್ರದ್ಧೆ ಇಲ್ಲ!

ಬದ್ಧತೆ, ಪರಿಶ್ರಮದ ಕೊರತೆ ಎಲ್ಲ ಕ್ಷೇತ್ರಗಳನ್ನೂ ಕಾಡುತ್ತಿದೆ

● ಚನ್ನು ಅ. ಹಿರೇಮಠ

‘ಇಲ್ಲಿ ಹಸಿವಿನಿಂದ ಸಾಯುವುದಕ್ಕಿಂತ ಅಲ್ಲಿ ಸಾಯುವುದು ಉತ್ತಮ’ ಎಂಬ ಶೀರ್ಷಿಕೆಯಡಿ, ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ ಯುದ್ಧಪೀಡಿತ ಇಸ್ರೇಲ್‌ಗೆ ತೆರಳುತ್ತಿರುವ ಭಾರತೀಯ ಕಾರ್ಮಿಕರಿಗೆ ಸಂಬಂಧಿಸಿದ ಲೇಖನವೊಂದು ಪ್ರಕಟವಾಗಿದೆ (ಪ್ರ.ವಾ., ಫೆ. 5). ನೋಟು ರದ್ದತಿ, ಕೋವಿಡ್ ಸಮಯದಲ್ಲಿ ಆದ ಉದ್ಯೋಗ ನಷ್ಟವು ನಮ್ಮನ್ನು ಹೈರಾಣಾಗಿಸಿದೆ ಎಂದು ಈ ಕಾರ್ಮಿಕರಲ್ಲಿ ಕೆಲವರು ಹೇಳಿದ್ದಾರೆ. ಆದರೆ, ನಮ್ಮ ದೇಶದಲ್ಲಿ ಉದ್ಯೋಗವಿಲ್ಲ ಎನ್ನುವ ಭ್ರಾಂತಿಯನ್ನು ಹುಟ್ಟುಹಾಕಿದ್ದು ಯಾರು ಎಂಬ ಜಿಜ್ಞಾಸೆ ಕಾಡುತ್ತದೆ.

ನಿಜ, ನಮ್ಮ ದೇಶದಲ್ಲಿ ಸರ್ಕಾರಿ ಉದ್ಯೋಗಕ್ಕೆ ಖಂಡಿತ ಬರ ಇದೆ. ಹಾಗೆಂದು ಎಲ್ಲರಿಗೂ ಸರ್ಕಾರಿ ಉದ್ಯೋಗವೇ ಬೇಕೆಂದರೆ ಹೇಗೆ? ಹೊರಗುತ್ತಿಗೆ ಆಧಾರದ ಮೇಲಾದರೂ ಪರವಾಗಿಲ್ಲ, ಸರ್ಕಾರಿ ಕಚೇರಿಯಲ್ಲಿ ಅತಿ ಕಡಿಮೆ ಸಂಬಳಕ್ಕೆ ದುಡಿಯಲು ನಮ್ಮ ಯುವಜನ ಸಿದ್ಧರಿದ್ದಾರೆ. ಏಕೆಂದರೆ, ಇಲ್ಲಿ ದಕ್ಷತೆ, ಬದ್ಧತೆ, ಸಮಯ-ಶ್ರಮ ಆಧಾರಿತ ಕೆಲಸಗಳಿಲ್ಲ. ಇಂದಲ್ಲದಿದ್ದರೂ ನಾಳೆಗೆ ಸಂಬಳ ನಿಶ್ಚಿತವಾಗಿ ಖಾತೆಗೆ ಜಮೆಯಾಗುತ್ತದೆ ಎಂಬ ಭದ್ರತೆಯ ತರ್ಕ.

ಒಮ್ಮೆ, ನಾಡಿನ ಪ್ರಮುಖ ಪತ್ರಿಕೆಯೊಂದರ ಮುಖ್ಯಸ್ಥರೊಂದಿಗೆ ಮಾತನಾಡುತ್ತಿರುವಾಗ, ಪತ್ರಿಕೆಗಳಲ್ಲಿ ನುಸುಳುವ ತಪ್ಪು ಕಾಗುಣಿತ, ವ್ಯಾಕರಣಬದ್ಧವಲ್ಲದ ಶೈಲಿಯ ವರದಿಗಾರಿಕೆಯ ಕುರಿತು ಕೇಳಿದೆ. ಅವರು ‘ನಮ್ಮಲ್ಲಿ ವರದಿಗಾರರು, ಉಪ ಸಂಪಾದಕರಂತಹ ಹುದ್ದೆಗಳಿಗೆ ಬಹಳಷ್ಟು ಯುವಕ-ಯುವತಿಯರು ಅರ್ಜಿ ಸಲ್ಲಿಸುತ್ತಾರೆ. ಅವರಿಗೆ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಶುದ್ಧವಾಗಿ ಒಂದು ವಾಕ್ಯ ಬರೆದು ತೋರಿಸಲು ಸಹ ಸಾಧ್ಯವಾಗುತ್ತಿಲ್ಲ. ಕಾರಣ ಹುಡುಕುತ್ತಾ ಹೋದರೆ, ಮೂಲಭೂತವಾಗಿ ಶ್ರದ್ಧೆ, ಬದ್ಧತೆಯ ಕೊರತೆ. ಏನನ್ನಾದರೂ ಸಾಧಿಸಬೇಕೆಂಬ ಆಸಕ್ತಿ ಇಲ್ಲ, ಓದುವ ಬಯಕೆ ಇಲ್ಲ. ನಮಗೂ ಸರಿಯಾದವರನ್ನು ಹುಡುಕಿ ಹುಡುಕಿ ಸಾಕಾಗಿಹೋಗಿದೆ’ ಎಂದರು. ಇದು ಮಾಧ್ಯಮ ಕ್ಷೇತ್ರದ ಸಮಸ್ಯೆ ಮಾತ್ರವಲ್ಲ.

ಬೆಂಗಳೂರಿನಲ್ಲಿ ಜನಪ್ರಿಯ ಹೋಟೆಲೊಂದಕ್ಕೆ ಕೆಲವು ತಿಂಗಳುಗಳ ಹಿಂದೆ ಹೋಗಿದ್ದಾಗ, ಅಲ್ಲಿ ಸರದಿಯ ಮೇಲೆ ಊಟ-ಉಪಾಹಾರ ಸೇವಿಸುವಂತಹ ಪರಿಸ್ಥಿತಿ ಇತ್ತು. ಮೇಲಿನ ಮಹಡಿಯಲ್ಲಿ ಬಹಳಷ್ಟು ಸ್ಥಳಾವಕಾಶ ಇದ್ದರೂ ಅದನ್ನು ಬಳಸುತ್ತಿಲ್ಲ. ಕೋವಿಡ್ ನಂತರ ಕಾರ್ಮಿಕರ ಕೊರತೆಯಿಂದಾಗಿ ಮುಚ್ಚಿಬಿಟ್ಟಿದ್ದೇವೆ ಎಂದು ಅದರ ಮಾಲೀಕರು ಹೇಳಿದರು. ಬಹಳಷ್ಟು ಹೋಟೆಲ್‌ಗಳಲ್ಲಿ ಕಾರ್ಮಿಕರ ಕೊರತೆ ಜ್ವಲಂತ ಸಮಸ್ಯೆಯಾಗಿದೆ. ತತ್ಪರಿಣಾಮವಾಗಿ, ಇಂದು ನಮ್ಮ ರಾಜ್ಯದ ಬಹುತೇಕ ರೆಸ್ಟೋರೆಂಟ್‌ಗಳಲ್ಲಿ ಅನ್ಯ ರಾಜ್ಯಗಳ ಕಾರ್ಮಿಕರು, ವಿಶೇಷವಾಗಿ ‘ಬಿಮಾರು’ ರಾಜ್ಯಗಳವರೇ ತುಂಬಿಕೊಂಡಿದ್ದಾರೆ.

ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಕೂಲಿಯಾಳುಗಳ ಕೊರತೆಯಿಂದ ಸಣ್ಣಪುಟ್ಟ ರೈತರು ಜಮೀನುಗಳನ್ನೇ ಮಾರಾಟ ಮಾಡುತ್ತಿದ್ದಾರೆ. ರೈತರಿಗೆ ಹೆಣ್ಣು ಸಿಗುತ್ತಿಲ್ಲ ಎಂಬ ಕೂಗು ಒಂದೆಡೆಯಾದರೆ, ಉಳುವ, ಬಿತ್ತುವ, ಗೊಬ್ಬರ ಹಾಕುವ ಕೆಲಸಗಳಿಗೆ ಆಳುಗಳು ಸಿಗದೇ ರೈತವರ್ಗ ಹೈರಾಣಾಗಿದೆ. ಹಾಗಾಗಿ, ನಗರ ಪ್ರದೇಶಗಳ ಸನಿಹದ ಭೂಮಿಯನ್ನು ರೈತರು ಮಾರಾಟ ಮಾಡಿ ನಿರುಮ್ಮಳರಾಗುತ್ತಿದ್ದಾರೆ.

ಕೃಷಿ ಎನ್ನುವುದು ಬರೀ ಅವಿದ್ಯಾವಂತರ ಕೆಲಸ ಎನ್ನುವ ಕಲ್ಪನೆ ಇಂದು ವ್ಯಾಪಕವಾಗಿದೆ. ವಿಪರ್ಯಾಸವೆಂದರೆ, ಸಿರಿವಂತರು ಕೃಷಿಯನ್ನು ಒಂದು ಹವ್ಯಾಸವನ್ನಾಗಿ, ಉದ್ಯಮವನ್ನಾಗಿ ಮಾರ್ಪಡಿಸಿಕೊಂಡಿದ್ದಾರೆ.

ನನ್ನ ಸ್ನೇಹಿತ ಒಂದು ಮನೆ ಕಟ್ಟಿಸುತ್ತಿದ್ದ. ಕಾಮಗಾರಿ ಬಹಳ ವಿಳಂಬವಾಗಿ ನಡೆಯುತ್ತಿತ್ತು. ಕಾರಣ ಕೇಳಿದರೆ, ಮೇಸ್ತ್ರಿಯ ಉತ್ತರ ‘ಏನ್ ಮಾಡೋದು ಸಾರ್, ಅಡ್ವಾನ್ಸ್ ಇಸ್ಕೊತಾರೆ, ಫೋನ್ ಆಫ್ ಮಾಡ್ಕೊಂಡು ಊರು ಬಿಡ್ತಾರೆ. ಎಷ್ಟು ಅಂತ ತರೋದು, ಎಷ್ಟು ಅಂತ ಅಡ್ವಾನ್ಸ್ ಕೊಡೋದು, ಸಾಕಾಗಿಹೋಗಿದೆ’. ‘ಆಯುಷ್ಮಾನ್ ಭಾರತ್’ ಕಾರ್ಯಕ್ರಮದಡಿ ಆರೋಗ್ಯ ಕೇಂದ್ರಗಳಲ್ಲಿ ಯೋಗ ತರಬೇತಿದಾರರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ಆದರೆ ಹತ್ತು ಹುದ್ದೆಗಳಿಗೆ ಅರ್ಜಿ ಕರೆದರೆ, ಬರೀ ಇಬ್ಬರು ಅಥವಾ ಮೂವರು ಅರ್ಜಿ ಹಾಕುತ್ತಾರೆ.

ಒಮ್ಮೆ ಲಾರಿ ಮಾಲೀಕರೊಬ್ಬರೊಂದಿಗೆ ಮಾತನಾಡುತ್ತಿರುವಾಗ, ‘ವ್ಯವಹಾರ ಹೇಗೆ ನಡೆದಿದೆ?’ ಎಂದು ಕೇಳಿದೆ. ‘ಅಯ್ಯೋ ಬಿಡಿ ಸಾರ್, ಕ್ಲೀನರ್ ಕೆಲಸಕ್ಕೆ ಬರ್ತೀಯಾ ಅಂದ್ರೆ, ಮೊದಲು ಲಾರಿ ಟೈರ್ ನೋಡ್ತಾರೆ. ಹೊಸ ಟೈರ್ ಇದ್ರೆ ಮಾತ್ರ ಬರ್ತಾರೆ, ಹಳೆ ಟೈರ್ ಇದ್ರೆ ಪದೇ ಪದೇ ಪಂಕ್ಚರ್ ಆಗುತ್ತೆ, ಟೈರ್ ಚೇಂಜ್ ಮಾಡಬೇಕಾಗುತ್ತೆ ಅಂತ, ‘ನಾಳೆ ಹೇಳ್ತೀನಿ’ ಎಂದು ಹೇಳಿ ಮತ್ತೆ ಬರೋದೇ ಇಲ್ಲ. ಹಾಗಾಗಿ, ಲಾರಿಗಳ ಸಂಖ್ಯೆ ಕಡಿಮೆ ಮಾಡ್ಕೊಳ್ತಾ ಇದೀನಿ’ ಅಂದರು.

ಉದ್ಯೋಗದ ಕೊರತೆಗಿಂತ ಹೆಚ್ಚಾಗಿ ಶ್ರದ್ಧೆ, ಬದ್ಧತೆ, ಪರಿಶ್ರಮದ ಕೊರತೆಯೇ ಎಲ್ಲೆಡೆ ಇದೆ. ಅಡ್ಡಮಾರ್ಗದಲ್ಲಿ, ಅತ್ಯಲ್ಪ ಸಮಯದಲ್ಲಿ ಹೆಚ್ಚು ಹಣ ಸಂಪಾದಿಸಬೇಕೆಂಬ ಆಲೋಚನೆ ಉಳ್ಳವರೇ ಅಧಿಕ. ಕಲಿಯುವ ಕುತೂಹಲ, ದಕ್ಷತೆಯಿಂದ ದುಡಿಯುವ ಆಸಕ್ತಿ, ಏನಾದರೂ ಸಾಧಿಸಬೇಕೆಂಬ ಛಲ ಇದ್ದರೆ, ಇಂಥ ಕ್ಷೇತ್ರದಲ್ಲಿ ಮಾತ್ರ ನಾನು ಕೆಲಸ ಮಾಡುವುದು ಎಂಬ ನಿಲುವಿನಿಂದ ಹೊರಬಂದರೆ, ಹೊರದೇಶಕ್ಕೆ ಹೋಗಬೇಕಾದ ಅನಿವಾರ್ಯ ಸ್ಥಿತಿ ಇಲ್ಲದೆ ನಮ್ಮ ದೇಶದಲ್ಲಿಯೇ ನೆಮ್ಮದಿಯಾಗಿ ಬದುಕು ಸಾಗಿಸಬಹುದು.

ವಾಚಕರ ವಾಣಿ

ಇಂಗ್ಲಿಷ್ ಮಾಧ್ಯಮ: ಬೋಧಕರು ಯಾರು?

500 ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯುವುದಾಗಿ ಸರ್ಕಾರ ಇತ್ತೀಚೆಗೆ ಘೋಷಿಸಿರುವುದು ಸರಿಯಷ್ಟೆ. ಇಂಗ್ಲಿಷ್ ಮಾಧ್ಯಮಕ್ಕೆ ಬೇಡಿಕೆ ಹೆಚ್ಚಾಗಿರುವುದಕ್ಕೆ ಸರ್ಕಾರದ ಈ ಬಗೆಯ ಸ್ಪಂದನ ಸರಿಯಾದುದಾಗಿದೆ. ಆದರೆ, ಈ ಮೊದಲು ತೆರೆದಿರುವ ಸರ್ಕಾರಿ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸುವ ಶಿಕ್ಷಕರನ್ನು ನೇಮಿಸುವ ವ್ಯವಸ್ಥೆ ಆಗಿದೆಯೇ? ಇವು ಪರಿಣಾಮಕಾರಿ ಇಂಗ್ಲಿಷ್ ಮಾಧ್ಯಮ ಶಾಲೆಗಳಾಗಿ ರೂಪುಗೊಳ್ಳುತ್ತಿವೆಯೇ? ಇಂತಹ ಪ್ರಶ್ನೆಗಳನ್ನು ಸರ್ಕಾರ ಕೇಳಿಕೊಳ್ಳಬೇಕಾಗಿದೆ. ಸರ್ಕಾರಿ ಆದರ್ಶ ವಿದ್ಯಾಲಯಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಶಿಕ್ಷಕರೇ ಇಂಗ್ಲಿಷ್ ಮಾಧ್ಯಮದಲ್ಲೂ ಬೋಧಿಸುತ್ತಿರುವುದು ದುರದೃಷ್ಟಕರ.

ವೀಣಾ ಎಚ್., ಜಮಖಂಡಿ

ಚುನಾವಣಾ ಬಾಂಡ್: ಗ್ರಹಿಸಬೇಕಿದೆ ಅಂತರ್‌ಸಂಬಂಧ

ಚುನಾವಣಾ ಬಾಂಡ್ ಯೋಜನೆಯನ್ನು ರದ್ದುಪಡಿಸುತ್ತ ಸುಪ್ರೀಂ ಕೋರ್ಟ್ ತೀರ್ಪು ನೀಡಿದಾಗ ಇಬ್ಬರು ನೆನಪಿಗೆ ಬಂದರು: ಎಲ್.ಸಿ.ಜೈನ್ ಮತ್ತು ಅರುಣ್ ಜೇಟ್ಲಿ. ರಾಜಕಾರಣದಲ್ಲಿ ಪಾರದರ್ಶಕತೆಯ ಪ್ರಬಲ ಪ್ರತಿಪಾದಕರಾಗಿದ್ದ ಜೈನ್, ಒಬ್ಬರ ಕಣ್ಣಿಗೆ ಪಟ್ಟಿ ಕಟ್ಟಿ, ‘ಇವರು ಹೀಗೇ ವೋಟು ಹಾಕಬೇಕೆ?’ ಎಂದು ಪ್ರಶ್ನಿಸುತ್ತಿದ್ದರು. 2010ರ ನವೆಂಬರ್‌ನಲ್ಲಿ ನಿಧನರಾದ ಇವರು ಬದುಕಿದ್ದರೆ ಬಾಂಡ್‌ಗಳನ್ನು ವಿರೋಧಿಸುತ್ತಿದ್ದರು, ಈ ತೀರ್ಪಿಗೆ ಹರ್ಷಪಡುತ್ತಿದ್ದರು. ಜೇಟ್ಲಿ ಇದರ ಪರವಾಗಿ ಏಕೆ ವಕೀಲಿಕೆ ಮಾಡಿದರೋ ಗೊತ್ತಿಲ್ಲ. ನೋಟ್ ರದ್ದತಿ ವಿಷಯದಲ್ಲಿ ತಮ್ಮ ಮಿತ್ರನ ಬೆಂಬಲಕ್ಕೆ ನಿಂತರು.

2019ರ ಆಗಸ್ಟ್‌ನಲ್ಲಿ ನಿಧನರಾದ ಇವರು ಈಗ ಬದುಕಿದ್ದರೆ ‘ಅಸಾಂವಿಧಾನಿಕ’ ಎಂಬ ಸ್ಪಷ್ಟ ತೀರ್ಪು ‘ಪಕ್ಷ ನಿಷ್ಠೆಗಿಂತ ಮತದಾರರತ್ತ ಉತ್ತರದಾಯಿತ್ವ ಹೆಚ್ಚು ಮುಖ್ಯ’ ಎಂಬುದನ್ನು ಮನವರಿಕೆ ಮಾಡಿಕೊಳ್ಳುತ್ತಿದ್ದರೇನೊ. ಪಾರದರ್ಶಕತೆ ಇಲ್ಲದಿದ್ದರೆ ಕೊಟ್ಟು– ತೆಗೆದುಕೊಳ್ಳುವಿಕೆ ನಡೆದು, ಗೆಲ್ಲಲು ಸಮಾನ ಅವಕಾಶ ಇರುವ ನ್ಯಾಯೋಚಿತ ಸ್ಥಿತಿ ಸೃಷ್ಟಿಯಾಗಲಾರದು.

ಕೇಂದ್ರ ಹಾಗೂ ಬಹುಪಾಲು ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಪಕ್ಷ ಈ ಬಾಂಡ್‌ಗಳ ಮುಖ್ಯ ಫಲಾನುಭವಿ (ಶೇ 55ರಷ್ಟು ಪ್ರಮಾಣ). ಅದರ ವಾರ್ಷಿಕ ಆದಾಯದ ಗಣನೀಯ ಪಾಲು- ₹ 2,360 ಕೋಟಿಯಲ್ಲಿ ₹ 1,300 ಕೋಟಿ, 2022-23ನೆಯ ಸಾಲು- ಇದರಿಂದಲೇ ಬಂದಿದೆ. ಈಗ ವಿತರಣೆ ಬಂದ್ ಆದ್ದರಿಂದ ‘ದಾನಿ’ಗಳು ಬೇರೆ ದಾರಿ ಹುಡುಕುತ್ತಾರೆ. ಈ ವರ್ಷದ ಏಪ್ರಿಲ್ ವೇಳೆಗೆ ಚುನಾವಣಾ ಬಾಂಡ್‌ಗಳ ಖರೀದಿದಾರರ ಪೂರ್ಣ ವಿವರ ದೊರೆತಾಗ ಮಾಡಬೇಕಾದ ಇನ್ನೊಂದು ಕೆಲಸವೆಂದರೆ ‘ಪಿಎಂ ಕೇರ್ಸ್ ಫಂಡ್’ ದೇಣಿಗೆಗಳ ಜತೆಗೆ ಇದನ್ನು ತಾಳೆ ನೋಡುವುದು.

ಒಂದು ಅಂಶವಂತೂ ಸ್ಪಷ್ಟ: 2019ರ ಸೆಪ್ಟೆಂಬರ್‌ನಲ್ಲಿ ಕಾರ್ಪೊರೇಟ್ ತೆರಿಗೆ ದರ ಕಡಿತಗೊಳಿಸಿದಾಗ, ಅವು ಹೂಡಿಕೆ ಹೆಚ್ಚಿಸಿ ದೇಶದ ಆರ್ಥಿಕತೆಗೆ ಕೊಡುಗೆ ನೀಡುತ್ತವೆ ಎಂದು ನಿರೀಕ್ಷಿಸಲಾಗಿದ್ದುದು ಅಷ್ಟು ಸಾಕಾರವಾಗಿಲ್ಲ. ಅವುಗಳ ಲಾಭದಲ್ಲಿ ಏರಿಕೆಯಾಗಿದೆ, ಆದರೆ ಒಟ್ಟು ಕಾರ್ಪೊರೇಟ್ ತೆರಿಗೆಯ ಪ್ರಮಾಣ ವೈಯಕ್ತಿಕ ಆದಾಯ ತೆರಿಗೆಯ ಒಟ್ಟಾರೆ ಶೇಕಡಾವಾರು ಪಾಲಿಗಿಂತ ಕಡಿಮೆ ಇದೆ. ದೇಶದ ಮತದಾರ ಈ ಎಲ್ಲ ಅಂಶಗಳ ಅಂತರ್‌ಸಂಬಂಧಗಳನ್ನು ಗ್ರಹಿಸಬೇಕಾಗಿದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ನಿಸರ್ಗ ರಕ್ಷಣೆಗೆ ಬೇಕು ನಿಸರ್ಗಾಲಯ

ರಾಜ್ಯದ ಹಲವು ಜಿಲ್ಲೆಗಳಲ್ಲಿ ತಾರಾಲಯಗಳನ್ನು ತೆರೆಯುವುದಾಗಿ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಿದೆ. ಮಕ್ಕಳಿಗೆ ಆಕಾಶ, ನಕ್ಷತ್ರ ತೋರಿಸುವುದಕ್ಕಿಂತ ಹೆಚ್ಚಾಗಿ, ಮಣ್ಣು, ಮಳೆನೀರು, ಸೌರಶಕ್ತಿ, ಪವನಶಕ್ತಿ, ಮರಗಳ ಬಗ್ಗೆ ತಿಳಿಸುವ ನಿಸರ್ಗಾಲಯಗಳನ್ನು ಸ್ಥಾಪಿಸುವುದು ಒಳಿತು. ಇದು, ಮಕ್ಕಳಲ್ಲಿ ಬೌದ್ಧಿಕ ಶಕ್ತಿಯನ್ನು ಉತ್ತೇಜಿಸಲು ಸಹಕಾರಿಯಾಗಲಿದೆ. ಈ ಕ್ರಮದಿಂದ, ನಿಸರ್ಗ ನೀಡಿರುವ ಕೊಡುಗೆಯ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಹೆಚ್ಚುವುದರ ಜೊತೆಗೆ ನಿಸರ್ಗವನ್ನು ರಕ್ಷಿಸುವ ಹೊಣೆಗಾರಿಕೆಯೂ ಅವರಲ್ಲಿ ಬರುತ್ತದೆ.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಸೇಡಿನ ಕರೆ ಮುಖ್ಯವಾಗಲಿಲ್ಲವೇಕೆ?

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಏಕವಚನ ಪ್ರಯೋಗಿಸಿದ ಪ್ರಕರಣದಲ್ಲಿ ಸಂಸದ ಅನಂತ ಕುಮಾರ ಹೆಗಡೆ ಅವರಿಗೆ ಹೈಕೋರ್ಟ್‌ನ ‘ಶಾಸಕರು– ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠ ಎಚ್ಚರಿಕೆ ನೀಡಿರುವುದರ ಜೊತೆಗೆ, ‘ಸಂಸದರು ಉತ್ತಮ ವಾಗ್ಮಿ ಇರಬಹುದು, ಹಾಗೆಂದಮಾತ್ರಕ್ಕೆ ಅಸಂಬದ್ಧ ಪದಗಳ ಪ್ರಯೋಗ ಸಲ್ಲದು’ ಎಂದು ಹೇಳಿದ್ದಾಗಿ ವರದಿಯಾಗಿದೆ.

ಇದೇ ಸಂಸದರು ಧರ್ಮವೊಂದನ್ನು ಎಲ್ಲ ಸಮಸ್ಯೆಗಳ ಮೂಲ ಎಂದು ಇತ್ತೀಚೆಗೆ ದೂರಿದ್ದು ಸಹ ವರದಿಯಾಗಿತ್ತು. ಮುಖ್ಯಮಂತ್ರಿಯವರ ವಿರುದ್ಧ ಏಕವಚನ ಬಳಸಿದ ಸಂದರ್ಭದಲ್ಲಿ ಸಂಸದರು ಸಮುದಾಯವೊಂದಕ್ಕೆ ಸೇರಿದ ಧಾರ್ಮಿಕ ಕ್ಷೇತ್ರಗಳನ್ನು ವಶಪಡಿಸಿಕೊಳ್ಳುವ ಬೆದರಿಕೆಯನ್ನು ಸಹ ಒಡ್ಡಿದ್ದರು. ಹೀಗೆ ತಮ್ಮ ರಾಜಕೀಯ ಜೀವನದುದ್ದಕ್ಕೂ ಧ್ರುವೀಕರಣವೊಂದನ್ನೇ ಗುರಿಯಾಗಿಸಿ ಮಾತನಾಡುವ ಹೆಗಡೆ ಅವರು ಸಂಸತ್ತಿನಲ್ಲಾಗಲೀ, ಸಾರ್ವಜನಿಕ ವೇದಿಕೆಯಲ್ಲಾಗಲೀ ಜನರ ಸಮಸ್ಯೆಗಳ ಕುರಿತು ಚರ್ಚಿಸಿದ್ದು ಅಪರೂಪ. ತಮ್ಮ ಮಾತಿನ ಪರಿಣಾಮದ ಕುರಿತು ಕಿಂಚಿತ್ತೂ ಚಿಂತಿಸದ ಈ ಸಂಸದರನ್ನು ಉತ್ತಮ ವಾಗ್ಮಿ ಎಂದು ಪರಿಗಣಿಸುವುದು ದುರಂತ.

ಇನ್ನು, ಸಂಸದರು ನೀಡಿದ ಸೇಡಿನ ಕರೆಗಿಂತ ಏಕವಚನ ಬಳಕೆಯೇ ರಾಜಕಾರಣಿಗಳು ಹಾಗೂ ಬಹುತೇಕ ಮಾಧ್ಯಮಗಳಿಗೆ ಪ್ರಮುಖವಾಗಿ ಕಂಡಿರುವುದು ಅಚ್ಚರಿಯೇನಲ್ಲ. ಇಂದು ಹುಸಿ ಘನತೆ, ಹುಸಿ ಸಂಸ್ಕೃತಿಯಂತಹವುಗಳ ನಡುವೆ ನೈತಿಕತೆ ಕಳೆದುಹೋಗುತ್ತಿರುವುದಕ್ಕೆ ಇದು ನಿದರ್ಶನವಷ್ಟೇ.

ಸುನೀಲ ನಾಯಕ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಗ್ಯಾರಂಟಿ ಹುಳುಕು ಮುಚ್ಚಿಡಲು ಸಿಎಂ ಬೋಗಸ್ ವಾದ’

ಪ್ರಜಾವಾಣಿ ಸಂದರ್ಶನ

ಮಂಜುನಾಥ ಹೆಬ್ಬಾರ್

ನವದೆಹಲಿ: ‘ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಪಂಚ ಗ್ಯಾರಂಟಿಗಳ ಅನುಷ್ಠಾನಕ್ಕಾಗಿ ರಾಜ್ಯದ ಸಂಪನ್ಮೂಲ ಬರಿದು ಮಾಡುತ್ತಿದೆ. ಉದ್ಯೋಗ ಸೃಷ್ಟಿಯಂತಹ ಉಪಕ್ರಮಗಳನ್ನು ಕೈಗೆತ್ತಿಕೊಳ್ಳಲು ರಾಜ್ಯ ಸರ್ಕಾರದ ಬಳಿ ಹಣವೇ ಇಲ್ಲ. ತಮ್ಮ ಲೋಪಗಳನ್ನೆಲ್ಲ ಮರೆಮಾಚಿ ಲೋಕಸಭಾ ಚುನಾವಣೆಯ ಹೊತ್ತಿನಲ್ಲಿ ಜನರ ಗಮನ ಬೇರೆಡೆಗೆ ಸೆಳೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರದ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ. ಇದರಲ್ಲಿ ಜನರ ಹಿತಾಸಕ್ತಿ ಕಾಪಾಡುವ ಉದ್ದೇಶ ಇಲ್ಲ. ಬರೀ ರಾಜಕೀಯ ಮಾಡುವ ದುರುದ್ದೇಶ ಇದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕಿಡಿಕಾರಿದರು.

ತೆರಿಗೆ ಪಾಲು ಹಂಚಿಕೆ, ಅನುದಾನ, ನೆರವು ನೀಡಿಕೆಯ ವಿಷಯದಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ನಿರಂತರ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಚಳವಳಿ ನಡೆಸಿ ರಾಷ್ಟ್ರದ ಗಮನ ಸೆಳೆದಿದೆ. ಕೇಂದ್ರದಿಂದ ಅನ್ಯಾಯವಾಗಿದೆ ಎಂದು ರಾಜ್ಯ ಬಜೆಟ್‌ನಲ್ಲೂ ಪ್ರಸ್ತಾಪಿಸಿದೆ.

‘ಪ್ರಜಾವಾಣಿ’ಗೆ ವಿಶೇಷ ಸಂದರ್ಶನ ನೀಡಿರುವ ನಿರ್ಮಲಾ ಸೀತಾರಾಮನ್, ‘ಕೇಂದ್ರದ ಬಿಜೆಪಿ ಸರ್ಕಾರದಿಂದ ರಾಜ್ಯಕ್ಕೆ ಯಾವುದೇ ಅನ್ಯಾಯವಾಗಿಲ್ಲ. ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಿಲ್ಲ ಎಂಬುದು ಕಾಂಗ್ರೆಸ್‌ಗೆ ಗೊತ್ತಿದೆ. ಹೀಗಾಗಿ, ಪದೇ ಪದೇ ಬೋಗಸ್ ವಾದಗಳನ್ನು ಎತ್ತುವ ಹಾಗೂ ಆಪಾದನೆಗಳನ್ನು ಮಾಡುವ ಮೂಲಕ ತಮ್ಮ ಹುಳುಕು ಮುಚ್ಚಿಡಲು ಸಿದ್ದರಾಮಯ್ಯ ಹೊರಟಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

ಚಿತ್ರಗಳು: ಪಿಟಿಐ

- **ಕೇಂದ್ರ ಸರ್ಕಾರದಿಂದ ತೆರಿಗೆ ಪಾಲು ಹಂಚಿಕೆ, ಸೆಸ್, ಸರ್‌ಚಾರ್ಜ್ ಮತ್ತು ವಿಶೇಷ ಅನುದಾನದ ನೀಡಿಕೆಯಲ್ಲಿ 2017ರಿಂದ ಇಲ್ಲಿಯವರೆಗೆ ರಾಜ್ಯಕ್ಕೆ ₹1,87,867 ಕೋಟಿ ನಷ್ಟ ಆಗಿದೆ ಎಂದು ಸಿದ್ದರಾಮಯ್ಯ ಆರೋಪಿಸಿದ್ದಾರೆ. ತೆರಿಗೆ ಪಾಲು ಹಂಚಿಕೆಯಲ್ಲಿ ತಾರತಮ್ಯ ಆಗಿದೆ ಎಂದು ಕೇರಳ ಹಾಗೂ ತಮಿಳುನಾಡು ಸರ್ಕಾರಗಳು ಧ್ವನಿ ಎತ್ತಿವೆ. ದಕ್ಷಿಣದ ರಾಜ್ಯಗಳಿಗೆ ಘೋರ ಅನ್ಯಾಯವಾಗಿರುವುದು ನಿಜವೇ?**

ನಿರ್ಮಲಾ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚರ್ಚೆಗಳು ನಡೆಯಬೇಕು. ಇದು ಕೆಟ್ಟದ್ದಲ್ಲ. ಪರ–ವಿರೋಧ ವಾದಗಳು ನಡೆಯಲೇಬೇಕು. ಆದರೆ, ಬಿಜೆಪಿಯೇತರ ಸರ್ಕಾರಗಳ ಮೇಲೆ ಕೇಂದ್ರ ಸರ್ಕಾರವು ದ್ವೇಷ ಸಾಧಿಸುತ್ತಿದೆ ಎಂಬ ವಾದವನ್ನು ಒಪ್ಪಲು ಸಾಧ್ಯವಿಲ್ಲ. ಸಿದ್ದರಾಮಯ್ಯ ಅವರು ಮಾಡುತ್ತಿರುವುದು ಇದನ್ನೇ. ರಾಜ್ಯದ ಮುಖ್ಯಮಂತ್ರಿಯೇ ಖುದ್ದು ಆರೋಪ ಮಾಡಿದಾಗ ರಾಜ್ಯದ ಜನರಿಗೆ ಅನುಮಾನ ಮೂಡುವುದು ಸಹಜ. ಜತೆಗೆ, ಅನುದಾನ ಹಂಚಿಕೆಯಲ್ಲಿ ತಾರತಮ್ಯವಾಗಿದ್ದರೆ ಕೇಂದ್ರ ಹಣಕಾಸು ಆಯೋಗದ ಕಡೆಗೆ ಬೊಟ್ಟು ಮಾಡಬೇಕು. ಅದು ಬಿಟ್ಟು ಕೇಂದ್ರ ಸರ್ಕಾರದ ಮೇಲೆ ದೋಷಾರೋಪ ಮಾಡುತ್ತಿರುವುದು ಜವಾಬ್ದಾರಿಯುತ ನಡವಳಿಕೆ ಅಲ್ಲ.

- **ಕೇಂದ್ರದ ಬಿಜೆಪಿ ಸರ್ಕಾರವು ಚಿನ್ನದ ಮೊಟ್ಟೆ ಇಡುವ ಕೋಳಿಯನ್ನೇ ಕೊಯ್ಯುವ ಕೆಲಸ ಮಾಡುತ್ತಿದೆ ಹಾಗೂ ಹಾಲು ಕೊಡುವ ಹಸುವಿನ ಕೆಚ್ಚಲು ಕೊಯ್ಯಲು ಹೊರಟಿದೆ ಎಂದು ಸಿದ್ದರಾಮಯ್ಯ ದೂರಿದ್ದಾರೆ. ಅಭಿವೃದ್ಧಿ ಹೊಂದಿದ ಉತ್ತರದ ರಾಜ್ಯಗಳಿಗೂ ಹೆಚ್ಚಿನ ಅನುದಾನ ನೀಡಲಾಗುತ್ತಿದೆ ಎಂಬುದು ಅವರ ಆಕ್ಷೇಪ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆಯೇನು?**

ನಿರ್ಮಲಾ: ಕರ್ನಾಟಕದಲ್ಲಿ ಆರು ತಿಂಗಳ ಹಿಂದಿನವರೆಗೂ ಚೆನ್ನಾಗಿತ್ತು ಎಂದು ಲೋಕಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ಅವರೇ ಹೇಳಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಎಲ್ಲವೂ ಚೆನ್ನಾಗಿತ್ತು ಎಂಬುದು ಅದರ ಅರ್ಥ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ಅಭೂತಪೂರ್ವ ಯಶಸ್ಸು ಗಳಿಸಿತ್ತು. ಈಗ ಎಲ್ಲವೂ ಸಮಸ್ಯೆ ಆಗಿದೆ. ಗ್ಯಾರಂಟಿಗಳಿಂದಾಗಿ ಅಭಿವೃದ್ಧಿ ಕಾರ್ಯಗಳಿಗೆ ದುಡ್ಡಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಮುಖ್ಯಮಂತ್ರಿ ಅವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಅವರೇ ಹೇಳಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವ ಬಗ್ಗೆ ಬೇರೇನೂ ಸಾಕ್ಷ್ಯ ಬೇಕು. ಗ್ಯಾರಂಟಿಗಳ ಹೆಸರಿನಲ್ಲಿ ಜನರಲ್ಲಿ ಕೀಳರಿಮೆ ತುಂಬಲು ಸಿದ್ದರಾಮಯ್ಯ ಹೊರಟಿದ್ದಾರೆ. ನಿಮಗೆ ಒಂದಿಷ್ಟು ಹಣ ಎಸೆದಿದ್ದೇನೆ ಹಾಗೂ ಯಾವುದೇ ಅಭಿವೃದ್ಧಿ ಚಟುವಟಿಕೆಗಳನ್ನು ಕೇಳಬೇಡಿ ಎಂದು ಸಿದ್ದರಾಮಯ್ಯ ಪರೋಕ್ಷವಾಗಿ ಸಂದೇಶ ರವಾನಿಸಿದ್ದಾರೆ.

ದೇಶದಲ್ಲಿ ಅತೀ ಹೆಚ್ಚು ತೆರಿಗೆ ನೀಡುತ್ತಿರುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ ಎರಡನೇ ಸಾಲಿನಲ್ಲಿದ್ದು, ಅದಕ್ಕೆ ತಕ್ಕಂತೆ ತೆರಿಗೆ ಪಾಲು ನೀಡಬೇಕು ಎಂದು ಸಿದ್ದರಾಮಯ್ಯ ವಾದ ಮುಂದಿಟ್ಟಿದ್ದಾರೆ. ಈ ವಾದವನ್ನೇ ನಾಳೆ ಬೆಂಗಳೂರಿನ ಜನರು ಮುಂದಿಟ್ಟರೆ ನೀವು ಏನು ಮಾಡುತ್ತೀರಿ. ರಾಜ್ಯದ ಖಜಾನೆಗೆ ಬೆಂಗಳೂರಿನಿಂದ ಶೇ 70ರಷ್ಟು ಹಣ ಸೇರುತ್ತಿದೆ. ಇದರಲ್ಲಿ ನಮಗೆ ಶೇ 50ರಷ್ಟು ಪಾಲನ್ನು ಕೊಡಿ ಎಂದು ಬೆಂಗಳೂರಿನ ನಾಗರಿಕರು ಚಳವಳಿ ಆರಂಭಿಸಿದರು ಎಂದಿಟ್ಟುಕೊಳ್ಳಿ. ಚಿತ್ರದುರ್ಗ, ಕೋಲಾರ ಹಾಗೂ ಬೀದರ್‌ಗೆ ಕೊಡಬೇಡಿ ಎಂದರೆ ಅದಕ್ಕೆ ನಿಮ್ಮ ಉತ್ತರವೇನು? ದೇಶದ ಹಾಗೂ ರಾಜ್ಯದ ಎಲ್ಲ ಪ್ರದೇಶವೂ ಅಭಿವೃದ್ಧಿ ಆಗಬೇಕಲ್ಲವೇ?

ಕೇರಳ ಹಾಗೂ ತಮಿಳುನಾಡು ಸರ್ಕಾರಗಳು ಎತ್ತಿರುವ ಕೆಲವೊಂದು ವಿಚಾರಗಳ ಬಗ್ಗೆ ನನ್ನ ಸಹಮತ ಇದೆ. ಈ ಬಗ್ಗೆ ಮುಕ್ತ ಚರ್ಚೆ ಆಗಲಿ. ಈ ರಾಜ್ಯಗಳು ಕೇಂದ್ರ ಹಣಕಾಸು ಆಯೋಗದ ಜತೆಗೆ ಚರ್ಚಿಸಲಿ. 16ನೇ ಹಣಕಾಸು ಆಯೋಗ ರಚನೆಯಾಗಿದೆ. ಆಯೋಗದ ಕಾರ್ಯವ್ಯಾಪ್ತಿಗೆ ಚೌಕಟ್ಟು ಹಾಕಲಾಗಿದೆ. ಆಯೋಗದವರು ಒಂದು ಸಭೆಯನ್ನೂ ನಡೆಸಿದ್ದಾರೆ. ಶೀಘ್ರದಲ್ಲಿ ರಾಜ್ಯಗಳಿಗೆ ಭೇಟಿ ನೀಡಲಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳು ದತ್ತಾಂಶಗಳೊಂದಿಗೆ ವಾದ ಮುಂದಿಡಲಿ. ಕರ್ನಾಟಕ ಸರ್ಕಾರವು ಆಯೋಗ ಬರುವ ತನಕ ಕಾಯಬಹುದಿತ್ತು. ಆದರೆ, ಲೋಕಸಭಾ ಚುನಾವಣೆಯ ಕಾರಣಕ್ಕೆ ತೆರಿಗೆ ಅನ್ಯಾಯದ ಗದ್ದಲ ಎಬ್ಬಿಸಿದೆ. ರಾಜ್ಯಗಳ ಜತೆಗೆ ಸಮಾಲೋಚಿಸಿದ ಬಳಿಕ ಆಯೋಗವು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ. ಆಯೋಗದ ಶಿಫಾರಸುಗಳನ್ನು ಕೇಂದ್ರ ಸರ್ಕಾರ ಸ್ವೀಕರಿಸಲಿದೆ. ವ್ಯಾಪ್ತಿ ಮೀರಿ ಆಯೋಗವು ಶಿಫಾರಸುಗಳನ್ನು ಮಾಡಿದರೆ ಅದನ್ನು ಒಪ್ಪಲು ಸಾಧ್ಯವಿಲ್ಲ.

- **ಕರ್ನಾಟಕ ರಾಜ್ಯಕ್ಕೆ ₹5,900 ಕೋಟಿ ವಿಶೇಷ ಅನುದಾನ ನೀಡಲು 15ನೇ ಹಣಕಾಸು ಆಯೋಗ ಶಿಫಾರಸು ಮಾಡಿತ್ತು. ಆದರೆ, ನಿರ್ಮಲಾ ಸೀತಾರಾಮನ್ ಅವರು ಈ ಅನುದಾನ ತಡೆ ಹಿಡಿದರು ಎಂದು ಕಾಂಗ್ರೆಸ್ ನಾಯಕರು ಆರೋಪ ಮಾಡುತ್ತಿದ್ದಾರಲ್ಲ?**

ನಿರ್ಮಲಾ: ರಾಜ್ಯಕ್ಕೆ ವಿಶೇಷ ಅನುದಾನ ನೀಡಲು 15ನೇ ಹಣಕಾಸು ಆಯೋಗವು ಮಧ್ಯಂತರ ವರದಿಯಲ್ಲಿ ಶಿಫಾರಸು ಮಾಡಿದ್ದು ನಿಜ. ಆದರೆ, ಅಂತಿಮ ವರದಿಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿರಲಿಲ್ಲ. ನಾನು ಮಧ್ಯಂತರ ವರದಿಯನ್ನು ಒಪ್ಪಬೇಕಾ ಅಥವಾ ಅಂತಿಮ ವರದಿಯನ್ನು ಒಪ್ಪಬೇಕಾ ಎಂಬುದನ್ನು ನೀವೇ ಹೇಳಿ.

ಆಯೋಗದ ಶಿಫಾರಸಿನ ಪ್ರಕಾರವೇ ರಾಜ್ಯಕ್ಕೆ ತೆರಿಗೆ ಪಾಲು ನೀಡಲಾಗಿದೆ. ಅದರಲ್ಲಿ ಯಾವುದೇ ಅನ್ಯಾಯವಾಗಿಲ್ಲ. ನಯಾಪೈಸೆ ಬಾಕಿ ಇಲ್ಲ. ಜಿಎಸ್‌ಟಿ ಪರಿಹಾರವನ್ನು ಐದು ವರ್ಷ ನೀಡಲಾಗಿದೆ. ಐದು ವರ್ಷಗಳ ನಂತರ ನೀಡಲು ಸಂವಿಧಾನದಲ್ಲಿ ಅವಕಾಶ ಇಲ್ಲ. ಕೋವಿಡ್ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯದ ವರಮಾನ ಸೊನ್ನೆ ಆಗಿತ್ತು. ಆ ಸಂದರ್ಭದಲ್ಲಿ ಆಯೋಗದ ಶಿಫಾರಸುಗಳನ್ನು ಮೀರಿ ರಾಜ್ಯಗಳಿಗೆ ವಿಶೇಷ ನೆರವು ನೀಡಲಾಗಿದೆ. ವಿಶೇಷ ನೆರವಿನ ರೂಪದಲ್ಲಿ 50 ವರ್ಷಗಳ ಬಡ್ಡಿ ರಹಿತ ಸಾಲ ನೀಡಲಾಗಿದೆ. ಕರ್ನಾಟಕಕ್ಕೆ ₹6,200 ಕೋಟಿ ವಿಶೇಷ ಅನುದಾನ ಸಿಕ್ಕಿದೆ.

- **ಸೆಸ್ ಮತ್ತು ಸರ್‌ಚಾರ್ಜ್‌ನಿಂದ ಸಂಗ್ರಹ ಆಗಿದ್ದ ತೆರಿಗೆಯಲ್ಲಿ ಒಂದು ರೂಪಾಯಿಯನ್ನೂ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಕೊಡುವುದಿಲ್ಲ. ಅತಿ ಹೆಚ್ಚು ತೆರಿಗೆ ಸಂಗ್ರಹಿಸಿ, ಕೇಂದ್ರಕ್ಕೆ ನೀಡುವ ಕರ್ನಾಟಕಕ್ಕೆ ಅನ್ಯಾಯ ಆಗುವುದನ್ನು ತಡೆಯಲು ಸಂವಿಧಾನ ತಿದ್ದುಪಡಿ ಮಾಡಿ ಸೆಸ್ ಮತ್ತು ಸರ್‌ಚಾರ್ಜ್‌ನಲ್ಲೂ ಪಾಲು ನೀಡಬೇಕು ಎಂದು ಸಿದ್ದರಾಮಯ್ಯ ಬೇಡಿಕೆ ಮುಂದಿಟ್ಟಿದ್ದಾರೆ. ಈ ಬಗ್ಗೆ ನಿಮ್ಮ ನಿಲುವು ಏನು?**

ನಿರ್ಮಲಾ: ರಾಷ್ಟ್ರೀಯ ಹೆದ್ದಾರಿ, ಬಂದರುಗಳು, ರೈಲು ಮಾರ್ಗ, ವಿಮಾನ ನಿಲ್ದಾಣಗಳ ಅಭಿವೃದ್ಧಿಗೆ ಹಣ ಕೊಡುತ್ತಿರುವುದು ಯಾರು ಸಿದ್ದರಾಮಯ್ಯ ಅವರೇ. ಬೆಂಗಳೂರು ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್‌ಗೆ ಎಲ್ಲಿಂದ ಹಣ ಬಂತು ಎಂಬುದನ್ನು ಸ್ವಲ್ಪ ಹೇಳುತ್ತೀರಾ. ಯುಪಿಎ ಸರ್ಕಾರ ಇದ್ದಾಗಲೂ ಇದೇ ವ್ಯವಸ್ಥೆ ಇತ್ತಲ್ಲ. ಆಗ ಯಾಕೆ ಧ್ವನಿ ಎತ್ತಲಿಲ್ಲ ಸಿದ್ದರಾಮಯ್ಯ ಅವರೇ? ❖

‘ಇದು ಜನರ ಚಳವಳಿಯಲ್ಲ’

‘ಬಾಲ್ಯದಲ್ಲಿ ನಾನು ಉಡುಪಿಯಲ್ಲಿದ್ದೆ. ಬೆಂಗಳೂರಿನಲ್ಲಿ ನನ್ನ ಸಂಬಂಧಿಕರಿದ್ದಾರೆ. ನನಗೆ ತಿಳಿದ ಮಟ್ಟಿಗೆ ಕರ್ನಾಟಕದ ಜನರು ತುಂಬಾ ಒಳ್ಳೆಯವರು, ಆತ್ಮೀಯರು ಹಾಗೂ ಅತಿಥಿ ಸತ್ಕಾರ ಮಾಡುವವರು. ತಾವು ಭಾರತೀಯರು ಎಂಬ ಹೆಮ್ಮೆ ಅವರಿಗಿದೆ. ಅವರು ನಮ್ಮ ರಾಷ್ಟ್ರಗೀತೆಯಷ್ಟೇ ಹೆಮ್ಮೆಯಿಂದ ನಾಡಗೀತೆಯನ್ನೂ ಹಾಡುತ್ತಾರೆ. ದೇಶದ ಅಭಿವೃದ್ಧಿಗೆ ನೀಡಿರುವ ಕೊಡುಗೆಯ ಬಗ್ಗೆ ಹೆಮ್ಮೆ ಪಡುತ್ತಾರೆ. ದೇಶಕ್ಕೆ ಬೆಂಗಳೂರಿನ ಕೊಡುಗೆ ಅಪಾರ. ಇನ್ಫೊಸಿಸ್‌ನಂತಹ ಕಂಪನಿಗಳು ಮತ್ತು ಈ ರಾಜ್ಯದ ತಂತ್ರಜ್ಞಾನದ ಬೆಳವಣಿಗೆಯ ಬಗ್ಗೆ ಜಗತ್ತಿಗೆ ತಿಳಿದಿದೆ’ ಎಂದು ನಿರ್ಮಲಾ ಹೇಳಿದರು.

‘ದೇಶದ ಪ್ರತಿಯೊಂದು ಪ್ರದೇಶವೂ ಅಭಿವೃದ್ಧಿ ಹೊಂದಬೇಕು ಎಂಬುದು ಕರ್ನಾಟಕದ ಜನತೆಗೆ ತಿಳಿದಿದೆ ಎಂದು ನಾನು ಭಾವಿಸುತ್ತೇನೆ. ಜನರು ಈ ವಿಷಯವನ್ನು ಎತ್ತುತ್ತಿದ್ದಾರೆ ಎಂದು ನಾನು ಭಾವಿಸುವುದಿಲ್ಲ. ರಾಜಕೀಯ ಕಾರಣಕ್ಕಾಗಿ ಮುಖ್ಯಮಂತ್ರಿ ಈ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದಾರೆ. ಇದು ಜನರ ಚಳವಳಿಯಲ್ಲ’ ಎಂದರು.

15 ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಅವರಿಗೆ ಸಾರ್ವಜನಿಕ ಹಣಕಾಸು ವ್ಯವಸ್ಥೆ ಹೇಗೆ ಕೆಲಸ ಮಾಡುತ್ತದೆ ಎಂಬ ಅರಿವಿದೆ. ಆದರೂ, ತಮ್ಮ ಆಡಳಿತ ವೈಫಲ್ಯವನ್ನು ಮುಚ್ಚಿಡಲು ಮೋದಿ ಸರ್ಕಾರವನ್ನು ಟೀಕಿಸುವ ತಂತ್ರ ಅನುಸರಿಸುತ್ತಿದ್ದಾರೆ

‘ರಾಜ್ಯದಿಂದ ಸ್ಪರ್ಧೆ ಇಲ್ಲ’

ಕರ್ನಾಟಕದಿಂದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಸುದ್ದಿಯನ್ನು ನಿರ್ಮಲಾ ಸೀತಾರಾಮನ್ ತಳ್ಳಿ ಹಾಕಿದರು. ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ನಿರ್ಮಲಾ ಕಣಕ್ಕೆ ಇಳಿಯಲಿದ್ದಾರೆ ಎಂಬ ಸುದ್ದಿಗಳು ಹಬ್ಬಿವೆ. ಈ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಇದು ಊಹಾಪೋಹವಷ್ಟೇ’ ಎಂದು ಸ್ಪಷ್ಟಪಡಿಸಿದರು.

ಭದ್ರಾ ಮೇಲ್ದಂಡೆ: ನಿರ್ಮಲಾ ಅಭಯ

‘ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ನೀಡುವುದಾಗಿ ಕಳೆದ ಬಜೆಟ್‌ನಲ್ಲೇ ಘೋಷಿಸಲಾಗಿದೆ. ಈ ಹಣ ಬಿಡುಗಡೆಯಾಗಲಿದೆ. ಬೆಂಗಳೂರು ಪೆರಿಫೆರಲ್ ವರ್ತುಲ ರಸ್ತೆ ಯೋಜನೆಗೆ ಅನುದಾನ ನೀಡುವಂತೆ ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಿದೆ. ಇದರ ಪ್ರಕ್ರಿಯೆ ಸಹ ನಡೆಯುತ್ತಿದೆ. ಯಾವುದೇ ಯೋಜನೆಗೆ ಅನುದಾನ ನೀಡುವುದಾಗಿ ಪ್ರಕಟಿಸಿದ ಬಳಿಕ ಹಣದ ಬಗ್ಗೆ ಅನುಮಾನ ಬೇಡ. ನಾವು ಕೊಟ್ಟೇ ಕೊಡುತ್ತೇವೆ’ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

‘ಹೂಡಿಕೆಗೆ ಉದ್ಯಮಿಗಳ ಹಿಂದೇಟು’

‘ರಾಜಕೀಯ ದುರುದ್ದೇಶದಿಂದ ಸಿದ್ದರಾಮಯ್ಯ ಅವರು ಪ್ರತಿನಿತ್ಯ ಕೇಂದ್ರ ಸರ್ಕಾರದ ವಿರುದ್ಧ ಟೀಕೆ ಮಾಡುತ್ತಿದ್ದಾರೆ. ಅವರ ನಕಾರಾತ್ಮಕ ವರ್ತನೆಯಿಂದ ರಾಜ್ಯದ ಹೂಡಿಕೆ ಮೇಲೆ ಪರಿಣಾಮ ಬೀರಲಿದೆ. ಈ ರಾಜ್ಯದಲ್ಲಿ ಸಮಸ್ಯೆ ಇದೆ ಎಂದು ಭಾವಿಸಿ ಉದ್ಯಮಿಗಳು ಬೇರೆ ರಾಜ್ಯದ ಕಡೆಗೆ ವಲಸೆ ಹೋಗುತ್ತಾರೆ. ಇದರಿಂದ ರಾಜ್ಯದ ಇಮೇಜ್‌ಗೆ ಧಕ್ಕೆ ಆಗುತ್ತದೆ. ಸಿದ್ದರಾಮಯ್ಯ ಅವರು ಕರ್ನಾಟಕವನ್ನು ಅಭಿವೃದ್ಧಿ ಹೊಂದಿದ ರಾಜ್ಯವನ್ನಾಗಿ ಮಾಡಲು ಹೊರಟಿದ್ದೀರಾ ಅಥವಾ ಹಿಂದುಳಿದ ರಾಜ್ಯವನ್ನಾಗಿ ಮಾಡಲು ಹೊರಟಿದ್ದೀರಾ’ ಎಂದು ನಿರ್ಮಲಾ ಸೀತಾರಾಮನ್ ಪ್ರಶ್ನಿಸಿದರು.

ಸಿನಿ ಬಿಟ್ಸ್

ಹೊಸಬರ ‘ಭಾವತೀರ ಯಾನ’

‘ಶಾಖಾಹಾರಿ’ ಸಿನಿಮಾದ ಸಂಗೀತ ನಿರ್ದೇಶಕ ಮಯೂರ್ ಅಂಬೆಕಲ್ಲು ಈಗ ನಿರ್ದೇಶಕರಾಗಿದ್ದಾರೆ. ಇವರ ನಿರ್ದೇಶನದಲ್ಲಿ ಹೊಸಬರಾದ ತೇಜಸ್ ಕಿರಣ್ ಹಾಗೂ ಆರೋಹಿ ನೈನಾ ಜೋಡಿಯಾಗಿ ನಟಿಸಿರುವ ‘ಭಾವತೀರ ಯಾನ’ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ.

‘ಇಂದಿನ ಯುವಕ, ಯುವತಿಯರ ಭಾವನೆ, ಪ್ರೀತಿಯ ಹಾಡು ಪಾಡು, ನೋವು ನಲಿವುಗಳನ್ನು ತೆರೆದಿಡುವ ಕಥೆ. ವರ್ಷದ ಹಿಂದೆ ‘ಫಸ್ಟ್ ಲವ್’ ಎಂಬ ಕಿರುಚಿತ್ರ ಮಾಡಿದ್ದೆವು. ಅದರ ಮುಂದುವರಿದ ಭಾಗ ಈ ಸಿನಿಮಾ’ ಎಂದರು ನಿರ್ದೇಶಕ ಮಯೂರ್.

ಆರೋಹಾ ಫಿಲ್ಮ್ಸ್ ಚಿತ್ರವನ್ನು ನಿರ್ಮಿಸಿದೆ. ಹಿರಿಯ ಕಲಾವಿದರಾದ ರಮೇಶ್ ಭಟ್ ಹಾಗೂ ವಿದ್ಯಾಮೂರ್ತಿ ತಾರಾಗಣದಲ್ಲಿದ್ದಾರೆ.

‘ನನ್ನ 50 ವರ್ಷಗಳ ಸಿನಿಮಾ ಪಯಣದಲ್ಲಿ ಸ್ವೀಟ್ಸ್, ಬೊಕ್ಕೆ ತಂದು ಪಾತ್ರ ಕೊಟ್ಟವರು ತುಂಬಾ ವಿರಳ. ಈ ಹುಡುಗರು ನನಗೆ ಅಷ್ಟು ಗೌರವ ಕೊಟ್ಟರು. ಮನುಷ್ಯನಿಗೆ ಪ್ರಬುದ್ಧತೆ ಬಂದಮೇಲೆ ತಾನು ಮಾಡಿದ ಸರಿ, ತಪ್ಪುಗಳನ್ನು ಅವಲೋಕಿಸುವ ಸಮಯ ಬಂದಿರುತ್ತದೆ. ಮನದ ತೊಳಲಾಟಗಳನ್ನು ವ್ಯಕ್ತಪಡಿಸುವ ನನ್ನ ಈ ಪಾತ್ರ ಪ್ರತಿಯೊಬ್ಬರಿಗೂ ಕನೆಕ್ಟ್ ಆಗುತ್ತದೆ’ ಎಂದರು ರಮೇಶ್ ಭಟ್. ❖

ವಿದ್ಯಾಮೂರ್ತಿ, ರಮೇಶ್ ಭಟ್

ಸೆಟ್ಟೇರಿದ ‘ಕೃಷ್ಣಾ ನೀ ಬೇಗನೆ ಬಾರೋ’

ವಿಷ್ಣುವರ್ಧನ್ ಅಭಿನಯದ ‘ಕೃಷ್ಣಾ ನೀ ಬೇಗನೆ ಬಾರೋ’ ಚಿತ್ರವು ಬಿಡುಗಡೆಗೊಂಡು ಸೂಪರ್ ಹಿಟ್ ಆಗಿತ್ತು. ಇದೀಗ ಅದೇ ಶೀರ್ಷಿಕೆ ಹೊಂದಿರುವ ಚಿತ್ರವೊಂದು ಸೆಟ್ಟೇರಿದೆ. ನಾಯಕ ಭಾರ್ಗವ್ ಬಿ.ವಿ ಅವರಿಗೆ ಜೋಡಿಯಾಗಿ ಊರ್ವಶಿ ಪರದೇಶಿ ಕಾಣಿಸಿಕೊಂಡಿದ್ದಾರೆ. ಜಿ.ಸೂರ್ಯತೇಜ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಶ್ರೀಕೃಷ್ಣ ಪರಮಾತ್ಮನೊಂದಿಗೆ ಗೋಪಿಕಾ ಸ್ತ್ರೀಯರು ಇರುತ್ತಾರೆ. ಯಾವ ಹುಡುಗಿಯನ್ನೂ ಹೊಂದಿರದ ಕಥೆಯ ನಾಯಕ ಕೃಷ್ಣನೊಂದಿಗೆ ನಾಲ್ಕು ಹುಡುಗೀರು ಹೇಗೆ ಕನೆಕ್ಟ್ ಆಗುತ್ತಾರೆ ಎಂಬುದೇ ಚಿತ್ರಕಥೆ. ಬೆಂಗಳೂರು, ಗೋವಾ, ಕೇರಳಗಳಲ್ಲಿ ಚಿತ್ರೀಕರಣ ಮಾಡುತ್ತೇವೆ. ಕನ್ನಡ,ತೆಲುಗು,ತಮಿಳು ಮತ್ತು ಭೋಜಪುರಿ ಭಾಷೆಗಳಲ್ಲಿ ಸಿನಿಮಾ ಸಿದ್ಧಗೊಳ್ಳಲಿದೆ’ ಎಂದರು ನಿರ್ದೇಶಕರು.

ಚೈತ್ರಾ, ಪ್ರಿಯಾಂಕ, ಆಶುರೆಡ್ಡಿ ಕೂಡ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ಎಸ್. ನೀಲಕಂಠ ಮತ್ತು ಚಲಪತಿರಾಜು ಜಂಟಿಯಾಗಿ ನೀಲಕಂಠ ಆರ್ಟ್ಸ್ ಬ್ಯಾನರ್ ಅಡಿಯಲ್ಲಿ ಬಂಡವಾಳ ಹೂಡುತ್ತಿದ್ದಾರೆ. ತಾರಾ, ಅಚ್ಯುತಕುಮಾರ್, ಬಲರಾಜವಾಡಿ ಮುಂತಾದವರು ನಟಿಸುತ್ತಿದ್ದಾರೆ. ಆರ್ಯ ಅವರ ಛಾಯಾಚಿತ್ರಗಹಣ ಇದೆ. ❖

ಊರ್ವಶಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

❌ **ಸರ್ಕಾರಿ** ಪ್ರೌಢ ಶಾಲೆಗಳ ಅಭಿವೃದ್ಧಿಗೆ 50 ಕೋಟಿ ಎಂದು ಬರೆದಿರುವ ಸುದ್ದಿ ವಾಹಿನಿಯೊಂದರ ಸುದ್ದಿ ಪ್ರಸಾರದ ಸ್ಕ್ರೀನ್‌ಶಾಟ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಇದೇ ಸ್ಕ್ರೀನ್‌ಶಾಟ್‌ನೊಂದಿಗೆ ‘ಮಂದಿರ ಬದಲು ಶಾಲೆ ಕಟ್ಟಿ ಅಂತ ಹೇಳಿದ ಮಹಾನ್ ವ್ಯಕ್ತಿಗಳು ಇವಾಗ ಕಾಣೆ ಆಗ್ತಾರೆ, ಯಾಕೆಂದರೆ ವಕ್ಫ್ ಬೋರ್ಡ್ ಅಭಿವೃದ್ಧಿಗೆ 100 ಕೋಟಿ, ಕ್ರಿಶ್ಚಿಯನ್ ಮಿಷನರಿ ಅಭಿವೃದ್ಧಿಗೆ 200 ಕೋಟಿ, ಆದರೆ ಶಾಲೆಗೆ ಮಾತ್ರ 50 ಕೋಟಿ ಸಾಕಲ್ವಾ...?’ ಎಂಬ ಬರಹವೂ ಇದೆ. ಫೆ. 16ರಂದು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸಿದ್ದರು. ಈ ಬಜೆಟ್‌ನ ಸುದ್ದಿ ಪ್ರಸಾರದ ಸ್ಕ್ರೀನ್‌ಶಾಟ್ ಅನ್ನೇ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ, ಈ ಸುದ್ದಿಯನ್ನು ತಪ್ಪು ಅರ್ಥ ಬರುವಂತೆ ಹಂಚಿಕೊಳ್ಳಲಾಗುತ್ತಿದೆ.



✅ **ಜಾಲತಾಣಗಳಲ್ಲಿ** ಹೇಳಲಾಗಿರುವಂತೆ ಸರ್ಕಾರಿ ಪ್ರೌಢ ಶಾಲೆಗಳ ಒಟ್ಟು ಅಭಿವೃದ್ಧಿಗಾಗಿ ರಾಜ್ಯ ಬಜೆಟ್‌ನಲ್ಲಿ ಕೇವಲ ₹50 ಕೋಟಿಯನ್ನು ಮೀಸಲಿಟ್ಟಿಲ್ಲ. ಈ ಹಣವನ್ನು ಆ ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯ, ಕಂಪ್ಯೂಟರ್ ಲ್ಯಾಬ್, ಇಂಟರ್‌ನೆಟ್ ಸೌಲಭ್ಯ ಕಲ್ಪಿಸಲು ಮೀಸಲಿಡಲಾಗಿದೆ. ಈ ಮಾಹಿತಿಯನ್ನು ಪೋಸ್ಟ್‌ಗಳಲ್ಲಿ ತಪ್ಪಾಗಿ ಬಳಸಿಕೊಳ್ಳಲಾಗಿದೆ. ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಮೂಲಸೌಕರ್ಯ ಅಭಿವೃದ್ಧಿಗೆ ₹600 ಕೋಟಿಯನ್ನು ಹಾಗೂ ಕಟ್ಟಡ ನಿರ್ಮಾಣ, ದುರಸ್ತಿ ಹಾಗೂ ಶೌಚಾಲಯ ನಿರ್ಮಾಣಕ್ಕಾಗಿ ₹850 ಕೋಟಿಯನ್ನು ಮೀಸಲಿಡಲಾಗಿದೆ. ಶಾಲಾ ಕಟ್ಟಡಗಳ ನಿರ್ವಹಣೆಗೆ ₹117 ಕೋಟಿ, ವಿದ್ಯಾರ್ಥಿಗಳ ಪ್ರೋತ್ಸಾಹಧನಕ್ಕೆ ₹471 ಕೋಟಿ, ಶಿಕ್ಷಣ ಗುಣಮಟ್ಟ ಸುಧಾರಣೆಗೆ ₹8 ಕೋಟಿ ಹಾಗೂ ಗುಣಮಟ್ಟದ ಭರವಸೆ ಮತ್ತು ವಿದ್ಯಾರ್ಥಿ ಪ್ರೇರಣೆಗೆ ₹8 ಕೋಟಿ ಮೀಸಲಿಡಲಾಗಿದೆ. ಹೀಗೆ ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿ ಮತ್ತು ನಿರ್ವಹಣೆಗೆಂದೇ ₹2,054 ಕೋಟಿಗೂ ಹೆಚ್ಚು ಮೊತ್ತವನ್ನು ಬಜೆಟ್‌ನಲ್ಲಿ ಮೀಸಲಿಡಲಾಗಿದೆ. ಹೀಗಾಗಿ, ಪ್ರೌಢಶಾಲೆಗಳ ಅಭಿವೃದ್ಧಿಗೆ ₹50 ಕೋಟಿಯನ್ನು ಮಾತ್ರವೇ ಮೀಸಲಿಡಲಾಗಿದೆ ಎಂಬುದು ಸುಳ್ಳು ಸುದ್ದಿ.

ಗುಂಡಣ್ಣ



ಸಮಚಿತ್ತವೇ ನೆಮ್ಮದಿಯ ಮಾರ್ಗ

ನುಡಿ ಬೆಳಗು

ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಆರ್ಥರ್ ಆಶ್, ಆಫ್ರಿಕಾ ಮೂಲದ ಅಮೆರಿಕನ್ ಟೆನಿಸ್ ಪಟು. 1975ರಲ್ಲಿ ಆಶ್, ಅಂದಿನ ವಿಶ್ವ ಟೆನಿಸ್ ಸಾಮ್ರಾಜ್ಯದ ಅನಭಿಷಿಕ್ತ ಸಾಮ್ರಾಟರಾಗಿದ್ದ ಜಿಮ್ಮಿ ಕಾರ್ನರ್ಸ್ ಅವರನ್ನು ಅನಿರೀಕ್ಷಿತವಾಗಿ ಮಣಿಸಿ ವಿಂಬಲ್ಡನ್ ಕಿರೀಟವನ್ನು ಮುಡಿಗೇರಿಸಿಕೊಂಡರು. ಆಗಿನ ಕಾಲದಲ್ಲಿ ಟೆನಿಸ್ ರಂಗದ ಹೊಸ ಸೆನ್ಸೇಷನ್ ಆಗಿದ್ದ ಆರ್ಥರ್, ಹಲವಾರು ಪ್ರಶಸ್ತಿಗಳನ್ನೂ ಗೆದ್ದಿದ್ದರು. ಇಂತಹ ವಿಶಿಷ್ಟ ಪ್ರತಿಭೆ 1988ರಲ್ಲಿ ಎರಡೆರಡು ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗಿ ಬಂತು. ದುರದೃಷ್ಟ, ಶಸ್ತ್ರಚಿಕಿತ್ಸೆಗಾಗಿ ಅವರು ಪಡೆದ ರಕ್ತದಿಂದ ಎಚ್‌ಐವಿ ಸೋಂಕಿತರಾದರು. ಆಗ ಅವರ ಅಸಂಖ್ಯಾತ ಅಭಿಮಾನಿಗಳು, ‘ಎಲ್ಲವನ್ನೂ ಒಳ್ಳೆಯದೇ ಮಾಡಿರುವ ನಿಮ್ಮನ್ನೇ ಏಕೆ ದೇವರು ಈ ದುರದೃಷ್ಟಕ್ಕೆ ಗುರಿ ಮಾಡಿದ’ ಎಂದು ಅವರಿಗೆ ಸಂದೇಶ ಕಳುಹಿಸಿದರು.

ಇದಕ್ಕೆ ಆರ್ಥರ್ ನೀಡಿದ ಉತ್ತರ ಧನಾತ್ಮಕವೂ, ಪ್ರೇರಣಾದಾಯಕವೂ ಆಗಿದೆ: ‘ಪ್ರಪಂಚದಲ್ಲಿ ಮಿಲಿಯಗಟ್ಟಲೆ ಜನ ಟೆನಿಸ್ ಆಟಗಾರರಾಗಬೇಕೆಂದು ಆಶಿಸಿ ಪ್ರಯತ್ನ ಪಡುತ್ತಾರೆ. ಅದರಲ್ಲಿ ಸುಮಾರು ಒಂದು ಲಕ್ಷ ಜನ ವೃತ್ತಿಪರ ಆಟಗಾರರಾಗುತ್ತಾರೆ. ಅದರಲ್ಲಿನ ಕೆಲವೇ ಸಾವಿರ ಜನ ನಾನಾ ಟೆನಿಸ್ ಸರ್ಕಿಟ್‌ಗಳಲ್ಲಿ ಆಡುವ ಅವಕಾಶ ಪಡೆಯುತ್ತಾರೆ. ಅದರಲ್ಲಿ ಕೇವಲ 100 ಮಂದಿ ಗ್ರಾಂಡ್ ಸ್ಲಾಮ್ ಪ್ರಶಸ್ತಿಗಳಲ್ಲಿ ಆಡುತ್ತಾರೆ. ಅದರಲ್ಲಿ ಇಬ್ಬರಿಗೆ ಮಾತ್ರ ಫೈನಲ್ ಆಡುವ ಅವಕಾಶ. ಒಬ್ಬ ವ್ಯಕ್ತಿ ಮಾತ್ರವೇ ಟ್ರೋಫಿ ಹಿಡಿಯುತ್ತಾರೆ. ಅಂಥ ಅದೃಷ್ಟವಂತ ವ್ಯಕ್ತಿ ನಾನಾಗಿದ್ದೆ. ಆಗ ನಾನು ದೇವರೇ ನನಗೆ ಮಾತ್ರ ಈ ಅವಕಾಶ ಏಕೆ ಕೊಟ್ಟೆ ಎಂದು ಕೇಳಲಿಲ್ಲ. ಹಾಗೆಯೇ ಈ ರೀತಿ ಕಾಯಿಲೆಗೆ ಒಳಗಾದಾಗ ನಾನೇಕೆ ದೇವರನ್ನು ನನಗೇ ಏಕೆ ಇದನ್ನು ನೀಡಿದೆ ಎಂದು ದೂಷಿಸಲಿ’ ಎಂಬ ಅವರ ಹೇಳಿಕೆಯು ಬದುಕನ್ನು ಸಮಚಿತ್ತದಿಂದ ಸ್ವೀಕರಿಸಬೇಕು ಎಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ.

ಕಷ್ಟ ಬಂದಾಗ ಅಯ್ಯೋ ನನಗೇ ಏಕೆ ಇದು ಬಂದೊದಗಿದೆ ಎಂದು ಕೊರಗುವ ನಾವು ಸುಖ ಲಭಿಸಿದಾಗ ಬೇರೆಯವರಿಗೆ ಲಭಿಸದ ಇದು ನನಗೇ ಏಕೆ ಸಿಕ್ಕಿದೆ ಎಂದು ಆಲೋಚಿಸುವುದಿಲ್ಲ. ನಮಗಿರೋದೇ ಅರೆಗಣ್ಣು, ನಮಗೆ ಕಾಣಿಸುವುದೇ ಅರೆಬೆಳಕು ಎಂದು ಕೊರಗುತ್ತಾ ಕೂರುವುದರ ಬದಲು ಇರುವ ಅರ್ಧ ಕಣ್ಣಿನಿಂದ ನೋಡ ಸಿಗುವ ಜಗತ್ತಿನ ಸವಿಯನ್ನು ಸವಿಯುವುದೇ ಲಾಭ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಫೆಬ್ರುವರಿ 19, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ದಶಮಿ ಗಂ. 08-51 ನಕ್ಷತ್ರ: ಮೃಗಶಿರಾ ಗಂ. 10-33 ಯೋಗ: ವಿಷ್ಕಂಭ ಗಂ. 12-01 ಕರಣ: ಗರ ಗಂ. 08-51, ಕುಂಭ ಮಾಸದ 06 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 4.

ರಾಹುಕಾಲ: ಬೆಳಿಗ್ಗೆ 07-30 – 09-00

ಸೂರ್ಯೋದಯ: 06-55 **ಸೂರ್ಯಾಸ್ತ:** 06-33

ಮುಸ್ಲಿಂ ದಿನಾಂಕ: 08 ಶಬನ್

ಅದೃಷ್ಟ ಸಂಖ್ಯೆ: 1, 11

ಮೇಷ: ಆಸ್ತಿ ವ್ಯವಹಾರಗಳಿಂದ ಉತ್ತಮ ಲಾಭ. ವೃತ್ತಿ ಕ್ಷೇತ್ರದಲ್ಲಿ ನಿಮ್ಮ ನಿಷ್ಠೆ, ಪ್ರಾಮಾಣಿಕತೆಗೆ ಹೆಚ್ಚಿನ ಗೌರವಾದರಗಳು ಸಿಗುವುದು. ಸ್ವಂತ ಕೆಲಸ ಪೂರ್ತಿಗೊಳಿಸುವಿರಿ.

ವೃಷಭ: ಅನವಶ್ಯಕ ಚಿಂತೆ, ದೂರ ಪ್ರವಾಸದಿಂದ ಖರ್ಚು ಹಾಗೂ ಹಾಳು ವ್ಯಸನಗಳು ಈ ದಿನ ಕಡಿಮೆಯಾಗಲಿದೆ. ವ್ಯವಹಾರದಲ್ಲಿ ಹೆಚ್ಚಿನ ಸಮಯ ವ್ಯಯಿಸುವುದರಿಂದ ಕಾರ್ಯಗಳನ್ನು ಸುಸ್ಥಿತಿಗೆ ತರಬಹುದು.

ಮಿಥುನ: ನೂತನ ವ್ಯವಹಾರದ ಪ್ರಾರಂಭ ಯೋಚನೆಯಲ್ಲಿರುವವರು ಅದರ ಸಾಧಕ ಬಾಧಕದ ಬಗ್ಗೆ ಸಂಪೂರ್ಣವಾಗಿ ಗಮನಹರಿಸುವುದು ಉತ್ತಮ. ಜೀವನ ಸಂಗಾತಿಯ ಆಯ್ಕೆ ವಿಚಾರದಲ್ಲಿ ಹಿರಿಯರ ಮಾತಿನತ್ತ ಗಮನ ಕೊಡಿ.

ಕರ್ಕಾಟಕ: ಧಾರ್ಮಿಕ ಕ್ಷೇತ್ರದಲ್ಲಿರುವವರು ವೃತ್ತಿ ಜೀವನದತ್ತ ಹೆಚ್ಚಿನ ಗಮನ ಹರಿಸುವುದು ಒಳ್ಳೆಯದು. ಕೋರ್ಟು ವ್ಯವಹಾರಗಳಲ್ಲಿ ಹಿನ್ನಡೆ ಅಥವಾ ನಿರೀಕ್ಷಿಸಿದ ಯಾವುದೇ ತೀರ್ಮಾನ ಸಿಗದಂತಾಗುತ್ತದೆ.

ಸಿಂಹ: ನಿಮಗೆ ಜನ್ಮತಃ ಬಂದಿರುವ ಧೈರ್ಯ ಹಾಗೂ ಸಹಿಷ್ಣುತೆ ನೆರವಿಗೆ ಬರಲಿದೆ. ನಿಮ್ಮಿಚ್ಛೆಯ ಭೂಮಿಯನ್ನೇ ಖರೀದಿಸುವ ಭಾಗ್ಯ ನಿಮ್ಮದಾಗಲಿದೆ. ವಿವಾಹದ ಬಗ್ಗೆ ಯೋಚನೆ ಬರಲಿದೆ.

ಕನ್ಯಾ: ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಜವಾಬ್ದಾರಿ ಜತೆಗೆ ಕಲಿಕೆಗಾಗಿ ಪ್ರಯಾಣ ಮಾಡಬೇಕಾಗುತ್ತದೆ. ಹೊಸ ಕಾರ್ಯದ ಸಂಪೂರ್ಣ ಜವಾಬ್ದಾರಿ ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ನಿಮ್ಮದಾಗಲಿದೆ. ಸ್ನೇಹಿತರು ಇನ್ನಷ್ಟು ಹತ್ತಿರವಾಗುವರು.

ತುಲಾ: ಜನರೊಂದಿಗಿನ ಹೆಚ್ಚಿನ ಸಂಪರ್ಕದಿಂದ ಅನಿವಾರ್ಯದ ಸಮಯ ಎದುರಿಸಬಹುದು. ನ್ಯಾಯವಾದಿಗಳಿಗೆ ಜಯ ದೊರೆತು ಧನಾಗಮವಾಗಲಿದೆ. ಹಣಕಾಸಿನ ಪರಿಸ್ಥಿತಿ ಸುಧಾರಿಸಲಿದೆ.

ವೃಶ್ಚಿಕ: ನಿರೀಕ್ಷೆಗೆ ಅಥವಾ ಪ್ರಯತ್ನಕ್ಕೆ ನಿಲುಕದ ವ್ಯಕ್ತಿಗಾಗಲಿ ಅಥವಾ ವಸ್ತುವಿಗಾಗಲೀ ಕಾಲಹರಣ ಮಾಡದಿರಿ. ನಿಮಗೆ ಬರಬೇಕಾದದು ನಿಮ್ಮನ್ನು ಅರಸಿ ಬಂದೇ ಬರುವುದು. ಬಿಳಿ ಬಣ್ಣದ ಉಡುಗೆ ಶುಭ ತರುವುದು.

ಧನು: ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಯಾವುದೇ ಕೆಲಸವನ್ನು ಒಪ್ಪಿಕೊಳ್ಳಬೇಡಿ. ಆರ್ಥಿಕವಾಗಿ ಲೇವಾದೇವಿ ವ್ಯವಹಾರದಲ್ಲಿ ಜಾಗರೂಕತೆ ಇರಲಿ. ವೈಯಕ್ತಿಕ ನಿಲುವುಗಳಿಗೆ ಆದ್ಯತೆ ಕೊಡುವುದು ಲೇಸು.

ಮಕರ: ಸಾಲವನ್ನು ತೀರಿಸಿದ ಸಂತೃಪ್ತಿ ಸಿಗಲಿದೆ. ಮಗಳಿಗೆ ಆಪ್ತರ ಸಹಾಯದಿಂದ ಉತ್ತಮ ಉದ್ಯೋಗ ಲಭಿಸಲಿದೆ. ಕೆಲಸವನ್ನು ತ್ವರಿತಗೊಳಿಸುವುದರಿಂದ ಉಂಟಾಗುವ ನಷ್ಟದ ಪ್ರಮಾಣವನ್ನು ಕಡಿಮೆಗೊಳಿಸಿಕೊಳ್ಳಬಹುದು.

ಕುಂಭ: ಇಷ್ಟು ದಿನ ತೋರಿದ ತಾಳ್ಮೆಗೆ ಪ್ರತಿಯಾಗಿ ನಿಮ್ಮ ನಿಜವಾದ ಕಾರ್ಯಗಳಿಗೆ ಕಾಲ ಕೂಡಿಬರಲಿದೆ. ವಿದ್ಯುತ್ ಉಪಕರಣಗಳ ಮಾರಾಟದಿಂದ ಲಾಭ ಪಡೆಯುವಿರಿ. ವಾಗ್ಮಿಗಳಿಗೆ ಶುಭವಾಗುವುದು.

ಮೀನ: ಮನಸ್ಸಿನ ನಾಗಾಲೋಟಕ್ಕೆ ಕಡಿವಾಣ ಹಾಕಿ. ಸಂಯಮದ ನಡವಳಿಕೆ ಅಗತ್ಯ. ಹೊಸ ವ್ಯಕ್ತಿಗಳಿಂದ ಪ್ರಚೋದನೆಗೆ ಒಳಗಾಗದಿರಿ. ಚಾಲಕ ವೃತ್ತಿಯವರು ಉದ್ಯೋಗದಲ್ಲಿ ಜಾಗ್ರತರಾಗಿರಿ.

ಪದಬಂಧ 5596

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಅರಸುತ್ತಿದ್ದಾಗ ಕಾಣಿಸಿದ ರಾಜ (3)
5.ಈತ ವಾದ್ಯ ನುಡಿಸುವವನು (3)
6.ಬಿಡದಿ ಹತ್ತಿರ ಕಾಣಿಸಿದ ಹೆಂಡತಿ (3)
7.ಆರ್ಭಟದಲ್ಲೇ ಕ್ರೀಡೆಯನ್ನು ನೋಡಿ! (2)
8.ವನದಲ್ಲಿ ತಿರುಗಿದಾಗ ಹೊಸದು ಕಂಡಿದೆ (2)
12.ಹುಡುಕಿಸಿ ನೋಡಿ! ಅಸತ್ಯ ಕಾಣುತ್ತದೆ! (2)
14.ಏಳು ದಿನಗಳ ಅವಧಿ (2)
15.ಈತ ಕಪ್ಪಗಿರುವವನು (3)
16.ಕಬ್ಬಿಣದ ಕೆಲಸಗಾರ ಇಲ್ಲಿದ್ದಾನೆ (3)
17.ದಿಣ್ಣೆ ಇಲ್ಲಿಯೇ ಕಾಣುತ್ತಿದೆ (3)

ಮೇಲಿಂದ ಕೆಳಕ್ಕೆ

1.ಕಟ ಕಟ ಶಬ್ದ ಮಾಡುತ್ತಿರುವ ಬಾಗಿಲು (3)
2.ಯಾವುದೇ ಕಳಂಕ ಇಲ್ಲದ್ದು (4)
3.ಹೊಂದಾಣಿಕೆಗೊಂದು ಪರ್ಯಾಯ ಪದ (4)
4.ಇದು ಒಳ್ಳೆಯ ದಿನ (3)
7.ಉದ್ದವಾದ ತೋಳು (5)
9.ವರನಲ್ಲಿಯೇ ಬಣ್ಣಗುಂದುವಿಕೆ! (5)
10.ತನ್ನದೆಂಬ ಭಾವನೆ (4)
11.ಕೊಬ್ಬಿದ ಆನೆಯಿದು (4)
13.ಮರಳು ಇಲ್ಲಿದೆ (3)
14.ಪಿತ್ರಾರ್ಜಿತ ಹಕ್ಕು (3)



5595ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಲೆಮಾರಿ 3.ಆಘ್ರಾಣಿಸು 5.ನಿಜ 7.ತಿರುಕ 8.ಹಂತ 9.ಜನ 10.ಅಸುರ 12.ಕರ 14.ನರಾಕೃತಿ 15.ಪರಸ್ಪರ

ಮೇಲಿಂದ ಕೆಳಕ್ಕೆ: 1.ಅವಧಾನಿ 2.ರಿಯಾಯಿತಿ 3.ಆಮುಷ್ಮಿಕ 4.ಸುರಕ್ಷಿತ 6.ಜವಾನ 8. ಹಂತಕ 9.ಜಮಖಾನ 10.ಅನುಮತಿ 11.ರಜನಿಪ 13.ರತ್ನಾಕರ

ಸುಡೊಕು 5981

	2		4		3	9	6	
7		8						5
4			5		8	7		1
		9						7
	3	7	1		6	4	5	
8						2	1	
6		5		2			3	4
3						5		2
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5980 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಸುಧಾ, ಮಯೂರ ಓದಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ ಎಂ.ಕಮಲಮ್ಮನವರು
(ದಿ|| ಶ್ರೀ ರಾಮುರವರ ಧರ್ಮಪತ್ನಿ)
ತಾ. 10.02.2024ರ ಶನಿವಾರ ಸಂಜೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬದ್ಧವಾದ ಪುಣ್ಯಾಹ ಹಾಗೂ ವೈಕುಂಠ ಸಮಾರಾಧನೆಯನ್ನು ತಾ. 20.02.2024, ಮಂಗಳವಾರ ಮಧ್ಯಾಹ್ನ 12.00 ರಿಂದ ನಮ್ಮ ಸ್ವಗೃಹದಲ್ಲಿ (ನಾಗಸಂದ್ರ, ಬೆಂಗಳೂರು) ಏರ್ಪಡಿಸಲಾಗಿರುತ್ತದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ಪ್ರಾರ್ಥಿಸುತ್ತೇನೆ.
ಇಂತಿ ದುಃಖತಪ್ತರು,
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು
Mobile: 9035325999

LOOKING FOR JOB OPPORTUNITY
Refer Classifieds on Wednesday

LOOKING FOR JOB OPPORTUNITY
Refer Classifieds on Wednesday

13ನೇ ವರ್ಷದ ಪುಣ್ಯಸ್ಮರಣೆ | 6ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಶಾಮಯ್ಯ
ದಿ.ಪಟೇಲ್ ನಾರಾಯಣರೆಡ್ಡಿಯವರ ಮಗ
ಬಿದರಹಳ್ಳಿ ಗ್ರಾಮ, ಬೆಂಗಳೂರು.
ನಿಧನ:19.02.2011

ಶ್ರೀಮತಿ ಲಕ್ಷ್ಮಮ್ಮ
ಬಿದರಹಳ್ಳಿ ಗ್ರಾಮ, ಬೆಂಗಳೂರು.
ನಿಧನ:16.05.2018

ನಿಮ್ಮ ಆದರ್ಶಗಳೇ ನಮಗೆ ದಾರಿದೀಪ, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕೊಡಲೆಂದು ಸ್ಮರಿಸುವ
ದುಃಖತಪ್ತರು:
ಮಕ್ಕಳು ಮತ್ತು ಅಳಿಯಂದಿರು

‘2024–25ರಲ್ಲಿ ದ್ವಿಚಕ್ರ ವಾಹನ ಉದ್ಯಮ ಹೆಚ್ಚಿನ ಪ್ರಗತಿ’

ನವದೆಹಲಿ (ಪಿಟಿಐ): ದೇಶೀಯ ದ್ವಿಚಕ್ರ ವಾಹನ ಉದ್ಯಮವು ಈಗಿರುವುದಕ್ಕಿಂತಲೂ 2024–25ರ ಹಣಕಾಸು ವರ್ಷದಲ್ಲಿ ಹೆಚ್ಚಿನ ಪ್ರಗತಿ ಕಾಣಲಿದೆ ಎಂದು ಹೀರೊ ಮೋಟೊಕಾರ್ಪ್ ಸಿಇಒ ನಿರಂಜನ್ ಗುಪ್ತಾ ಹೇಳಿದ್ದಾರೆ.

ಪ್ರೀಮಿಯಂ ಮಾದರಿಗಳ ಬೇಡಿಕೆಯು ಮತ್ತಷ್ಟು ಹೆಚ್ಚಬಹುದು ಎಂದು ನಿರೀಕ್ಷಿಸಲಾಗಿದೆ. ಗ್ರಾಮೀಣ ಭಾಗದಲ್ಲಿ ಬೇಡಿಕೆಯು ಸುಧಾರಿಸುತ್ತಿದ್ದು, ಮುಂದಿನ ತ್ರೈಮಾಸಿಕಗಳ ಮಾರಾಟದಲ್ಲಿ ಬೆಳವಣಿಗೆ ಆಗಲಿದೆ. ಮಾರಾಟವನ್ನು ಹೆಚ್ಚಿಸಲು ದೇಶದಲ್ಲಿ ಕಂಪನಿಯ ಡೀಲರ್‌ಶಿಪ್ ಮತ್ತು ನವೀಕರಿಸಿದ ಮಾರಾಟ ಮಳಿಗೆಗಳನ್ನು ಹೆಚ್ಚಳ ಮಾಡಲಾಗುತ್ತಿದೆ ಎಂದು ಹೇಳಿದರು.

ಕಂಪನಿಯು 2023–24ರ ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ₹10,031 ಕೋಟಿ ವರಮಾನ ಗಳಿಸಿತ್ತು. ಹೀರೊ ಮೋಟೊಕಾರ್ಪ್ ಕಳೆದ ವರ್ಷ ಅಕ್ಟೋಬರ್‌ನಲ್ಲಿ ಪ್ರೀಮಿಯಾ ಹೆಸರಿನಲ್ಲಿ ಪ್ರೀಮಿಯಂ ವಾಹನಗಳಿಗಾಗಿಯೇ ವಿಶೇಷ ಶೋರೂಂ ಅನ್ನು ತೆರೆದಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹600
12 ಕ್ಕೆ ₹80
ಮೈಸೂರು
100ಕ್ಕೆ ₹600

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹200-445
ದ್ವಿತಳಿ (ಬಿ.ವಿ) ₹352-546

ಅಂಚೆ: ಪ್ರತಿ ತಿಂಗಳೂ ಆದಾಯ

ಹಣಕಾಸು ಸಾಕ್ಷರತೆ
ರಾಜೇಶ್ ಕುಮಾರ್ ಟಿ.ಆರ್.

ಹೂಡಿಕೆ ಹಣಕ್ಕೆ ಸುರಕ್ಷತೆಯೂ ಬೇಕು, ಪ್ರತಿ ತಿಂಗಳು ನಿಶ್ಚಿತ ಆದಾಯವೂ ಬರಬೇಕು ಎನ್ನುವವರಿಗೆ ಒಂದು ಉತ್ತಮ ಆಯ್ಕೆ ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆ. ಇದು ಕೇಂದ್ರ ಸರ್ಕಾರದ ಗ್ಯಾರಂಟಿ ಇರುವ ಸಣ್ಣ ಉಳಿತಾಯ ಯೋಜನೆಯಾಗಿದ್ದು, ಪ್ರತಿ ತಿಂಗಳು ಹೂಡಿಕೆ ಮೊತ್ತದ ಮೇಲೆ ಬಡ್ಡಿ ಪಡೆದುಕೊಳ್ಳುವ ಅವಕಾಶವಿದೆ. ಬನ್ನಿ ಈ ಯೋಜನೆ ಬಗ್ಗೆ ಇನ್ನಷ್ಟು ವಿವರವಾಗಿ ತಿಳಿಯೋಣ.

ಏನಿದು ಮಾಸಿಕ ಆದಾಯ ಯೋಜನೆ?: ಈ ಮಾಸಿಕ ಆದಾಯ ಯೋಜನೆಯು ಅಂಚೆ ಕಚೇರಿಯ ಉಳಿತಾಯ ಯೋಜನೆಗಳಲ್ಲಿ ಪ್ರಮುಖವಾದುದು. ಈ ಯೋಜನೆಯಲ್ಲಿ ಹೂಡಿಕೆ ಮೊತ್ತ ಆಧರಿಸಿ ಪ್ರತಿ ತಿಂಗಳು ಬಡ್ಡಿ ಲಾಭ ದಕ್ಕುತ್ತದೆ. ಐದು ವರ್ಷಗಳ ಮೆಚ್ಯೂರಿಟಿ ಅವಧಿಯ ಬಳಿಕ ಹೂಡಿಕೆಯ ಅಸಲಿನ ಮೊತ್ತವೂ ಸಿಗುತ್ತದೆ. ಯಾವುದೇ ಅಂಚೆ ಕಚೇರಿಯಲ್ಲಿ ನೀವಿದನ್ನು ಪ್ರಾರಂಭಿಸಬಹುದು.

ಯಾರು ಖಾತೆ ತೆರೆಯಬಹುದು? ಠೇವಣಿ ವಿವರ: ವಯಸ್ಕರು ಈ ಖಾತೆ ತೆರೆಯಬಹುದು. ಇಬ್ಬರು ಅಥವಾ ಮೂವರು ಸೇರಿ ಜಂಟಿ ಖಾತೆಯನ್ನೂ ಪ್ರಾರಂಭಿಸಬಹುದು. 18 ವರ್ಷದೊಳಗಿನವರ ಹೆಸರಿನಲ್ಲಿ ಪೋಷಕರು ಖಾತೆ ಶುರು ಮಾಡಬಹುದು. ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆಯಲ್ಲಿ ಕನಿಷ್ಠ ₹1 ಸಾವಿರದಿಂದ ಗರಿಷ್ಠ ₹15 ಲಕ್ಷ ಹೂಡಿಕೆ ಮಾಡಲು ಅವಕಾಶವಿದೆ.

ಆದರೆ, ಒಬ್ಬರ ಹೆಸರಿನಲ್ಲಿ ಖಾತೆ ಇದ್ದರೆ ಗರಿಷ್ಠ ₹9 ಲಕ್ಷ ಮಾತ್ರ ಹೂಡಿಕೆ ಮಾಡಬಹುದು. ಜಂಟಿ ಹೆಸರಿನಲ್ಲಿ ಖಾತೆ ಇದ್ದರೆ ₹15 ಲಕ್ಷದವರೆಗೆ ಹೂಡಿಕೆ ಸಾಧ್ಯವಿದೆ. ಜಂಟಿ ಖಾತೆಯಲ್ಲಿ ಎಲ್ಲ ಪಾಲುದಾರರು ಸರಿಸಮನಾದ ಮೊತ್ತವನ್ನು ಹೂಡಬೇಕಾಗುತ್ತದೆ.

ಬಡ್ಡಿ ಮತ್ತು ತೆರಿಗೆ: ಈ ಯೋಜನೆಯ ಸದ್ಯದ ಬಡ್ಡಿ ದರ ಶೇ 7.4ರಷ್ಟಿದ್ದು ಹೂಡಿಕೆ ಮೊತ್ತದ ಮೇಲೆ ಬರುವ ಬಡ್ಡಿ ಪ್ರತಿ ತಿಂಗಳ ಕೊನೆಗೆ ಸಿಗುತ್ತದೆ. ಒಂದೊಮ್ಮೆ ಬರುವ ಬಡ್ಡಿಯನ್ನು ಪ್ರತಿ ತಿಂಗಳ ಕೊನೆಯಲ್ಲಿ ನೀವು ಪಡೆದುಕೊಳ್ಳದಿದ್ದರೆ ಯಾವುದೇ ಹೆಚ್ಚುವರಿ ಬಡ್ಡಿ ಲಾಭ ನಿಮಗೆ ಸಿಗುವುದಿಲ್ಲ. ಪ್ರತಿ ತಿಂಗಳ ಬರುವ ಬಡ್ಡಿಯನ್ನು ಹೂಡಿಕೆದಾರರು ಅಂಚೆ ಕಚೇರಿಯ ಉಳಿತಾಯ ಖಾತೆಗೆ ಸ್ವಯಂ ಚಾಲಿತವಾಗಿ ವರ್ಗಾಯಿಸಿಕೊಳ್ಳಬಹುದು. ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆಯಿಂದ ಬರುವ ಬಡ್ಡಿಗೆ ನಿರ್ದಿಷ್ಟ ವ್ಯಕ್ತಿಯ ತೆರಿಗೆ ಸ್ಲ್ಯಾಬ್‌ಗೆ ಅನುಗುಣವಾಗಿ ತೆರಿಗೆ ಅನ್ವಯಿಸುತ್ತದೆ.

ಅವಧಿಗೆ ಮುನ್ನ ಠೇವಣಿ ತೆಗೆದರೆ ಏನಾಗುತ್ತದೆ?: ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆಯ ಹೂಡಿಕೆ ಅವಧಿ 5 ವರ್ಷಗಳು. ಮೊದಲ ಒಂದು ವರ್ಷ ಹೂಡಿಕೆ ಮೊತ್ತವನ್ನು ತೆಗೆಯಲು ಯಾವುದೇ ಅವಕಾಶ ಇರುವುದಿಲ್ಲ. ಒಂದನೇ ವರ್ಷದ ನಂತರ ಮೂರನೇ ವರ್ಷದ ಒಳಗೆ ಠೇವಣಿ ಹಿಂತೆಗೆದರೆ ಒಟ್ಟು ಅಸಲಿನ ಮೊತ್ತದಲ್ಲಿ ಶೇ 2ರಷ್ಟು ದಂಡ ವಿಧಿಸಲಾಗುತ್ತದೆ.

ಮೂರನೇ ವರ್ಷ ನಂತರ ಐದನೇ ವರ್ಷದ ಒಳಗೆ ಠೇವಣಿ ಹಿಂತೆಗೆದರೆ ಒಟ್ಟು ಅಸಲಿನ ಮೊತ್ತದಲ್ಲಿ ಶೇ 1ರಷ್ಟು ದಂಡ ಕಟ್ಟಬೇಕಾಗುತ್ತದೆ. ಒಂದೊಮ್ಮೆ ಠೇವಣಿದಾರ ಮೆಚ್ಯೂರಿಟಿ ಅವಧಿಗೂ ಮುನ್ನ ಮೃತಪಟ್ಟರೆ ಖಾತೆಯನ್ನು ಮುಚ್ಚಿ ನಾಮಿನಿಗೆ ಅಸಲು ಹೂಡಿಕೆ ಮೊತ್ತ ಮತ್ತು ಬಡ್ಡಿಯನ್ನು ನೀಡಲಾಗುತ್ತದೆ.

ಹೂಡಿಕೆ ಮೇಲೆ ಸಿಗುವ ಬಡ್ಡಿ ಲಾಭ ಎಷ್ಟು?: ಸದ್ಯ ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆಯ ಬಡ್ಡಿ ದರ ಶೇ 7.4ರಷ್ಟಿದೆ. ಇದರಂತೆ ₹9 ಲಕ್ಷ ಹೂಡಿದರೆ ಪ್ರತಿ ತಿಂಗಳು ₹5,550 ಲಭಿಸುತ್ತದೆ. ₹15 ಲಕ್ಷ ಹೂಡಿದರೆ ₹9,250 ಬಡ್ಡಿ ಲಾಭ ಸಿಗುತ್ತದೆ. (ಹೆಚ್ಚಿನ ವಿವರಗಳಿಗೆ ಪಟ್ಟಿ ಗಮನಿಸಿ)

ಬಡ್ಡಿ ವಿವರ

ಹಾಲಿ ಬಡ್ಡಿದರ	ಹೂಡಿಕೆ ಮೊತ್ತ	ಪ್ರತಿ ತಿಂಗಳು ಸಿಗುವ ಬಡ್ಡಿ	5 ವರ್ಷಕ್ಕೆ ಸಿಗುವ ಬಡ್ಡಿ
ಶೇ 7.40	₹15 ಲಕ್ಷ	₹9,250	₹5,55,000
ಶೇ 7.40	₹9 ಲಕ್ಷ	₹5,550	₹3,33,000
ಶೇ 7.40	₹8 ಲಕ್ಷ	₹4,934	₹2,96,000
ಶೇ 7.40	₹7 ಲಕ್ಷ	₹4,317	₹2,59,000
ಶೇ 7.40	₹6 ಲಕ್ಷ	₹3,700	₹2,22,000
ಶೇ 7.40	₹5 ಲಕ್ಷ	₹3,084	₹1,85,000
ಶೇ 7.40	₹4 ಲಕ್ಷ	₹2,467	₹1,48,000
ಶೇ 7.40	₹3 ಲಕ್ಷ	₹1,850	₹1,11,000
ಶೇ 7.40	₹2 ಲಕ್ಷ	₹1,234	₹74,000
ಶೇ 7.40	₹1 ಲಕ್ಷ	₹617	₹37,000

ಸಾರಾಂಶ: ಪ್ರತಿ ತಿಂಗಳು ನಿಶ್ಚಿತ ಆದಾಯ ಬೇಕು, ಬಂಡವಾಳ ಸುರಕ್ಷತೆಯೇ ಆದ್ಯತೆ ಎನ್ನುವವರಿಗೆ ಈ ಯೋಜನೆ ಹೆಚ್ಚು ಸೂಕ್ತ. ಷೇರು ಮಾರುಕಟ್ಟೆ ಮತ್ತು ಮ್ಯೂಚುಯಲ್ ಫಂಡ್ ಹೂಡಿಕೆಗಳಿಗೆ ಹೋಲಿಸಿ ನೋಡಿದಾಗ ಈ ಸ್ಕೀಂನಲ್ಲಿ ಬಡ್ಡಿ ಲಾಭ ಕಡಿಮೆ. ಬೆಲೆ ಏರಿಕೆಯನ್ನು ಮೀರಿ ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆ ಲಾಭ ಕೊಡುವುದಿಲ್ಲ. ಆದರೆ, ಷೇರು ಮಾರುಕಟ್ಟೆಯಲ್ಲಿ ಲಾಭದ ಖಾತರಿ ಇರುವುದಿಲ್ಲ. ಮಾರುಕಟ್ಟೆ ಏರಿಳಿತಕ್ಕೆ ನಿಮ್ಮ ಹೂಡಿಕೆ ಮೇಲಿನ ಗಳಿಕೆ ಒಳಪಟ್ಟಿರುತ್ತದೆ. ಹೂಡಿಕೆ ನಿರ್ಧಾರಕ್ಕೂ ಮುನ್ನ ಈ ಅರಿವು ನಿಮಗಿರಲಿ. ಸಾಧಕ –ಬಾಧಕಗಳನ್ನು ಅರಿತು ಮುನ್ನಡೆಯಿರಿ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಗಳಿಕೆಯ ಲಯಕ್ಕೆ ಮರಳಿದ ಷೇರುಪೇಟೆ

ಷೇರುಪೇಟೆ

ಕುಸಿತದ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಫೆಬ್ರುವರಿ 16ಕ್ಕೆ ಕೊನೆಗೊಂಡ ವಾರದಲ್ಲಿ ಮತ್ತೆ ಗಳಿಕೆಯ ಲಯಕ್ಕೆ ಬಂದಿವೆ. 72,426 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.16ರಷ್ಟು ಗಳಿಕೆ ಕಂಡಿದೆ. 22,040 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.18ರಷ್ಟು ಜಿಗಿದಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡು ಬಂದ ಸಕಾರಾತ್ಮಕತೆ, ಕೊಂಚ ಮಟ್ಟಿಗೆ ಹಣದುಬ್ಬರ ನಿಯಂತ್ರಣ, ಆಟೊ, ಅನಿಲ- ತೈಲ ಮತ್ತು ಬ್ಯಾಂಕಿಂಗ್ ವಲಯದ ಷೇರುಗಳಲ್ಲಿ ಕಂಡುಬಂದ ಉತ್ಸಾಹದ ಪರಿಣಾಮ ಷೇರುಪೇಟೆ ಪುಟಿದೆದ್ದಿತು.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಆಟೊ ಸೂಚ್ಯಂಕ ಶೇ 5, ಅನಿಲ ಮತ್ತು ತೈಲ ಸೂಚ್ಯಂಕ ಶೇ 3, ಎನರ್ಜಿ ಸೂಚ್ಯಂಕ ಶೇ 3ರಷ್ಟು ಗಳಿಸಿಕೊಂಡಿವೆ. ಬಿಎಸ್‌ಇ ಟೆಲಿಕಾಂ, ಎಫ್‌ಎಂಸಿಜಿ ಮತ್ತು ಲೋಹ ಸೂಚ್ಯಂಕ ತಲಾ ಶೇ 0.5ರಷ್ಟು ಕುಸಿದಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹6,237.55 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹8,731.60 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್‌ಕ್ಯಾಪ್‌ನಲ್ಲಿ ಮಹೀಂದ್ರ ಆ್ಯಂಡ್ ಮಹೀಂದ್ರ, ಬಾಷ್, ವಿಪ್ರೊ ಮತ್ತು ಜೈಡಸ್ ಲೈಫ್ ಸೈನ್ಸಸ್ ಗಳಿಕೆ ಕಂಡಿವೆ. ಪೇಟಿಎಂ, ಹಿಂಡಾಲ್ಕೋ ಇಂಡಸ್ಟ್ರೀಸ್ ಕ್ರಮವಾಗಿ ಶೇ 18 ಮತ್ತು ಶೇ 13ರಷ್ಟು ಕುಸಿದಿವೆ. ಮಾರುಕಟ್ಟೆ ಮೌಲ್ಯದ ಲೆಕ್ಕಾಚಾರಕ್ಕೆ ಬಂದಾಗ ವಿಪ್ರೊ ಹೆಚ್ಚು ಮೌಲ್ಯವನ್ನು ಸೇರ್ಪಡೆಗೊಳಿಸಿದೆ. ಎಸ್‌ಬಿಐ, ಮಹೀಂದ್ರ ಆ್ಯಂಡ್ ಮಹೀಂದ್ರ ಮತ್ತು ಮಾರುತಿ ಸುಜುಕಿ ಕೂಡ ಮೌಲ್ಯ ಹೆಚ್ಚಿಸಿಕೊಂಡಿವೆ. ಮತ್ತೊಂದೆಡೆ ಐಟಿಸಿ, ಹಿಂದುಸ್ತಾನ್ ಯುನಿಲಿವರ್ ಮತ್ತು ಸನ್ ಫಾರ್ಮಾ ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆ ಮೌಲ್ಯ ಕಳೆದುಕೊಂಡಿವೆ.

ಮುನ್ನೋಟ: ಈ ವಾರ ಎಬಿಬಿ ಇಂಡಿಯಾ ಲಿಮಿಟೆಡ್, ಸಿಐಇ ಆಟೊಮೋಟಿವ್ ಇಂಡಿಯಾ ಲಿಮಿಟೆಡ್, ಎಲೆಂಟಾಸ್ ಬೆಕ್ ಇಂಡಿಯಾ ಲಿಮಿಟೆಡ್, ಮಾರ್ಬಲ್ ಸಿಟಿ ಇಂಡಿಯಾ, ಡಿಐಸಿ ಇಂಡಿಯಾ, ಫೊಸೇಕೋ ಇಂಡಿಯಾ, ರೇನ್ ಇಂಡಸ್ಟ್ರೀಸ್ ಸೇರಿದಂತೆ ಕೆಲ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

30 ನಿಮಿಷದೊಳಗೆ ವಿಮಾನ ಪ್ರಯಾಣಿಕರಿಗೆ ಲಗೇಜು ತಲುಪಿಸಿ

ನವದೆಹಲಿ (ಪಿಟಿಐ): ನಿಲ್ದಾಣದಲ್ಲಿ ವಿಮಾನ ಇಳಿದ 30 ನಿಮಿಷದೊಳಗೆ ಪ್ರಯಾಣಿಕರಿಗೆ ಅವರ ಲಗೇಜುಗಳನ್ನು ತಲುಪಿಸುವಂತೆ ವಿಮಾನಯಾನ ಸಂಸ್ಥೆಗಳಿಗೆ ವಿಮಾನಯಾನ ಭದ್ರತಾ ಸಂಸ್ಥೆ (ಬಿಸಿಎಎಸ್) ನಿರ್ದೇಶನ ನೀಡಿದೆ.

ಲಗೇಜುಗಳನ್ನು 30 ನಿಮಿಷದೊಳಗೆ ತಲುಪಿಸಲು ಅಗತ್ಯವಾದ ಕ್ರಮಗಳನ್ನು ಫೆಬ್ರವರಿ 26ರೊಳಗೆ ಜಾರಿಗೆ ತರಲು ವಿಮಾನಯಾನ ಸಂಸ್ಥೆಗಳಿಗೆ ನಿರ್ದೇಶನ ನೀಡಿದೆ ಎಂದು ಭಾನುವಾರ ಅಧಿಕೃತ ಹೇಳಿಕೆ ತಿಳಿಸಿದೆ. ಏರ್ ಇಂಡಿಯಾ, ಇಂಡಿಗೊ ಸೇರಿದಂತೆ ಏಳು ವಿಮಾನಯಾನ ಸಂಸ್ಥೆಗಳು ತಮ್ಮ ಪ್ರಯಾಣಿಕರಿಗೆ ಲಗೇಜುಗಳನ್ನು ವಿಳಂಬವಾಗಿ ನೀಡುತ್ತಿವೆ ಎಂಬ ಕಾರಣದಿಂದ ಫೆಬ್ರುವರಿ 16ರಂದು ಈ ನಿರ್ದೇಶನ ನೀಡಿದೆ.

ಆರ್‌ವಿಎನ್‌ಎಲ್: ₹65 ಸಾವಿರ ಕೋಟಿಗೇರಿದ ಯೋಜನೆ ಮೊತ್ತ

ನವದೆಹಲಿ (ಪಿಟಿಐ): ಸಾರ್ವಜನಿಕ ವಲಯದ ರೈಲ್ ವಿಕಾಸ್ ನಿಗಮ ಲಿಮಿಟೆಡ್‌ನ (ಆರ್‌ವಿಎನ್‌ಎಲ್) ಯೋಜನೆಗಳ ಮೊತ್ತ ₹65 ಸಾವಿರ ಕೋಟಿಗೆ ಮುಟ್ಟಿದೆ. ಇದರಲ್ಲಿ ಶೇ 50ರಷ್ಟು ರೈಲ್ವೆ ಯೋಜನೆಗಳಾಗಿವೆ ಎಂದು ಕಂಪನಿ ತಿಳಿಸಿದೆ.

ಮಧ್ಯ ಏಷ್ಯಾ, ಅರಬ್ ಸಂಯುಕ್ತ ಸಂಸ್ಥಾನ (ಯುಎಇ), ಪಶ್ಚಿಮ ಏಷ್ಯಾ ಸೇರಿದಂತೆ ವಿದೇಶಿ ಮಾರುಕಟ್ಟೆಗಳಲ್ಲಿ ಹೊಸ ಯೋಜನೆಗಳನ್ನು ಹುಡುಕುತ್ತಿದೆ ಎಂದು ಆರ್‌ವಿಎನ್‌ಎಲ್‌ನ ಆಡಳಿತ ಮಂಡಳಿಯು ಹೂಡಿಕೆದಾರರಿಗೆ ತಿಳಿಸಿದೆ.

ಒಟ್ಟು ಯೋಜನೆಗಳಲ್ಲಿ ವಂದೇ ಭಾರತ್ ರೈಲಿನ ಪಾಲು ₹9 ಸಾವಿರ ಕೋಟಿ ಮತ್ತು ಹಲವು ಮೆಟ್ರೋ ಯೋಜನೆಗಳ ಮೊತ್ತವು ₹7 ಸಾವಿರ ಕೋಟಿ ಇದೆ. ಇದಲ್ಲದೆ ಕಂಪನಿಯು, ವಿದ್ಯುದ್ದೀಕರಣ, ಪ್ರಸರಣ ಮಾರ್ಗ ಮತ್ತು ಇತರ ಯೋಜನೆಗಳನ್ನು ಸಹ ಪಡೆದುಕೊಂಡಿದೆ.

ರೈಲ್ವೆ ಸಚಿವಾಲಯದ ಅಡಿಯಲ್ಲಿ ಬರುವ ಆರ್‌ವಿಎನ್‌ಎಲ್, ಯೋಜನಾ ಅಭಿವೃದ್ಧಿ, ಹಣಕಾಸು ಮತ್ತು ರೈಲು ಮೂಲಸೌಕರ್ಯಕ್ಕೆ ಸಂಬಂಧಿಸಿದ ಯೋಜನೆಗಳ ಅನುಷ್ಠಾನದಲ್ಲಿ ತೊಡಗಿಸಿಕೊಂಡಿದೆ.

ಕರ್ನಾಟಕ ಬ್ಯಾಂಕ್ ಶತಮಾನೋತ್ಸವದಲ್ಲಿ ₹100ರ ನಾಣ್ಯ ಬಿಡುಗಡೆ

‘ಸ್ವಾಭಿಮಾನ ಕಾಯುವ ಬ್ಯಾಂಕ್ ಆಗಲಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಕರ್ನಾಟಕ ಬ್ಯಾಂಕ್, ವಿಜಯ ಬ್ಯಾಂಕ್, ಕೆನರಾ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್ ಹಾಗೂ ಸಿಂಡಿಕೇಟ್ ಬ್ಯಾಂಕ್ ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಇವುಗಳಲ್ಲಿ ಕೆಲವು ಬೇರೆ ಬ್ಯಾಂಕ್‌ಗಳ ಜೊತೆ ವಿಲೀನವಾಗಿವೆ. ಕರ್ನಾಟಕ ಬ್ಯಾಂಕ್ ಬೇರೆ ಬ್ಯಾಂಕ್‌ಗಳನ್ನು ತನ್ನ ತೆಕ್ಕೆಗೆ ಪಡೆದು ಬಲಿಷ್ಠವಾಗಿ ಬೆಳೆದು, ರಾಜ್ಯದ ಸ್ವಾಭಿಮಾನ ಕಾಪಾಡುವ ಬ್ಯಾಂಕ್ ಆಗಿ ಹೊರಹೊಮ್ಮಬೇಕು’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕರ್ನಾಟಕ ಬ್ಯಾಂಕಿನ ಶತಮಾನೋತ್ಸವದ ಲಾಂಛನವಿರುವ ₹100ರ ವಿಶೇಷ ನಾಣ್ಯ, ಬ್ಯಾಂಕಿನ ಕೇಂದ್ರ ಕಚೇರಿಯ ಚಿತ್ರವಿರುವ ₹5ರ ಅಂಚೆ ಚೀಟಿ ಹಾಗೂ ಸ್ಮರಣ ಸಂಚಿಕೆಗಳನ್ನು ಬ್ಯಾಂಕಿನ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿ ಅವರು ಭಾನುವಾರ ಮಾತನಾಡಿದರು.

‘ಸಾಮಾನ್ಯ ಜನರಿಗೆ, ಗ್ರಾಮೀಣ ಭಾಗದ ಕೃಷಿಕರಿಗೆ ಸೇವೆ ನೀಡುತ್ತಾ ಬಂದ ಬ್ಯಾಂಕ್ ಇದು. ಬೆಳೆಯುವ ಭರದಲ್ಲಿ ಬೇರು ಹಾಗೂ ಇತಿಹಾಸವನ್ನು ಮರೆಯಬೇಡಿ. ಕರಾವಳಿಯ ಮಣ್ಣಿನಲ್ಲಿ ವಿಶೇಷ ಗುಣವಿದೆ. ಈ ನೆಲದ ನಂಟನ್ನು ಕಳೆದುಕೊಳ್ಳಬೇಡಿ’ ಎಂದರು.

ಕರ್ನಾಟಕ ಬ್ಯಾಂಕಿನ ಶತಮಾನೋತ್ಸವದ ಅಂಗವಾಗಿ ಮಂಗಳೂರಿನಲ್ಲಿ ಭಾನುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಡಿ.ಕೆ.ಶಿವಕುಮಾರ್ ಅವರು ₹100ರ ಹೊಸ ನಾಣ್ಯವನ್ನು ಬಿಡುಗಡೆ ಮಾಡಿದರು. ರಾಜೇಂದ್ರ ಕುಮಾರ್, ಪಿ.ಪ್ರದೀಪ್ ಕುಮಾರ್, ಆರ್.ವೆಂಕಟರಮಣಿ, ಎಚ್.ಶ್ರೀಕೃಷ್ಣನ್ ಹಾಗೂ ಶೇಖರ್ ರಾವ್ ಭಾಗವಹಿಸಿದ್ದರು– ಪ್ರಜಾವಾಣಿ ಚಿತ್ರ

ಬ್ಯಾಂಕನ್ನು ಆರಂಭಿಸಿದ್ದ 9 ಮಂದಿ ನಿರ್ದೇಶಕ ಭಾವಚಿತ್ರಗಳಿರುವ ವಿಶೇಷ ಅಂಚೆ ಲಕೋಟೆಯನ್ನು ಬಿಡುಗಡೆ ಮಾಡಿದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ‘ಕಾಶ್ಮೀರದ ಶ್ರೀನಗರದಿಂದ ಕನ್ಯಾಕುಮಾರಿಯವರೆಗೂ ಶಾಖೆಗಳನ್ನು ಆರಂಭಿಸುವ ಮೂಲಕ ಕರ್ನಾಟಕ ಬ್ಯಾಂಕ್ ಭಾರತ್ ಜೋಡೊ ಯಾತ್ರೆಯನ್ನು ನಿಜವಾದ ಅರ್ಥದಲ್ಲಿ ಸಾಕಾರಗೊಳಿಸಬೇಕು’ ಎಂದರು.

‘ಜಾಗತಿಕ ಬ್ಯಾಂಕಿಂಗ್ ರಂಗ ಏಳು–ಬೀಳುಗಳನ್ನು ಕಾಣುತ್ತಿದೆ. ಇಟಲಿ, ಸ್ಪೇನ್, ಗ್ರೀಸ್ ಸೇರಿದಂತೆ ಜಗತ್ತಿನ ಅನೇಕ ದೇಶಗಳು ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದ್ದು, ಪರಿಹಾರದ ದಾರಿಗಾಗಿ ಭಾರತದತ್ತ ಮುಖಮಾಡಿವೆ. ನಮ್ಮ ದೇಶಕ್ಕೆ ಅಂತಹ ಚೈತನ್ಯ ಇದೆ. ಜಗತ್ತಿನ ಬ್ಯಾಂಕಿಂಗ್ ರಂಗಕ್ಕೆ ದಾರಿದೀಪವಾಗಬಲ್ಲ ಆರ್ಥಿಕ ವ್ಯವಹಾರಗಳ ಸಂಶೋಧನಾ ಸಂಸ್ಥೆಯನ್ನು ಕರ್ನಾಟಕ ಬ್ಯಾಂಕ್ ಸ್ಥಾಪಿಸಬೇಕು’ ಎಂದು ಸಲಹೆ ನೀಡಿದರು.

ಒಂಬತ್ತು ಮಂದಿ ನಿರ್ದೇಶಕರು ಸೇರಿಕೊಂಡು ಮಂಗಳೂರಿನ ಡೊಂಗರಕೇರಿಯ ಬೀದಿಯಲ್ಲಿ ಬಿ.ಆರ್. ವ್ಯಾಸರಾಯ ಆಚಾರ್ ಅಧ್ಯಕ್ಷತೆಯಲ್ಲಿ 1924ರಲ್ಲಿ ಆರಂಭಿಸಿದ ಕರ್ನಾಟಕ ಬ್ಯಾಂಕಿನ ನೂರು ವರ್ಷಗಳ ಇತಿಹಾಸವನ್ನು ಹಾಗೂ ಭವಿಷ್ಯದ ಯೋಜನೆಗಳನ್ನು ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಕೃಷ್ಣನ್ ಎಚ್. ವಿವರಿಸಿದರು.

ಕರ್ನಾಟಕ ವೃತ್ತದ ಪೋಸ್ಟ್ ಮಾಸ್ಟರ್ ಜನರಲ್ ರಾಜೇಂದ್ರ ಕುಮಾರ್, ಬ್ಯಾಂಕಿನ ಅಧ್ಯಕ್ಷ ಪಿ. ಪ್ರದೀಪ್ ಕುಮಾರ್, ಕಾರ್ಯಕಾರಿ ನಿರ್ದೇಶಕ ಶೇಖರ್ ರಾವ್ ಭಾಗವಹಿಸಿದ್ದರು.

ಚುನಾವಣೆ ಅಕ್ರಮ ತನಿಖೆಗೆ ಸಮಿತಿ

ಇಸ್ಲಾಮಾಬಾದ್ (ಪಿಟಿಐ): ಚುನಾವಣೆಯಲ್ಲಿ ವ್ಯಾಪಕ ಅಕ್ರಮ ನಡೆದಿದೆ ಎಂಬ ಹಿರಿಯ ಅಧಿಕಾರಿಯೊಬ್ಬರ ಆರೋಪ ಕುರಿತು ತನಿಖೆ ನಡೆಸಲು ಪಾಕಿಸ್ತಾನ ಚುನಾವಣಾ ಆಯೋಗವು ಭಾನುವಾರ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ.

ರಾವಲ್ಪಿಂಡಿಯ ಮಾಜಿ ಆಯುಕ್ತ ಲಿಯಾಖತ್ ಅಲಿ ಛತ್ತಾ ಈ ಆರೋಪ ಮಾಡಿದ್ದರು. ಅಕ್ರಮದಲ್ಲಿ ಚುನಾವಣಾ ಆಯೋಗ ಮತ್ತು ಮುಖ್ಯ ನ್ಯಾಯಮೂರ್ತಿ ಭಾಗಿಯಾಗಿದ್ದಾರೆ ಎಂದು ಟೀಕಿಸಿದ್ದರು. ‘ಅಕ್ರಮದ ಹೊಣೆ ಹೊತ್ತು ನನ್ನ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ’ ಎಂದೂ ಹೇಳಿದ್ದರು.

ರಾವಲ್ಪಿಂಡಿಯಲ್ಲಿಯೇ ಒಟ್ಟು 13 ಅಭ್ಯರ್ಥಿಗಳನ್ನು ಒತ್ತಾಯಪೂರ್ವಕವಾಗಿ ವಿಜಯಿ ಎಂದು ಘೋಷಿಸಲಾಗಿದೆ ಎಂದೂ ಅಧಿಕಾರಿ ಆರೋಪಿಸಿದ್ದರು. ಆದರೆ, ಈ ಆರೋಪವನ್ನು ಚುನಾವಣಾ ಆಯೋಗವು ತಳ್ಳಿಹಾಕಿತ್ತು.

ಉನ್ನತ ಮಟ್ಟದ ಸಮಿತಿಯು ಆರೋಪ ಕೇಳಿಬಂದಿರುವ ಜಿಲ್ಲೆಗಳ ಚುನಾವಣಾಧಿಕಾರಿಗಳು, ಸಂಬಂಧಿತ ಅಧಿಕಾರಿಗಳ ಹೇಳಿಕೆ ದಾಖಲಿಸಿ, ಮೂರು ದಿನದಲ್ಲಿ ವರದಿ ಸಲ್ಲಿಸಲಿದೆ.

ರಾಜೀನಾಮೆಗೆ ಆಗ್ರಹ: ಆರೋಪಗಳ ಹಿನ್ನೆಲೆಯಲ್ಲಿ ಸಿಇಸಿ, ಮುಖ್ಯನ್ಯಾಯಮೂರ್ತಿ ರಾಜೀನಾಮೆ ನೀಡಬೇಕು. ಆರೋಪ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಮಾಜಿ ಪ್ರಧಾನಿ ಇಮ್ರಾನ್ ಖಾನ್ ಒತ್ತಾಯಿಸಿದ್ದಾರೆ.

‘ಮೈತ್ರಿ ಸರ್ಕಾರ: ಇನ್ನೂ ಮೂಡದ ಒಮ್ಮತ’

ಇಸ್ಲಾಮಾಬಾದ್ (ಪಿಟಿಐ): ಮೈತ್ರಿ ಸರ್ಕಾರ ರಚನೆ ಕುರಿತು ಪಾಕಿಸ್ತಾನ್ ಮುಸ್ಲಿಂ ಲೀಗ್–ನವಾಜ್ (ಪಿಎಂಎಲ್–ಎನ್) ಮತ್ತು ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ (ಪಿಟಿಐ) ನಡುವೆ ಚರ್ಚೆಯಲ್ಲಿ ಗಮನಾರ್ಹ ಪ್ರಗತಿ ಕಂಡುಬಂದಿದೆ ಎಂದು ಉಭಯ ಪಕ್ಷಗಳು ಹೇಳಿವೆಯಾದರೂ ಇನ್ನೂ ಒಮ್ಮತ ಮೂಡಿಲ್ಲ.

ಎರಡೂ ಪಕ್ಷಗಳ ಮುಖಂಡರ ನಡುವೆ ಸೋಮವಾರ ಮತ್ತೊಂದು ಸುತ್ತಿನ ಚರ್ಚೆ ನಡೆಯಲಿದೆ. ಈ ಮಧ್ಯೆ, ಪಿಎಂಎಲ್ –ಎನ್ ಪಕ್ಷವು ಪ್ರಧಾನಿ ಸ್ಥಾನಕ್ಕೆ ಮಾಜಿ ಪ್ರಧಾನಿ ಶೆಹಬಾಜ್ ಷರೀಫ್ ಅವರನ್ನು ಹೆಸರಿಸಿದೆ.

‘ಕಾನೂನನ್ನು ಎಲ್ಲರೂ ಪಾಲಿಸಲೇಬೇಕು’

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಮೇಲೆ ನಿರ್ಬಂಧ ಪ್ರಕರಣ

ನವದೆಹಲಿ (ಪಿಟಿಐ): ‘ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ನ ಮೇಲೆ ಆರ್‌ಬಿಐ ಹೇರಿರುವ ನಿರ್ಬಂಧವು ಇತರೆ ಹಣಕಾಸು ತಂತ್ರಜ್ಞಾನ ಕಂಪನಿಗಳಿಗೆ ಎಚ್ಚರಿಕೆ ಸಂದೇಶ ರವಾನಿಸಿದೆ. ನೆಲದ ಕಾನೂನನ್ನು ಎಂದಿಗೂ ಮೀರಬಾರದು ಎಂಬುದನ್ನು ಈ ಕಂಪನಿಗಳು ಮರೆಯಬಾರದು’ ಎಂದು ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಕುರಿತು ಆರ್‌ಬಿಐ ಕೈಗೊಂಡಿರುವ ನಿರ್ಧಾರವು, ಹಣಕಾಸು ತಂತ್ರಜ್ಞಾನ ಕಂಪನಿಗಳು ತಳಮಳಗೊಳ್ಳುವಂತೆ ಮಾಡಿದೆ ಎಂಬ ವಾದವನ್ನು ಸಚಿವ ರಾಜೀವ್ ಅವರು ಅಲ್ಲಗಳೆದರು. ‘ಈ ಇಡೀ ಪ್ರಕರಣವನ್ನು ತಪ್ಪಾಗಿ ಗ್ರಹಿಸಲಾಗುತ್ತಿದೆ. ಭಾರತದ್ದೇ ಕಂಪನಿಯಾಗಿರಲಿ, ವಿದೇಶಿ ಕಂಪನಿಯೇ ಆಗಿರಲಿ ಭಾರತದ ಕಾನೂನನ್ನು ಅನುಸರಿಸಲೇಬೇಕು’ ಎಂದರು.

‘ಒಬ್ಬ ಮಹಾತ್ವಾಕಾಂಕ್ಷಿ ಉದ್ಯಮಿಯು ತನ್ನಲ್ಲಿಯೇ ಅಪಾರ ನಂಬಿಕೆ ಇಡುತ್ತಾನೆ ಮತ್ತು ತನ್ನ ಕಂಪನಿಯನ್ನು ಎತ್ತರಕ್ಕೆ ಕೊಂಡೊಯ್ಯಲು ಶ್ರಮ ಹಾಕುತ್ತಾನೆ. ಆದರೆ, ಏನನ್ನು ಮಾಡಬೇಕು, ಏನನ್ನು ಮಾಡಬಾರದು ಎಂಬ ನಿಯಮಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲನಾಗುತ್ತಾನೆ. ಅದು ಸಾಮಾಜಿಕ ಜಾಲತಾಣ ಕಂಪನಿಯೇ ಆಗಿರಲಿ ಅಥವಾ ಹಣಕಾಸು ತಂತ್ರಜ್ಞಾನ ಕಂಪನಿಯೇ ಆಗಿರಲಿ, ನಿಯಮಗಳನ್ನು ಮೀರಿ ತಪ್ಪಿಸಿಕೊಳ್ಳಬಹುದು ಎಂಬ ಮನಃಸ್ಥಿತಿ ಮಾತ್ರ ಇಲ್ಲ ಎಂದೇ ಈ ಪ್ರಕರಣವನ್ನು ನಾನು ಅರ್ಥೈಸುತ್ತೇನೆ’ ಎಂದು ಅವರು ಹೇಳಿದರು.

ಹಣಕಾಸು ತಂತ್ರಜ್ಞಾನ ಕಂಪನಿಗಳಿಗೆ ಸಂಬಂಧಿಸಿ ನಿಯಮ ರೂಪಿಸುವುದು ಆರ್‌ಬಿಐ. ಆರ್‌ಬಿಐ ಮಾತನ್ನು ಕೇಳಲೇಬೇಕು, ಅದರ ನಿಯಮಗಳನ್ನು ಅನುಸರಿಸಲೇಬೇಕು

ರಾಜೀವ್ ಚಂದ್ರಶೇಖರ್, ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ

ಆರ್ಥಿಕ ಚಟುವಟಿಕೆಗಳು ಬಿರುಸಾಗಿದ್ದು ಕಾರಣ

ವಿದ್ಯುತ್ ಬಳಕೆ ಶೇ 7.5 ಹೆಚ್ಚಳ

ನವದೆಹಲಿ (ಪಿಟಿಐ): 2023–24ರ ಹಣಕಾಸು ವರ್ಷದ ಏಪ್ರಿಲ್–ಜನವರಿ ಅವಧಿಯಲ್ಲಿ ದೇಶದಲ್ಲಿ 1.35 ಲಕ್ಷ ಕೋಟಿ ಯೂನಿಟ್ (1354.97 ಬಿಲಿಯನ್ ಯೂನಿಟ್) ವಿದ್ಯುತ್ ಬಳಕೆ ಆಗಿದೆ ಎಂದು ಸರ್ಕಾರದ ಅಂಕಿ–ಅಂಶಗಳು ತಿಳಿಸಿವೆ. ಆರ್ಥಿಕ ಚಟುವಟಿಕೆಗಳ ಹೆಚ್ಚಳದಿಂದಾಗಿ ಈ ಏರಿಕೆಯಾಗಿದೆ.

ಹಿಂದಿನ ಇದೇ ಅವಧಿಯಲ್ಲಿ 1.25 ಲಕ್ಷ ಕೋಟಿ ಯೂನಿಟ್ (1259.49 ಬಿಲಿಯನ್ ಯೂನಿಟ್) ಬಳಕೆ ಆಗಿತ್ತು. ಇದಕ್ಕೆ ಹೋಲಿಸಿದರೆ ಪ್ರಸಕ್ತ ಅವಧಿಯಲ್ಲಿ ಶೇ7.5ರಷ್ಟು ಏರಿಕೆ ಆಗಿದೆ. 2022–23ರ ಪೂರ್ಣ ಹಣಕಾಸು ವರ್ಷದಲ್ಲಿ ಒಟ್ಟು 1.50 ಲಕ್ಷ ಕೋಟಿ ಯೂನಿಟ್ (1,505.91 ಬಿಲಿಯನ್ ಯೂನಿಟ್) ಬಳಕೆ ಆಗಿತ್ತು ಎಂದು ಅಂಕಿ ಅಂಶಗಳು ತಿಳಿಸಿವೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ 10 ತಿಂಗಳಲ್ಲಿ ಬಳಕೆಯಾದ ವಿದ್ಯುತ್, ದೇಶದಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿನ ಹೆಚ್ಚಳವನ್ನು ತೋರಿಸುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಆರ್ದ್ರ ಹವಾಮಾನ ಮತ್ತು ಹಬ್ಬದ ಋತು ಅಂಗವಾಗಿ ಕೈಗಾರಿಕಾ ಚಟುವಟಿಕೆಗಳು ಹೆಚ್ಚಾಗಿದ್ದವು. ಇದರಿಂದ ವಿದ್ಯುತ್ ಬಳಕೆ ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಫೆಬ್ರುವರಿಯಲ್ಲಿ ಆರ್ಥಿಕ ಚಟುವಟಿಕೆಗಳ ಸುಧಾರಣೆಯಿಂದಾಗಿ ವಿದ್ಯುತ್ ಬಳಕೆ ಸ್ಥಿರವಾಗಿ ಏರಿಕೆಯಾಗುತ್ತಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತವು ವಿದ್ಯುತ್ ಬಳಕೆ ಮತ್ತು ಬೇಡಿಕೆಯಲ್ಲಿ ಸ್ಥಿರವಾದ ಬೆಳವಣಿಗೆಯನ್ನು ಹೊಂದಿರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಜನವರಿಯಲ್ಲಿ 13,318 ಕೋಟಿ ಯೂನಿಟ್ ವಿದ್ಯುತ್ ಬಳಕೆ ಆಗಿದ್ದರೆ, ಹಿಂದಿನ ಇದೇ ಅವಧಿಯಲ್ಲಿ 12,630 ಕೋಟಿ ಯೂನಿಟ್ ಬಳಕೆಯಾಗಿತ್ತು. ಇದಕ್ಕೆ ಹೋಲಿಸಿದರೆ ಪ್ರಸಕ್ತ ಅವಧಿಯಲ್ಲಿ ಒಟ್ಟಾರೆ ಶೇ 5.4ರಷ್ಟು ಹೆಚ್ಚಾಗಿದೆ.

2024ರ ಜನವರಿಯಲ್ಲಿ 222.32 ಗಿಗಾವಾಟ್ ಯೂನಿಟ್, 2023ರ ಜನವರಿಯಲ್ಲಿ 210.72 ಗಿಗಾವಾಟ್ ಯೂನಿಟ್ ಮತ್ತು 2022ರ ಜನವರಿಯಲ್ಲಿ 192.18 ಗಿಗಾವಾಟ್ ಯೂನಿಟ್ ದಿನದ ಗರಿಷ್ಠ ವಿದ್ಯುತ್ ಪೂರೈಕೆ ಆಗಿತ್ತು.

ಚಳಿಯಿಂದಾಗಿ ಹೀಟರ್, ಬ್ಲೋವರ್ ಮತ್ತು ಗೀಸರ್‌ಗಳ ಬಳಕೆ ಹೆಚ್ಚಳದಿಂದಾಗಿಯೂ ವಿದ್ಯುತ್ ಬಳಕೆ ಏರಿಕೆ ಆಗಿದೆ ಎಂದು ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೆಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

ಕನ್ನಡ ಟೆಲಿಕಾಲರ್‌ಗಳು ಬೇಕು. (ತಾಜಾ/ ಅನುಭವಿ)ಸ್ಥಳ: ಮಲ್ಲೇಶ್ವರಂ, ಬೆಂಗಳೂರುಸಂಬಳ (ಮಾಸಿಕ ರೂ. 15000/-), ಕೆಲಸದ ಸಮಯ : ಮಧ್ಯಾಹ್ನ 2:00 ರಿಂದ ರಾತ್ರಿ 8:30, ಆಸಕ್ತರು 7669250202 ಗೆ ಮಿಸ್ಡ್ ಕಾಲ್ ನೀಡಿ

Multiple Vacancy
REQUIRED EXPERIENCED Telecaller & Loan Recovery Supervisor for BankLoan collection. Salary 30,000+ Incentive. 9620206756.

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9035482999/ 6366430366

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

Wanted
ವಿಕೇರ್ ಹೋಂನರ್ಸಿಂಗ್ ಮೈಸೂರು: ಮೈಸೂರಿನಲ್ಲಿ ರೋಗಿಯ ಆರೈಕೆಗೆ ಮಹಿಳಾ ಹೋಂನರ್ಸ್ ಬೇಕಾಗಿದ್ದಾರೆ. ವೇತನ 16,000–23,000/: ಸಂಪರ್ಕಿಸಿ: 9380043696, 6364481333

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಯಿದೆ. 13,000-17,000. 8951315839, 9141634619

ಭವಿಷ್ಯ
Astrology
ವಶೀಕರಣ ಸ್ಪೆಷಲಿಸ್ಟ್, ಕೇರಳದ ಮಾಂತ್ರಿಕರು, ಪ್ರೇಮವಿಚಾರ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ ಅಷ್ಟಮಂಗಲ ಪೂಜೆಯಿಂದ ನಿಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ. 9900574892

ರಿಯಲ್ ಎಸ್ಟೇಟ್ ಸೆಲ್ಲಿಂಗ್
Agricultural Land
South
PREMIUM LAND For Sale 3 Acres at Gopanpally on Kodangal Gulbarga highway Contact 09441070427

ಪ್ರವಾಸ
Travel
29/04/2024 ಮತ್ತು 05/05/2024ರಿಂದ 22ದಿನಗಳ ವಿಮಾನ ಮತ್ತು ಎಸಿ.ಬಸ್ಸಿನಲ್ಲಿ ಬದರಿನಾಥ್, ಕೇದಾರನಾಥ್,ಕಾಶ್ಮೀರ, ಗುಲ್ಮಾರ್ಗ್,ವೈಷ್ಣೋದೇವಿ, ಅಮೃತಸರ,ಕಾಶಿ,ಅಯೋಧ್ಯ ಇತ್ಯಾದಿ 13ದಿನಗಳ ಚಾರದಾಮ್ ಮತ್ತು 27/6/2024ರಿಂದ ಅಮರನಾಥ್ ಯಾತ್ರೆಗಳಿಗೆ ಕೂಡಲೇ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್,164/3 ಮಿನರ್ವ ಬಸ್–ಸ್ಟಾಪ್ ಎದುರು ಆರ್.ವಿ.ರಸ್ತೆ. ಬೆಂಗಳೂರು–04. 8105657052/ 9480182865.

22.02.2024 15.03.2024 ಅಯೋಧ್ಯಾ,ಕಾಶಿ,ಬುದ್ಧಗಯಾ ವೈದ್ಯನಾಥ್.04.03.2024 ಸೋಮನಾಥ್,ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ ಮಹಾಕಾಳೇಶ್ವರ. 02.03.2024 17.03.2024 ಮಹಾಶಿವರಾತ್ರಿ ನೇಪಾಳ,ಮುಕ್ತಿನಾಥ ಪೋಕ್ರ,ಲುಂಬಿನಿ. 11.05.2024 23.05.2024 ಚಾರ್‌ಧಾಮ್ ಪ್ರವಾಸ ಮಧ್ಯ/ದಕ್ಷಿಣಂಧ್ರ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವಲ್‌ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 7204173686 9686708171

ಏಪ್ರಿಲ್ ಮೇ ಜೂನ್ ತಿಂಗಳಲ್ಲಿ 8 ದಿನಗಳ ಕಾಶಿ, ಗಯಾ/ 13 ದಿನಗಳ ಚಾರ್-ಧಾಮ ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯಮುನೋತ್ರಿ, ದೆಹಲಿ/ 5 ದಿನಗಳ ಹರಿದ್ವಾರ್ ಅಮೃತಸರ್ ವೈಷ್ಣೊದೇವಿ ಸಂಪರ್ಕಿಸಿ 'ಶ್ರೀಸುಧಾ ಟ್ರಾವಲ್ಸ್' 080- 22429289 9448119290 9019301300 8088826815

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಭಾರತ ವನಿತೆಯರಿಗೆ ಚೊಚ್ಚಲ ಚಿನ್ನ

ಏಷ್ಯನ್ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಅನ್ಮೋಲ್ ಖರ್ಬ್, ಸಿಂಧು ಅಮೋಘ ಆಟ

ಶಾ ಆಲಂ, ಮಲೇಷ್ಯಾ (ಪಿಟಿಐ): ಭಾರತದ ಕೋಟ್ಯಂತರ ಕ್ರೀಡಾಭಿಮಾನಿಗಳ ನಿರೀಕ್ಷೆಗೆ ತಕ್ಕಂತೆ ಮಹಿಳಾ ಬ್ಯಾಡ್ಮಿಂಟನ್ ತಂಡವು ಏಷ್ಯಾ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದು ಐತಿಹಾಸಿಕ ದಾಖಲೆ ಮಾಡಿತು.

ಭಾನುವಾರ ನಡೆದ ಫೈನಲ್‌ನಲ್ಲಿ ಭಾರತ ತಂಡವು ಯುವ ಆಟಗಾರ್ತಿ ಅನ್ಮೋಲ್ ಖರ್ಬ್ ಅವರ ಅಮೋಘ ಆಟದ ಬಲದಿಂದ 3–2ರಿಂದ ಥಾಯ್ಲೆಂಡ್ ವಿರುದ್ಧ ರೋಚಕ ಜಯ ಸಾಧಿಸಿತು.

ತಂಡ ವಿಭಾಗದಲ್ಲಿ ಭಾರತದ ವನಿತೆಯರು ಗೆದ್ದ ಮೊಟ್ಟಮೊದಲ ಪ್ರಶಸ್ತಿ ಇದಾಗಿದೆ.

ಇದರೊಂದಿಗೆ ಏಪ್ರಿಲ್ 28 ರಿಂದ ಮೇ 5ರವರೆಗೆ ಚೀನಾದಲ್ಲಿ ನಡೆಯಲಿರುವ ಊಬರ್ ಕಪ್ ಟೂರ್ನಿಯಲ್ಲಿ ಉನ್ನತ ಸಾಧನೆ ಮಾಡುವ ವಿಶ್ವಾಸ ತಂಡದಲ್ಲಿ ಮೂಡಿದೆ.

2016 ಮತ್ತು 2020ರ ಟೂರ್ನಿಗಳಲ್ಲಿ ಭಾರತದ ಪುರುಷರ ತಂಡಗಳು ಕಂಚಿನ ಪದಕ ಜಯಿಸಿದ್ದವು. ಆದರೆ ಮಹಿಳೆಯರ ತಂಡವು ಇದೇ ಮೊದಲ ಸಲ ಫೈನಲ್ ಪ್ರವೇಶಿಸಿತ್ತು. ಒಲಿಂಪಿಯನ್ ಪಿ.ವಿ. ಸಿಂಧು ನೇತೃತ್ವದ ತಂಡವು ಚಿನ್ನದ ಸಾಧನೆ ಮಾಡಿತು.

'ಭಾರತದ ಬ್ಯಾಡ್ಮಿಂಟನ್ ಕ್ಷೇತ್ರಕ್ಕೆ ಇದೊಂದು ಮಹತ್ವದ ಸಾಧನೆಯಾಗಿದೆ. ಯುವ ಆಟಗಾರರಿಗೆ ಈ ಶ್ರೇಯ ಸಲ್ಲಬೇಕು. ಅವರು ಅಮೋಘವಾಗಿ ಆಡಿದರು. ತಂಡದಲ್ಲಿದ್ದ ಎಲ್ಲರೂ ಪರಸ್ಪರ ಉತ್ತಮ ಹೊಂದಾಣಿಕೆ ಮತ್ತು ಬೆಂಬಲದೊಂದಿಗೆ ಈ ಸಾಧನೆ ಮಾಡಿದ್ದಾರೆ. ಈ ಹಿಂದೆ ಭಾರತ ತಂಡವು ಥಾಮಸ್ ಕಪ್ ಜಯಿಸಿದ್ದ ರೀತಿಯ ಸಾಧನೆಯನ್ನು ಮಹಿಳಾ ತಂಡವು ನೆನಪಿಸಿದೆ' ಎಂದು ಭಾರತ ತಂಡದ ಮಾಜಿ ಕೋಚ್ ವಿಮಲ್ ಕುಮಾರ್ ಸಂತಸ ವ್ಯಕ್ತಪಡಿಸಿದ್ದಾರೆ.

ಥಾಯ್ಲೆಂಡ್ ವಿರುದ್ಧ ರೋಚಕ ಜಯ ಸಾಧಿಸಿದ ಬಳಿಕ ಭಾರತದ ಅನ್ಮೋಲ್ ಖರ್ಬ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು. ಎಎಫ್‌ಪಿ ಚಿತ್ರ

ಫೈನಲ್‌ನಲ್ಲಿ ಆಡಿದ ಥಾಯ್ಲೆಂಡ್ ತಂಡದಲ್ಲಿ ಇಬ್ಬರು ಪ್ರಮುಖ ಆಟಗಾರ್ತಿಯರು ಇರಲಿಲ್ಲ. ಸಿಂಗಲ್ಸ್‌ನಲ್ಲಿ ವಿಶ್ವ ರ‍್ಯಾಂಕಿಂಗ್‌ನ 13ನೇ ಸ್ಥಾನದಲ್ಲಿರುವ ರಚಾನೊಕ್ ಇಂಟನಾನ್ ಮತ್ತು 16ನೇ ರ‍್ಯಾಂಕ್ ಆಟಗಾರ್ತಿ ಪಾರ್ನ್‌ಪಾವಿ ಚೋಚುವಾಂಗ್ ಅವರು ಈ ಬಾರಿ ಇರಲಿಲ್ಲ.

ಭಾರತದ ಪಿ.ವಿ. ಸಿಂಧು ಗಾಯದಿಂದಾಗಿ ನಾಲ್ಕು ತಿಂಗಳು ವಿಶ್ರಾಂತಿ ಪಡೆದು ಕಣಕ್ಕೆ ಮರಳಿದ್ದಾರೆ. ಈ ಪಂದ್ಯದಲ್ಲಿ ಅವರು ತಂಡಕ್ಕೆ ಉತ್ತಮ ಆರಂಭ ನೀಡಿದರು.

ಎರಡು ಒಲಿಂಪಿಕ್ ಪದಕ ವಿಜೇತ ಆಟಗಾರ್ತಿ ಸಿಂಧು ಮೊದಲ ಸಿಂಗಲ್ಸ್‌ನಲ್ಲಿ 21–12, 21–12ರಿಂದ 17ನೇ ರ‍್ಯಾಂಕ್ ಆಟಗಾರ್ತಿ ಸುಪನಿದಾ ಕೇಟ್‌ಥಾಂಗ್ ವಿರುದ್ಧ ಗೆದ್ದು 1–0 ಮುನ್ನಡೆ ಒದಗಿಸಿದರು.

24ನೇ ರ‍್ಯಾಂಕ್‌ನಲ್ಲಿರುವ ಭಾರತದ ತ್ರಿಸಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ 21–16, 18–21, 21–16ರಿಂದ ಥಾಯ್ಲೆಂಡ್‌ನ 10ನೇ ರ‍್ಯಾಂಕ್ ಜೋಡಿ ಜಾಗ್‌ಕೊಲ್ವಾನ್ ಕಿಟಿತಾರ್ಕುಲ್ ಮತ್ತು ರವಿಂದಾ ಪ್ರಾ ಜೊಂಗ್‌ಜೈ ವಿರುದ್ಧ ಗೆದ್ದು ತಂಡವನ್ನು 2–0 ಮುನ್ನಡೆಗೆ ತಂದರು.

ಆದರೆ ಎರಡನೇ ಸಿಂಗಲ್ಸ್‌ನಲ್ಲಿ ಭಾರತದ ಅಷ್ಮಿತಾ ಚಾಲಿಹಾ 11–21, 14–21ರಿಂದ ಬುಸಾನನ್ ಒಂಗ್‌ಬಾಮ್ರುಂಗ್‌ಪಾನ್ ವಿರುದ್ಧ ಮಣಿದರು.

ಡಬಲ್ಸ್‌ನಲ್ಲಿ 107ನೇ ರ‍್ಯಾಂಕ್ ಜೋಡಿ ಶ್ರುತಿ ಮಿಶ್ರಾ ಮತ್ತು ಪ್ರಿಯಾ ಕೊಂಜೆಂಗ್‌ಬಾಲ್ 11–21, 9–21ರಿಂದ 13ನೇ ರ‍್ಯಾಂಕ್‌ನ ಬೆನಯಾಪಾ ಏಮಸಾರ್ಡ್ ಮತ್ತು ನುನಟಾಕರ್ನ್ ಏಮ್‌ಸಾರ್ಡ್ ವಿರುದ್ಧ ಸೋತರು. ಇದರಿಂದಾಗಿ 2–2ರ ಸಮಬಲವಾಯಿತು. ಈ ಹಂತದಲ್ಲಿ ಮತ್ತೆ ಮಿಂಚಿದ ಅನ್ಮೋಲ್ ಖರ್ಬ್ ತಂಡದ ಚಿನ್ನದ ಕನಸು ಕಮರದಂತೆ ನೋಡಿಕೊಂಡರು. ಸಿಂಗಲ್ಸ್‌ನಲ್ಲಿ ಅನ್ಮೋಲ್ 21–14, 21–9ರಿಂದ ಪಾರ್ನ್‌ಪಿಚಾ ಚೊಯಿಕೀವಾಂಗ್ ವಿರುದ್ಧ ಗೆದ್ದರು.

ಜಯದ ಪಾಯಿಂಟ್ ದಾಖಲಾಗಿದ್ದೇ ತಡ. ತಂಡದ ಎಲ್ಲ ಆಟಗಾರ್ತಿಯರು ಅಂಕಣದತ್ತ ಧಾವಿಸಿ ಅನ್ಮೋಲ್ ಅವರನ್ನು ಹೆಗಲ ಮೇಲೆ ಹೊತ್ತು ಮೆರೆಸಿದರು.

ಸೆಟಿಯಾ ಸಿಟಿ ಕನ್ವೆಷನ್ ಸೆಂಟರ್‌ನಲ್ಲಿ ಭಾರತದ ಆಟಗಾರ್ತಿಯರ ಸಂತಸ ಹೊನಲಾಗಿ ಹರಿಯಿತು. ಪ್ರೇಕ್ಷಕರ ಗ್ಯಾಲರಿಯಲ್ಲಿ ತ್ರಿವರ್ಣ ಧ್ವಜಗಳು ಹಾರಾಡಿದವು.

ALVA'S COLLEGE
Vidyagiri, Moodubidire - 574227, D.K
(Autonomous)
APPOINTMENT
Invites applications for the following positions :
- Registrar Academics
- Deans for UG/PG Departments of Commerce, Management, Science and Humanities
Desired qualities and qualifications :
- Administrative experience in academics
- Ph.D, NET/KSET with a minimum experience of 10 years
- Enthusiastic and self driven to take up projects
- Retired persons having academic background can also apply
Attractive salary will be offered for the deserving candidates
Apply within 10 days of this advertisement
ao@alvascollege.com or administration@alvas.org
9740668967,9591546202

ಟೆಸ್ಟ್; ರೋಹಿತ್ ಬಳಗಕ್ಕೆ ಭಾರಿ ಅಂತರದ ಜಯ; ಸರಣಿಯಲ್ಲಿ 2–1ರ ಮುನ್ನಡೆ

ಯಶಸ್ವಿ ಜೈಸ್ವಾಲ್ ದ್ವಿಶತಕ; ಜಡೇಜ ಕೈಚಳಕ

ಇಂಗ್ಲೆಂಡ್ ಎದುರಿನ ಟೆಸ್ಟ್ ಪಂದ್ಯದಲ್ಲಿ ಜಯ ಗಳಿಸಿದ ಭಾರತ ತಂಡದ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ

ರಾಜ್‌ಕೋಟ್: ಇಲ್ಲಿ ನಡೆದ ಭಾರತ ಮತ್ತು ಇಂಗ್ಲೆಂಡ್ ನಡುವಣ ಮೂರನೇ ಟೆಸ್ಟ್ ಪಂದ್ಯದ ನಾಲ್ಕನೇ ದಿನ ಕಾವೇರಿತು.

ಕಳೆದ ಮೂರು ದಿನಗಳಲ್ಲಿ ಪಾರಮ್ಯ ಸಾಧಿಸಿದ್ದ ಆತಿಥೇಯ ತಂಡದ ವ್ಯವಸ್ಥಾಪಕರು ಭಾನುವಾರ ಇಬ್ಬರು ಯುವ ಬ್ಯಾಟರ್‌ಗಳು ಮೆರೆದಾಡಲು ಅವಕಾಶ ಕೊಟ್ಟರು. ಮಧ್ಯಾಹ್ನ ಇನಿಂಗ್ಸ್‌ಗೆ ಡಿಕ್ಲೇರ್ ಘೋಷಿಸಿ, ಬೌಲರ್‌ಗಳು ಮೇಲುಗೈ ಸಾಧಿಸಲು ಅನುವು ಮಾಡಿಕೊಟ್ಟರು.

ಬ್ಯಾಟರ್‌ಗಳು ಮತ್ತು ಬೌಲರ್‌ಗಳು ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದರಿಂದ ಭಾರತ ತಂಡವು 434 ರನ್‌ಗಳ ದೊಡ್ಡ ಅಂತರದ ಜಯ ಸಾಧಿಸಿತು. ಐದು ಪಂದ್ಯಗಳ ಸರಣಿಯಲ್ಲಿ 2–1ರಿಂದ ಮುನ್ನಡೆ ಸಾಧಿಸಿತು.

ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ದ್ವಿಶತಕ ಹೊಡೆದರೆ, ಪದಾರ್ಪಣೆ ಪಂದ್ಯವಾಡಿದ ಸರ್ಫರಾಜ್ ಖಾನ್ ಸತತ ಎರಡನೇ ಇನಿಂಗ್ಸ್‌ನಲ್ಲಿಯೂ ಅರ್ಧಶತಕ ದಾಖಲಿಸಿದರು. ಇದರಿಂದಾಗಿ ತಂಡವು ಎರಡನೇ ಇನಿಂಗ್ಸ್‌ನಲ್ಲಿ 98 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 430 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. 557 ರನ್‌ಗಳ ಬೃಹತ್ ಗುರಿಯೊಡ್ಡಿತು.

ಸವಾಲು ಬೆನ್ನಟ್ಟಿದ ಪ್ರವಾಸಿ ಬಳಗವು 'ಬಾಝ್‌ಬಾಲ್' ತಂತ್ರಗಾರಿಕೆ ಬಿಡಿ, ಕನಿಷ್ಠ ಡ್ರಾ ಸಾಧಿಸುವ ಪ್ರಯತ್ನ ಕೂಡ ಮಾಡಲಿಲ್ಲ.

ರವೀಂದ್ರ ಜಡೇಜ (41ಕ್ಕೆ5) ಬೌಲಿಂಗ್ ಮುಂದೆ ಬ್ಯಾಟರ್‌ಗಳು ತರಗೆಲೆಗಳಂತೆ ಉರುಳಿದರು. ಕಡಿಮೆ ಎತ್ತರದಲ್ಲಿ ಚೆಂಡು ಪುಟಿಯುತ್ತಿದ್ದ ಪಿಚ್‌ನಲ್ಲಿ ಬ್ಯಾಟಿಂಗ್ ಕಷ್ಟವೇನೂ ಆಗಿರಲಿಲ್ಲ.

ಆದರೆ ಇಂಗ್ಲೆಂಡ್ 39.4 ಓವರ್‌ಗಳಲ್ಲಿ 122 ರನ್ ಗಳಿಸಿ ಆಲೌಟ್ ಆಯಿತು. ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ತಂಡವು ದಾಖಲಿಸಿದ ಅತಿ ದೊಡ್ಡ ಅಂತರದ ಗೆಲುವಾಗಿದೆ.

ಇಂಗ್ಲೆಂಡ್‌ನ ಅಗ್ರ ಬ್ಯಾಟರ್‌ಗಳು ರನ್ ಗಳಿಸಲು ಪರದಾಡಿದ ಅದೇ ಪಿಚ್‌ನಲ್ಲಿ ಹತ್ತನೇ ಕ್ರಮಾಂಕದ ಬ್ಯಾಟರ್ ಮಾರ್ಕ್ ವುಡ್ (33; 15ಎ) ದಿಟ್ಟತನ ತೋರಿಸಿದರು. ಅವರಿಗೆ ಟಾಮ್ ಹಾರ್ಟ್ಲಿ (16 ರನ್) ಜೊತೆ ನೀಡಿದರು. ಅದರಿಂದಾಗಿ ತಂಡವು ಮೂರಂಕಿ ಮೊತ್ತದ ಗಡಿ ದಾಟಿತು. ಬೆನ್ ಸ್ಟೋಕ್ಸ್ ಬಳಗವು 91 ರನ್‌ಗಳಿಗೇ 9 ವಿಕೆಟ್ ಕಳೆದುಕೊಂಡಿತ್ತು.

'ನಮ್ಮ ವಿನೂತನ ತಂತ್ರಗಾರಿಕೆಯ ಮೂಲಕ ಯಾವುದೇ ಮೊತ್ತದ ಗುರಿಯನ್ನೂ ಬೆನ್ನಟ್ಟುವ ಸಾಮರ್ಥ್ಯ ತಮಗಿದೆ' ಎಂದು ಈಚೆಗೆ ಬೌಲರ್ ಜೇಮ್ಸ್ ಆ್ಯಂಡರ್ಸನ್ ಹೇಳಿದ್ದರು. ಆದರೆ, ಆ ಮಾತುಗಳು ಇಲ್ಲಿ ಹುಸಿಯಾದವು. ಮೊದಲ ಇನಿಂಗ್ಸ್‌ನಲ್ಲಿ ಭಾರತ ಗಳಿಸಿದ್ದ 445 ರನ್‌ಗಳಿಗೆ ಉತ್ತರವಾಗಿ 319 ರನ್ ಗಳಿಸಿತ್ತು. ಸ್ಟೋಕ್ಸ್ ಬಳಗದ ಎರಡನೇ ಇನಿಂಗ್ಸ್ ಬ್ಯಾಟಿಂಗ್ ಮಾತ್ರ ಕಳಪೆಯಾಗಿತ್ತು.

ಯಶಸ್ವಿ–ಖಾನ್ ಅಬ್ಬರ: ಟೆಸ್ಟ್ ಕ್ರಿಕೆಟ್‌ನಲ್ಲಿ ಸತತ ಎರಡು ಪಂದ್ಯಗಳಲ್ಲಿ ದ್ವಿಶತಕಗಳನ್ನು ಗಳಿಸಿದ ಭಾರತದ ಮೂರನೇ ಆಟಗಾರ ಎಂಬ ಶ್ರೇಯಕ್ಕೆ ಯಶಸ್ವಿ ಜೈಸ್ವಾಲ್ ಪಾತ್ರರಾದರು. ವಿನೋದ್ ಕಾಂಬ್ಳಿ ಮತ್ತು ವಿರಾಟ್ ಕೊಹ್ಲಿ ಅವರ ಸಾಲಿಗೆ ಯಶಸ್ವಿ ಸೇರಿದರು.

ಶನಿವಾರ ದಿನದಾಟದಲ್ಲಿ ಶತಕ ಗಳಿಸಿದ್ದ ಅವರು ಬೆನ್ನುನೋವಿನಿಂದಾಗಿ ಪೆವಿಲಿಯನ್‌ಗೆ ತೆರಳಿ ವಿಶ್ರಾಂತಿ ಪಡೆದಿದ್ದರು. ನಾಲ್ಕನೇ ದಿನ ಪಿಚ್‌ಗೆ ಮರಳಿದ ಜೈಸ್ವಾಲ್ ಎದುರಾಳಿ ಬೌಲರ್‌ಗಳ ಬೆವರಿಳಿಸಿದರು. ಇನಿಂಗ್ಸ್‌ನಲ್ಲಿ ಒಂದು ಡಜನ್ ಸಿಕ್ಸರ್ ಸಿಡಿಸಿದ ಅವರು ಅಜೇಯ 214 ರನ್ ಗಳಿಸಿದರು. ಈಚೆಗೆ ವಿಶಾಖಪಟ್ಟಣದಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿಯೂ ಅವರು ದ್ವಿಶತಕ ಗಳಿಸಿದ್ದರು.

ಆದರೆ ಶುಭಮನ್ ಗಿಲ್ (91 ರನ್) ಅವರಿಗೆ ಶತಕ ಪೂರೈಸುವ ಅದೃಷ್ಟ ಲಭಿಸಲಿಲ್ಲ. ಅವರು ರನೌಟ್ ಆದರು.

ಜೈಸ್ವಾಲ್ ಅವರೊಂದಿಗೆ ಸೇರಿದ ಸರ್ಫರಾಜ್ ಖಾನ್ (ಅಜೇಯ 68) ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 172 ರನ್ (158ಎಸೆತ) ಸೇರಿಸಿದರು. ಈ ಸಂದರ್ಭದಲ್ಲಿ ಡಿಕ್ಲೇರ್ ಘೋಷಿಸಿದ ನಾಯಕ ರೋಹಿತ್ ಶರ್ಮಾ ಬ್ಯಾಟರ್‌ಗಳನ್ನು ಪೆವಿಲಿಯನ್‌ಗೆ ಮರಳಲು ಡ್ರೆಸ್ಸಿಂಗ್ ರೂಮ್‌ನಿಂದ ಕೈಸನ್ನೆ ಮಾಡಿದರು. ಆದರೆ, ಇನ್ನೂ ಬ್ಯಾಟ್ ಮಾಡುವ ಮನಸ್ಥಿತಿ ಯಲ್ಲಿದ್ದ ಇಬ್ಬರೂ ನಿಧಾನವಾಗಿ ಹೆಜ್ಜೆ ಹಾಕಿದಾಗ, ತುಸು ಕೋಪಗೊಂಡ ರೋಹಿತ್ 'ಕ್ರೀಸ್‌ಗೆ ಮರಳಿ ಆಡಿ..' ಎಂದು ಸನ್ನೆ ಮಾಡಿದ್ದು ಕ್ರೀಡಾಂಗಣದಲ್ಲಿದ್ದವರಲ್ಲಿ ನಗೆಯುಕ್ಕಿಸಿತು. ಆದರೆ ಕೆಲವೇ ಹೊತ್ತಿನಲ್ಲಿ ರೋಹಿತ್ ನಿರ್ಧಾರ ಸರಿ ಎಂಬುದು ತಿಳಿಯಿತು. ಕೇವಲ 40 ಓವರ್‌ಗಳಲ್ಲಿ ಭಾರತದ ಬೌಲಿಂಗ್ ಪಡೆ ಇಂಗ್ಲೆಂಡ್ ಬಳಗದ ಹೆಡೆಮುರಿ ಕಟ್ಟಿತು. ಇನ್ನೂ ಒಂದು ದಿನ ಬಾಕಿಯಿರುವಾಗಲೇ ಪಂದ್ಯ ಮುಗಿಯಿತು.

ಭಾರತಕ್ಕೆ ಭಾರಿ ಅಂತರದ ಜಯ (ರನ್‌ಗಳು)

ಅಂತರ	ಎದುರಾಳಿ	ಸ್ಥಳ	ವರ್ಷ
434	ಇಂಗ್ಲೆಂಡ್	ರಾಜ್‌ಕೋಟ್	2024
372	ನ್ಯೂಜಿಲೆಂಡ್	ಮುಂಬೈ	2021
337	ದಕ್ಷಿಣ ಆಫ್ರಿಕಾ	ದೆಹಲಿ	2015
321	ನ್ಯೂಜಿಲೆಂಡ್	ಇಂದೋರ್	2016
320	ಆಸ್ಟ್ರೇಲಿಯಾ	ಮೊಹಾಲಿ	2008

ಟೆಸ್ಟ್‌ನ ಒಂದು ಇನ್ನಿಂಗ್ಸ್‌ನಲ್ಲಿ ಅತಿ ಹೆಚ್ಚು ಸಿಕ್ಸರ್‌ಗಳು

ಆಟಗಾರ	ಸಿಕ್ಸರ್	ದೇಶ	ಎದುರಾಳಿ
ವಾಸಿಂ ಅಕ್ರಂ	12	ಪಾಕಿಸ್ತಾನ	ಜಿಂಬಾಬ್ವೆ
ಯಶಸ್ವಿ ಜೈಸ್ವಾಲ್	12	ಭಾರತ	ಇಂಗ್ಲೆಂಡ್
ನೇಥನ್ ಆಸ್ಟಲ್	11	ನ್ಯೂಜಿಲೆಂಡ್	ಇಂಗ್ಲೆಂಡ್
ಮ್ಯಾಥ್ಯೂ ಹೇಡನ್	11	ಆಸ್ಟ್ರೇಲಿಯಾ	ಜಿಂಬಾಬ್ವೆ
ಬ್ರೆಂಡನ್ ಮೆಕ್ಕಲಂ	11	ನ್ಯೂಜಿಲೆಂಡ್	ಪಾಕಿಸ್ತಾನ
ಬ್ರೆಂಡನ್ ಮೆಕ್ಕಲಂ	11	ನ್ಯೂಜಿಲೆಂಡ್	ಶ್ರೀಲಂಕಾ
ಬೆನ್ ಸ್ಟೋಕ್ಸ್	11	ಇಂಗ್ಲೆಂಡ್	ದಕ್ಷಿಣ ಆಫ್ರಿಕಾ
ಕುಸಾಲ್ ಮೆಂಡಿಸ್	11	ಶ್ರೀಲಂಕಾ	ಐರ್ಲೆಂಡ್
ವಾಲಿ ಹ್ಯಾಮಂಡ್	10	ಇಂಗ್ಲೆಂಡ್	ನ್ಯೂಜಿಲೆಂಡ್

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 445 (130.5 ಓವರ್‌ಗಳಲ್ಲಿ)
ಇಂಗ್ಲೆಂಡ್ 319 (71.1 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್, ಭಾರತ 98 ಓವರ್‌ಗಳಲ್ಲಿ 4ಕ್ಕೆ 430 ಡಿಕ್ಲೇರ್ಡ್ (ಶನಿವಾರ 51 ಓವರ್‌ಗಳಲ್ಲಿ 2ಕ್ಕೆ 196)

ಯಶಸ್ವಿ ಔಟಾಗದೆ 214 (236ಎ, 4X14, 6X12)
ರೋಹಿತ್ ಎಲ್‌ಬಿಡಬ್ಲ್ಯು ಬಿ ರೂಟ್ 19 (28ಎ 4X3)
ಗಿಲ್ ರನ್ ಔಟ್ (ಸ್ಟೋಕ್ಸ್/ಹಾರ್ಟ್ಲಿ) 91 (151ಎ, 4X9, 6X2)
ರಜತ್ ಸಿ ರೆಹಾನ್ ಬಿ ಹಾರ್ಟ್ಲಿ 0 (10ಎ)
ಕುಲದೀಪ್ ಸಿ ರೂಟ್ ಬಿ ರೆಹಾನ್ 27 (91ಎ, 4X3, 6X1)
ಸರ್ಫರಾಜ್ ಔಟಾಗದೆ 68 (72ಎ, 4X6, 6X3)
ಇತರೆ: 11 (ವೈಡ್ 2, ಲೈಗ್‌ಬೈ 9)
ವಿಕೆಟ್ ಪತನ: 1–30 (ರೋಹಿತ್ ಶರ್ಮಾ:11.3), 2–191 (ರಜತ್ ಪಾಟೀದಾರ್: 47.4), 3–246 (ಶುಭಮನ್ ಗಿಲ್ 63.6), 4–258 (ಕುಲದೀಪ್ ಯಾದವ್ 71.4)
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 13–1–78–0, ಜೋ ರೂಟ್ 27–3–111–1, ಟಾಮ್ ಹಾರ್ಟ್ಲಿ 23–2–78–1, ಮಾರ್ಕ್ ವುಡ್ 10–0–46–0, ರೆಹಾನ್ ಅಹಮದ್ 25–1–108–1

ಇಂಗ್ಲೆಂಡ್ ಎರಡನೇ ಇನಿಂಗ್ಸ್ 39.4 ಓವರ್‌ಗಳಲ್ಲಿ 122

ಕ್ರಾಲಿ ಎಲ್‌ಬಿಡಬ್ಲ್ಯು ಬೂಮ್ರಾ 11 (26ಎ, 4X2)
ಡಕೆಟ್ ರನ್‌ಔಟ್ (ಮೊಹಮ್ಮದ್ ಸಿರಾಜ್/ಜುರೇಲ್) 4 (15ಎ)
ಪೋಪ್ ಸಿ ಶರ್ಮಾ ಬಿ ಜಡೇಜ 3 (14ಎ)
ರೂಟ್ ಎಲ್‌ಬಿಡಬ್ಲ್ಯು ಜಡೇಜ 7 (40ಎ)
ಜಾನಿ ಎಲ್‌ಬಿಡಬ್ಲ್ಯು ಜಡೇಜ 4 (3ಎ, 4X1)
ಸ್ಟೋಕ್ಸ್ ಎಲ್‌ಬಿಡಬ್ಲ್ಯು ಕುಲದೀಪ್ 15 (39ಎ, 4X1)
ಫೋಕ್ಸ್ ಸಿ ಜುರೇಲ್ ಬಿ ಜಡೇಜ 16 (39ಎ,4X2)
ರೆಹಾನ್ ಸಿ ಸಿರಾಜ್ ಬಿ ಕುಲದೀಪ್ 0 (5ಎ)
ಹಾರ್ಟ್ಲಿ ಬಿ ಅಶ್ವಿನ್ 16 (36ಎ, 4X2, 6X1)
ವುಡ್ ಸಿ ಜೈಸ್ವಾಲ್ ಬಿ ಜಡೇಜ 33 (15ಎ, 6X4, 6X 1)
ಆ್ಯಂಡರ್ಸನ್ ಔಟಾಗದೆ 1 (9ಎ)
ಇತರೆ: 12 (ಬೈ 5, ಲೆಗ್‌ಬೈ 4, ನೋಬಾಲ್ 3)
ವಿಕೆಟ್ ಪತನ: 1–15 (ಡೆನ್ ಬಕೆಟ್ 6.1), 2–18 (ಜಾಕ್ ಕ್ರಾಲಿ 8.2), 3–20 (ಓಲಿ ಪೋಪ್ 9.4), 4–28 (ಜಾನಿ ಬೆಸ್ಟೊ 11.1), 5–50 (ಜೋ ರೂಟ್ 21.5), 6–50 (ಬೆನ್ ಸ್ಟೋಕ್ಸ್ 22.5), 7–50 (ರೆಹಾನ್ ಅಹಮದ್ 24.4), 8–82 (ಬೆನ್ ಫೋಕ್ಸ್ 35.5), 9–91 (ಟಾಮ್ ಹಾರ್ಟ್ಲಿ 36.1), 10–122 (ಮಾರ್ಕ್ ವುಡ್ 39.4)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 8–1–18–1, ಮೊಹಮದ್ ಸಿರಾಜ್ 5–2–16–0, ರವೀಂದ್ರ ಜಡೇಜ 12.4–4–41–5, ಕುಲದೀಪ ಯಾದವ್ 8–2–19–2, ರವಿಚಂದ್ರನ್ ಅಶ್ವಿನ್ 6–3–19–1
ಪಂದ್ಯ ಶ್ರೇಷ್ಠ: ರವೀಂದ್ರ ಜಡೇಜ

ಫಲಿತಾಂಶ: ಭಾರತಕ್ಕೆ 434 ರನ್‌ಗಳ ಗೆಲುವು

ಮರಳಿದ ಅಶ್ವಿನ್ ವಿಕೆಟ್ ಗಳಿಕೆ

ತಮ್ಮ ತಾಯಿಯು ಅನಾರೋಗ್ಯದ ಕಾರಣದಿಂದ ಪಂದ್ಯದ ಮೊದಲ ಇನಿಂಗ್ಸ್ ನಡುವೆಯೇ ತವರೂರಿಗೆ ತೆರಳಿದ್ದ ಆರ್. ಅಶ್ವಿನ್ ಭಾನುವಾರ ಮರಳಿದರು.

ಅವರಿಗೆ ದಿನದಾಟದ ಚಹಾ ವಿರಾಮದ ನಂತರ ಕಣಕ್ಕಿಳಿಯುವ ಅವಕಾಶ ನೀಡಲಾಯಿತು. ಅವರು ಆರು ಓವರ್‌ಗಳನ್ನು ಬೌಲಿಂಗ್ ಮಾಡಿ, 1 ವಿಕೆಟ್ ಗಳಿಸಿದರು.

ಅಶ್ವಿನ್ ಅವರ ತಾಯಿಗೆ ಮಿದುಳಿನ ರಕ್ತಸ್ರಾವವಾಗಿತ್ತು. ಅದರಿಂದಾಗಿ ಅವರಿಗೆ ತುರ್ತು ಶಸ್ತ್ರಚಿಕಿತ್ಸೆ ಮಾಡಲಾಯಿತು. ಸದ್ಯ ಅವರ ಆರೋಗ್ಯ ಸುಧಾರಣೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಸುದ್ದಿ ತಿಳಿದಾಕ್ಷಣ ಅಶ್ವಿನ್ ಚೆನ್ನೈಗೆ ತೆರಳಿದ್ದರು.

'ಅಶ್ವಿನ್ ಕೌಟುಂಬಿಕ ಕಾರಣಗಳಿಂದ ತವರಿಗೆ ತೆರಳಿದ್ದರು. ನಾಲ್ಕನೇ ದಿನದಾಟಕ್ಕೆ ಅವರು ಮರಳಿದ್ದಾರೆ' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ರಣಜಿ ಕ್ರಿಕೆಟ್: ಬೃಹತ್ ಮುನ್ನಡೆ ಗಳಿಸಿದ ಕರ್ನಾಟಕ

ಶರತ್, ವೈಶಾಖ ಶತಕದ ಸೊಬಗು

• ಸತೀಶ ಬಿ.

ಹುಬ್ಬಳ್ಳಿ: ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಸೇರಿದ್ದ ಅಭಿಮಾನಿಗಳಿಗೆ ಎಸ್.ಶರತ್ (100) ಮತ್ತು ವೈಶಾಖ ವಿಜಯಕುಮಾರ (103) ನಿರಾಸೆ ಮಾಡಲಿಲ್ಲ. ಇಬ್ಬರೂ ಚೊಚ್ಚಲ ಶತಕದ ಸಂಭ್ರಮ ಆಚರಿಸಿದರು.

ಇವರಿಬ್ಬರ ಅಜೇಯ ಶತಕದ ಬಲದಿಂದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಚಂಡೀಗಢದ ಎದುರು ಕರ್ನಾಟಕ 296 ರನ್‌ಗಳ ದೊಡ್ಡ ಮುನ್ನಡೆ ಗಳಿಸಿತು. ಪಂದ್ಯದ ಮೂರನೇ ದಿನವಾದ ಭಾನುವಾರ ಕರ್ನಾಟಕ 136.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 563 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ಎರಡನೇ ಇನಿಂಗ್ಸ್ ಆರಂಭಿಸಿದ ಚಂಡೀಗಢ ತಂಡ ಉತ್ತಮ ಆರಂಭ ಮಾಡಿತು. ದಿನದಾಟದ ಅಂತ್ಯಕ್ಕೆ 11 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 61 ರನ್ ಗಳಿಸಿದೆ.

ಶಿವಂ ಭಾಂಬ್ರಿ (33), ಅರ್ಸ್ಲಾನ್ ಖಾನ್ (27) ಕ್ರೀಸ್‌ನಲ್ಲಿದ್ದಾರೆ. ಕರ್ನಾಟಕದ ಬಾಕಿ ಚುಕ್ತಾ ಮಾಡಲು ಇನ್ನೂ 235 ರನ್‌ಗಳ ಅವಶ್ಯಕತೆ ಇದೆ.

ಚೆಂದದ ಜತೆಯಾಟ: ಶರತ್ ಮತ್ತು ವೈಶಾಖ ಚೆಂದದ ಜತೆಯಾಟಕ್ಕೆ ಎದುರಾಳಿ ಬೌಲರ್‌ಗಳು ಬಸವಳಿದರು. ಇಬ್ಬರೂ ಆರನೇ ವಿಕೆಟ್ ಪಾಲುದಾರಿಕೆಯಲ್ಲಿ 198 (289) ರನ್ ಕಲೆಹಾಕಿದರು. ಜತೆಯಾಟ ಮುರಿಯಲು ಚಂಡೀಗಢ ತಂಡದ ನಾಯಕ ಮನನ್ ವೋಹ್ರಾ ಬೌಲಿಂಗ್‌ನಲ್ಲಿ ಮಾಡಿದ ಯಾವ ಬದಲಾವಣೆಗಳೂ ಫಲ ನೀಡಲಿಲ್ಲ.

ವೈಯಕ್ತಿಕ 6 ರನ್ ಗಳಿಸಿದ್ದ ವೇಳೆ ಶರತ್ ಅವರಿಗೆ ಜೀವದಾನ ಸಿಕ್ಕಿತು. ಗುರಿಂದರ್ ಸಿಂಗ್ ಹಾಕಿದ 90ನೇ ಓವರ್‌ನ ಕೊನೆಯ ಎಸೆತವನ್ನು ಅವರು ಸ್ವೀಪ್ ಮಾಡಿದರು.

ಸ್ಕ್ವೇರ್‌ಲೆಗ್‌ನಲ್ಲಿದ್ದ ಮನನ್ ವೋಹ್ರಾ ಕ್ಯಾಚ್ ಕೈಚೆಲ್ಲಿದರು. ನಂತರ ಎಚ್ಚರಿಕೆಯಿಂದ ಆಡಿದ ಅವರು, 160 ಎಸೆತಗಳಲ್ಲಿ ಶತಕ ಪೂರೈಸಿದರು. 216 ನಿಮಿಷ ಕ್ರೀಸ್‌ನಲ್ಲಿದ್ದ ಅವರು, ಶತಕ ಗಳಿಸುತ್ತಿದ್ದಂತೆ ಡಿಕ್ಲೇರ್ ಘೋಷಿಸಲಾಯಿತು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಇದು ಅವರ ಮೊದಲ ಶತಕ.

ಶತಕ ಗಳಿಸಿದ ಕರ್ನಾಟಕ ತಂಡದ ವೈಶಾಖ ವಿಜಯಕುಮಾರ್ (ಎಡಬದಿ) ಮತ್ತು ಎಸ್.ಶರತ್ ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಇತ್ತೀಚಿನ ದಿನಗಳಲ್ಲಿ ಬ್ಯಾಟಿಂಗ್‌ನಲ್ಲಿಯೂ ಮಿಂಚುತ್ತಿರುವ ವೇಗಿ ವೈಶಾಖ ವಿಜಯಕುಮಾರ್ ಬಿರುಸಿನ ಆಟವಾಡಿದರು. ವೈಶಾಖ 136 ಎಸೆತಗಳಲ್ಲಿ ತಮ್ಮ ಚೊಚ್ಚಲ ಶತಕ ಗಳಿಸಿ ಸಂಭ್ರಮಿಸಿದರು. ಎರಡು ಆಕರ್ಷಕ ಸಿಕ್ಸರ್ ಸಿಡಿಸಿದರು.

ಶನಿವಾರ 49 ರನ್ ಗಳಿಸಿ ಕ್ರೀಸ್‌ನಲ್ಲಿದ್ದ ಯುವಪ್ರತಿಭೆ ಹಾರ್ದಿಕ್ ರಾಜ್ ಭಾನುವಾರ ಅರ್ಧಶತಕ ಪೂರೈಸಿದರು. ಟೂರ್ನಿಯಲ್ಲಿ ಇದು ಅವರಿಗೆ ಎರಡನೇ ಅರ್ಧಶತಕ. ತಮಿಳುನಾಡು ವಿರುದ್ಧದ ಪಂದ್ಯದಲ್ಲಿಯೂ ಅವರು ಅರ್ಧಶತಕ ಗಳಿಸಿದ್ದರು. ಶತಕದತ್ತ ದಾಪುಗಾಲಿಟ್ಟಿದ್ದ ಹಾರ್ದಿಕ್ (82 ರನ್; 178ಎ, 4X7), ಕರಣ್ ಕೈಲಾ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಮಯಂಕ್ ಸಿಧುಗೆ ಕ್ಯಾಚಿತ್ತರು.

ಮನೀಷ್ ಪಾಂಡೆ ತಮ್ಮ ಖಾತೆಗೆ ಮತ್ತೆ 46 ರನ್ ಸೇರಿಸಿದರು. 148 ರನ್ ಗಳಿಸಿದ್ದಾಗ ಅವರನ್ನು ಕರಣ್ ಕೈಲಾ ಎಲ್‌ಬಿ ಬಲೆಗೆ ಕೆಡವಿದರು. ಹಾರ್ದಿಕ್ ಮತ್ತು ಪಾಂಡೆ ನಾಲ್ಕನೇ ವಿಕೆಟ್ ಜತೆಯಾಟದಲ್ಲಿ 239 (318) ರನ್ ಕಲೆಹಾಕಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಚಂಡೀಗಢ: 106.4 ಓವರ್‌ಗಳಲ್ಲಿ 267. ಕರ್ನಾಟಕ: 136.5 ಓವರ್‌ಗಳಲ್ಲಿ 5ಕ್ಕೆ 563 ಡಿಕ್ಲೇರ್ (ಹಾರ್ದಿಕ್ ರಾಜ್ 82, ಮನೀಷ್ ಪಾಂಡೆ 148, ಎಸ್. ಶರತ್ ಔಟಾಗದೆ 100, ವೈಶಾಖ ವಿಜಯಕುಮಾರ ಔಟಾಗದೆ 103, ಕರಣ್ ಕೈಲಾ 143ಕ್ಕೆ3, ಜಗಜೀತ್ ಸಿಂಗ್ ಸಂಧು 63ಕ್ಕೆ 1, ಹರತೇಜಸ್ವಿ ಕಪೂರ್ 84ಕ್ಕೆ1). ಎರಡನೇ ಇನಿಂಗ್ಸ್: ಚಂಡೀಗಢ: 11 ಓವರ್‌ಗಳಲ್ಲಿ ವಿಕೆಟ್ ನಷ್ಟವಿಷ್ಟಲ್ಲದೆ 61 (ಶಿವಂ ಭಾಂಬ್ರಿ ಬ್ಯಾಟಿಂಗ್ 33, ಅರ್ಸ್ಲಾನ್ ಖಾನ್ ಬ್ಯಾಟಿಂಗ್ 27).

ಸಾರ್ವಕಾಲಿಕ ಐಪಿಎಲ್ ತಂಡಕ್ಕೆ ಧೋನಿ ನಾಯಕ

ನವದೆಹಲಿ (ಪಿಟಿಐ): ದಿಗ್ಗಜ ಮಹೇಂದ್ರಸಿಂಗ್ ಧೋನಿ ಅವರನ್ನು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಸಾರ್ವಕಾಲೀಕ ಶ್ರೇಷ್ಠ ತಂಡದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ.

ಮಾಜಿ ಕ್ರಿಕೆಟಿಗರಾದ ವಾಸೀಂ ಅಕ್ರಂ, ಮ್ಯಾಥ್ಯೂ ಹೇಡನ್, ಟಾಮ್ ಮೂಡಿ ಮತ್ತು ಡೇಲ್ ಸ್ಟೇಯ್ನ್ ಅವರಿದ್ದ ಆಯ್ಕೆ ಸಮಿತಿಯು ಈ ತಂಡ ಆಯ್ಕೆ ಮಾಡಿದೆ.

ಸಮಿತಿಯಲ್ಲಿ 70ಕ್ಕೂ ಹೆಚ್ಚು ಪತ್ರಕರ್ತರೂ ಇದ್ದರು.

ಭಾರತದ ವಿರಾಟ್ ಕೊಹ್ಲಿ ಮತ್ತು ಆಸ್ಟ್ರೇಲಿಯಾದ ಡೇವಿಡ್ ವಾರ್ನರ್ ಅವರನ್ನು ಈ ತಂಡದ ಆರಂಭಿಕ ಬ್ಯಾಟರ್‌ಗಳಾಗಿದ್ದಾರೆ. ವೆಸ್ಟ್ ಇಂಡೀಸ್‌ನ ಸ್ಫೋಟಕ ಬ್ಯಾಟರ್ ಕ್ರಿಸ್ ಗೇಲ್ ಮೂರನೇ ಕ್ರಮಾಂಕದ ಬ್ಯಾಟರ್ ಆಗಿದ್ದಾರೆ.

'ವಿಶ್ವಕಪ್, ಐಪಿಎಲ್, ಐಸಿಸಿ ಚಾಂಪಿಯನ್ಸ್ ಟ್ರೋಫಿಗಳನ್ನು ಜಯಿಸಿರುವ ಧೋನಿಯವರೇ ಈ ತಂಡದ ನಾಯಕತ್ವಕ್ಕೆ ಅತ್ಯಂತ ಸೂಕ್ತ ವ್ಯಕ್ತಿ' ಎಂದು ಸ್ಟಾರ್ ಸ್ಪೋರ್ಟ್ಸ್ ಇನ್‌ಕ್ರೆಡಿಬಲ್ 16 ಆಫ್ ಐಪಿಎಲ್ ಶೋನಲ್ಲಿ ಡೇಲ್ ಸ್ಟೇಯ್ನ್ ಹೇಳಿದರು.

ಧೋನಿ

ತಂಡ: ಮಹೇಂದ್ರಸಿಂಗ್ ಧೋನಿ (ನಾಯಕ), ವಿರಾಟ್ ಕೊಹ್ಲಿ, ಕ್ರಿಸ್ ಗೇಲ್, ಡೇವಿಡ್ ವಾರ್ನರ್, ಸುರೇಶ್ ರೈನಾ, ಎಬಿ ಡಿವಿಲಿಯರ್ಸ್, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ಕೀರನ್ ಪೊಲಾರ್ಡ್, ರಶೀದ್ ಖಾನ್, ಸುನಿಲ್ ನಾರಾಯಣ, ಯಜುವೇಂದ್ರ ಚಾಹಲ್, ಲಸಿತ ಮಾಲಿಂಗ, ಜಸ್‌ಪ್ರೀತ್ ಬೂಮ್ರಾ.

ಕ್ರಿಕೆಟ್ ದಿಗ್ಗಜ ಪ್ರಾಕ್ಟರ್ ಇನ್ನಿಲ್ಲ

ಮೈಕ್ ಪ್ರಾಕ್ಟರ್

ಜೊಹಾನೆಸ್‌ಬರ್ಗ್ (ಪಿಟಿಐ/ಎಎಫ್‌ಪಿ): ದಕ್ಷಿಣ ಆಫ್ರಿಕಾ ಕಂಡ ಅಮೋಘ ಆಲ್‌ರೌಂಡರ್ ಹಾಗೂ ಮಾಜಿ ತರಬೇತುದಾರ ಮೈಕ್ ಪ್ರಾಕ್ಟರ್ (77) ಅವರು ಭಾನುವಾರ ನಿಧನರಾಗಿದ್ದಾರೆ.

ಹೃದ್ರೋಗದಿಂದ ಬಳಲುತ್ತಿದ್ದ ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ನಂತರ ಅವರ ಸ್ಥಿತಿ ಬಿಗಡಾಯಿಸಿ ಪ್ರಜ್ಞಾಹೀನರಾಗಿದ್ದರು ಎಂದು ಪತ್ನಿ ಮರಿನಾ ಪ್ರಾಕ್ಟರ್ ತಿಳಿಸಿದ್ದಾರೆ. ಅವರಿಗೆ ಇಬ್ಬರು ಪುತ್ರಿಯರಿದ್ದಾರೆ.

ಮೈಕ್ ಪ್ರಾಕ್ಟರ್ ಅವರು ವೇಗದ ಬೌಲರ್ ಮತ್ತು ಮಧ್ಯಮ ಕ್ರಮಾಂಕದಲ್ಲಿ ಬಿರುಸಿನ ಹೊಡೆತಗಳ ಬ್ಯಾಟರ್ ಆಗಿದ್ದರು. ಚಾಣಾಕ್ಷ ನಾಯಕರಾಗಿ ಹೆಸರು ಮಾಡಿದ್ದರು. ನಿವೃತ್ತಿ ನಂತರ–ಕೋಚ್, ಆಡಳಿತಗಾರ, ಆಯ್ಕೆಗಾರ, ವೀಕ್ಷಕ ವಿವರಣೆಗಾರ, 2002–08ರವರೆಗೆ ಐಸಿಸಿ ಮ್ಯಾಚ್ ರೆಫ್ರಿಯಾಗಿ ವಿಭಿನ್ನ ಪಾತ್ರಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ಜನಾಂಗೀಯ ತಾರತಮ್ಯ ಕೊನೆಗೊಂಡು ಅಲ್ಲಿನ ತಂಡ 1991ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪುನರಾಗಮನ ಮಾಡಿದ ಬಳಿಕ ಅವರು ರಾಷ್ಟ್ರೀಯ ತಂಡದ ಮೊದಲ ಕೋಚ್ ಆಗಿದ್ದರು.

ವರ್ಣಭೇದ ನೀತಿಯಿಂದ ದೇಶ ಬಹಿಷ್ಕಾರಕ್ಕೆ ಒಳಗಾದ ಕಾರಣ ಅವರ ಕ್ರಿಕೆಟ್ ಜೀವನ ಮೊಟಕುಗೊಂಡಿತ್ತು. ಆಡಲು ಸಿಕ್ಕಿದ್ದು ಬರೇ ಏಳು ಟೆಸ್ಟ್‌ಗಳು ಮಾತ್ರ. ಈ ಪಂದ್ಯಗಳಲ್ಲಿ 15.02 ಸರಾಸರಿಯಲ್ಲಿ 41 ವಿಕೆಟ್‌ಗಳನ್ನು ಪಡೆದಿದ್ದು ಅವರ ಪ್ರತಿಭೆಗೆ ಪುರಾವೆ. ಈ ಟೆಸ್ಟ್ ಪಂದ್ಯಗಳೆಲ್ಲಾ (1966–1970ರ ನಡುವೆ) ಆಸ್ಟ್ರೇಲಿಯಾ ವಿರುದ್ಧ ನಡೆದಿದ್ದು, ದಕ್ಷಿಣ ಆಫ್ರಿಕಾ ಆರು ಪಂದ್ಯಗಳಲ್ಲಿ ಜಯಗಳಿಸಿತ್ತು. ಇನ್ನೊಂದು ಡ್ರಾ ಆಗಿತ್ತು.

ಇಟಲಿಯ ಸ್ಟಿಫಾನೊಗೆ ಸಿಂಗಲ್ಸ್ ಕಿರೀಟ

ಬೆಂಗಳೂರು ಓಪನ್ ಟೆನಿಸ್; ದಕ್ಷಿಣ ಕೊರಿಯಾದ ಸಿಯಾಂಗ್‌ಚಾನ್‌ಗೆ ನಿರಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಛಲದ ಆಟವಾಡಿದ ಇಟಲಿಯ ಸ್ಟಿಫಾನೊ ನೆಪೊಲಿಟಾನೊ ಭಾನುವಾರ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ಸ್ ಟೆನಿಸ್ ಟೂರ್ನಿಯಲ್ಲಿ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ನಡೆದ ಫೈನಲ್‌ನಲ್ಲಿ ಸ್ಟಿಫಾನೊ 4-6, 6-3, 6-3ರಿಂದ ದಕ್ಷಿಣ ಕೊರಿಯಾದ ಸಿಯಾಂಗ್‌ಚಾನ್ ಹಾಂಗ್ ವಿರುದ್ಧ ಜಯಿಸಿದರು.

ವಾರಾಂತ್ಯದ ರಜೆ ದಿನ ಟೆನಿಸ್ ಕಣ್ತುಂಬಿಕೊಳ್ಳಲು ಸೇರಿದ್ದ ಪ್ರೇಕ್ಷಕರನ್ನು ಇಬ್ಬರೂ ಆಟಗಾರರು ನಿರಾಸೆಗೊಳಿಸಲಿಲ್ಲ. ಮೊದಲ ಸೆಟ್‌ನ್‌ನಲ್ಲಿ ಇಬ್ಬರ ಹೋರಾಟವೂ ರೋಚಕವಾಗಿತ್ತು. ಉತ್ತಮ ಸರ್ವ್ ಮತ್ತು ಕ್ರಾಸ್‌ಕೋರ್ಟ್ ರಿಟರ್ನ್‌ಗಳನ್ನು ಆಡಿದ ಸಿಯಾಂಗ್ ಚಾನ್ 6–4ರಿಂದ ಈ ಸೆಟ್‌ನಲ್ಲಿ ಗೆದ್ದರು. ಆದರೆ ಇಟಲಿಯ ಆಟಗಾರ ಚುರುಕಾದ ಆಟ ತೋರಿದರು. ಉತ್ತಮವಾದ ಬ್ಯಾಕ್‌ಹ್ಯಾಂಡ್ ಮತ್ತು ಶರವೇಗದ ರಿಟರ್ನ್‌ಗಳನ್ನು ಆಡಿದ ಅವರು ಹಾಂಗ್‌ಗೆ ತಿರುಗೇಟು ನೀಡಿದರು. ನಂತರದ ಎರಡೂ ಸೆಟ್‌ಗಳಲ್ಲಿ ಪಾರಮ್ಯ ಮೆರೆದರು. 2 ಗಂಟೆ, 23 ನಿಮಿಷಗಳಲ್ಲಿ ಮುಗಿದ ಪಂದ್ಯದಲ್ಲಿ ಸ್ಟಿಫಾನೊ ₹ 15 ಲಕ್ಷ ನಗದು ಪ್ರಶಸ್ತಿ ಗಳಿಸಿದರು. ಜೊತೆಗೆ ಅವರಿಗೆ 100 ರ‍್ಯಾಂಕಿಂಗ್ ಪಾಯಿಂಟ್ಸ್ ಕೂಡ ಅವರ ಖಾತೆ ತೆರೆದವು.

ಡಬಲ್ಸ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಸ್ಥಳೀಯ ಆಟಗಾರ ರೋಹನ್ ಬೋಪಣ್ಣ ಅವರು ವಿಜೇತರಿಗೆ ಪ್ರಶಸ್ತಿ ವಿತರಿಸಿದರು.

ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ಸ್ ಟೂರ್ನಿಯಲ್ಲಿ ಸಿಂಗಲ್ಸ್ ಪ್ರಶಸ್ತಿ ಜಯಿಸಿದ ಇಟಲಿಯ ಸ್ಟಿಫಾನೊ ನೆಪೊಲಿಟಾನೊ ಅವರಿಗೆ ರೋಹನ್ ಬೋಪಣ್ಣ ಟ್ರೋಫಿ ಪ್ರದಾನ ಮಾಡಿದರು –ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಪ್ರೊ ಕಬಡ್ಡಿ: ಬುಲ್ಸ್ ಪರಾಭವ

ಪಂಚಕುಲಾ (ಪಿಟಿಐ) :ಪ್ರಮುಖ ರೇಡರ್ ಅಶು ಮಲಿಕ್ (17 ಅಂಕ) ಅವರ ಚಾಣಾಕ್ಷ ಆಟದಿಂದ ದಬಾಂಗ್ ಡೆಲ್ಲಿ ತಂಡ, ಭಾನುವಾರ ನಡೆದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ವಿರುದ್ಧ 46–38 ರಿಂದ ಗೆಲುವು ದಾಖಲಿಸಿತು.

ಚುರುಕಾದ ದಾಳಿ ನಡೆಸಿದ ಅಶು ಎದುರಾಳಿಗಳನ್ನು ಕಟ್ಟಿ ಹಾಕಿದರು. ಅವರೊಂದಿಗೆ ಯೋಗೇಶ್ ದಹಿಯಾ 8 ಅಂಕ ಗಳಿಸಿದರು. ಆರಂಭದಿಂದಲೂ ಉತ್ತಮ ಆಟವಾಡಿದ ದಬಾಂಗ್ ತಂಡ, ವಿರಾಮದ ಬಳಿಕವೂ ಮೇಲುಗೈ ಸಾಧಿಸಿತು. ಬುಲ್ಸ್ ಪರ ಸುಶೀಲ್ 11 ಅಂಕ ಗಳಿಸಿ ಮಿಂಚಿದರು.

ಮತ್ತೊಂದು ಪಂದ್ಯದಲ್ಲಿ ತಮಿಳ್ ತಲೈವಾಸ್ 74–37 ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಜಯಗಳಿಸಿತು. ತಲೈವಾಸ್ ಪರ ವಿಶಾಲ್ ಚಾಹಲ್ 19, ನರೇಂದ್ರ ಹೋಶಿಯಾರ್ 17 ಅಂಕ ಗಳಿಸಿದರು.

ಕ್ರಿಕೆಟ್‌ಗೆ ವಿದಾಯ..
ರಣಜಿ ಕ್ರಿಕೆಟ್ ಪಂದ್ಯದಲ್ಲಿ ಬಿಹಾರ ವಿರುದ್ಧ ಜಯಗಳಿಸಿದ ಬಳಿಕ ಪಶ್ಚಿಮ ಬಂಗಾಳ ತಂಡದ ನಾಯಕ ಮನೋಜ್ ತಿವಾರಿ ಅವರು ಕೋಲ್ಕತ್ತದ ಈಡನ್ ಗಾರ್ಡನ್ ಪಿಚ್‌ಗೆ ಮುತ್ತಿಕ್ಕಿದರು. ಎಲ್ಲಾ ಮಾದರಿ ಕ್ರಿಕೆಟ್‌ಗೆ ಮನೋಜ್ ತಿವಾರಿ ವಿದಾಯ ಘೋಷಿಸಿದ್ದಾರೆ. ಪಿಟಿಐ ಚಿತ್ರ

VISIT LA MAISON CITROËN SHOWROOM TODAY | 1800 267 1000

111 TOUCHPOINTS ACROSS INDIA

Bengaluru, PPS: Ph. No. 82919 66032 | **Mangalore, Raja:** Ph. No. 91679 85414 | **Mysore, Raja**: Ph. No. 96192 39477 | **Hubli, Kumar:** Ph. No. 91679 85706 | **Vellore, Sarvesh:** Ph. No. 96199 82561 | **Chennai, Ramani:** Ph. No. 88799 84519 | **Pondicherry, Sarvesh:** Ph. No. 96199 82556 | **Madurai, Ramani:** Ph. No. 9500884638 | **Coimbatore, Ramani:** Ph. No. 88799 84527 | **Calicut, EVM:** Ph. No. 82919 65937 | **Kochi, EVM:** Ph. No. 82919 65893 | **Trivandrum, EVM:** Ph. No. 96199 82565 | **Hyderabad, Pride:** Banjara Hills, Ph. No. 82919 66075 | **Nagole:** Ph. No. 73311 51666 | **Vijayawada, Vanil:** Ph No. 96199 82520 | **Visakhapatnam, Bharath:** Ph. No. 82919 65892 | **Trichy, Kuber:** Ph. No. 88799 71219

Scan the QR code to book online

Scan the QR code to connect with us

*T&C Apply. Mid-size SUV segment is defined as a passenger vehicle with OAL > 4300 mm < 4450 mm with ground clearance > 195 mm. Images and illustrations are indicative and for informative purposes only. Actual colour of vehicle and upholstery might differ. Accessories shown and features mentioned may not be a part of standard equipment. #Ex-showroom Price.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

Honda Exclusive Authorised Dealerships: Ananda Honda - BOMMANAHALLI: 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 080-27830234, 9880417779; **City Honda - ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda - DOMLUR:** 49656565, 9342432156; **INDIRANAGAR:** 9844478636; **Dhruvdesh Honda - MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **Planet Honda - RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; **Raja Honda - KORAMANGALA:** 08067329000,9035310055; **Prime Honda - VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda - RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda - HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda - DODDABALLAPURA:** 7022620885; **NELAMANAGALA:** 080-27722333, 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Century Honda - TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda - TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9448214014; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda - BIDADI:** 9945966771, 9164871007; **Springs Honda - KENGERI:** 9513771114; **Nideesh Honda - DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com